ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 6 ಮಂಗಳವಾರ 2026

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 259 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4






ಕರ್ನಾಟಕ ಇತಿಹಾಸದಲ್ಲಿ ಅತಿ ಹೆಚ್ಚುಕಾಲ ಸ್ವಚ್ಛ ಆಡಳಿತ
ಮೂಲಕ ದೀರ್ಘಾವಧಿ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ
ಶ್ರೀ ಸಿದ್ದರಾಮಯ್ಯ
ಸಾಹೇಬರಿಗೆ
ಹೃತ್ಪೂರ್ವಕ ಅಭಿನಂದನೆಗಳು
ಉಳಿದ ಎರಡೂವರೆ ವರ್ಷವೂ
ಜನಪರ ಆಡಳಿತದೊಂದಿಗೆ
ಕರ್ನಾಟಕದ ಕಣ್ಮಣಿಯಾಗಲಿ
ಎಂಬುದು ನಮ್ಮೆಲ್ಲರ
"ಮಹದಾಸೆ"
ಶುಭಕೋರುವವರು
ರಾಕೇಶ್ ಪಾಪಣ್ಣ
ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು
ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ
ಪ್ರಕಟಣೆ : ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ
ಕಾರ್ಯಕರ್ತರುಗಳು ಹಾಗೂ ಮುಖಂಡರುಗಳು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 6 ಮಂಗಳವಾರ 2026

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 259 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ನಕ್ಕರೆ ಅದೇ ಸ್ವರ್ಗ

ಗುಂಡ : ಪಪ್ಪಾ, ನೀನು ಎಲ್ಲಿದ್ದೀಯಾ?
ಗುಂಡನ ತಂದೆ : ನಾನು ಆಫೀಸ್‌ನಲ್ಲಿದ್ದೀನಿ ಏನಾಯ್ತು?
ಗುಂಡ : ಏನಿಲ್ಲ, ಪಕ್ಕದ ಮನೆ ಆಂಟಿ ಕಾಣಿಸ್ತಿಲ್ವಂತೆ.
ಅಮ್ಮ ನಿನಗೆ ಫೋನ್ ಮಾಡಕ್ಕೇ ಹೇಳಿದ್ರು!

ಮೈಸೂರು ಮಿತ್ರ

ಮಂಗಳವಾರ, ಜನವರಿ 6, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ತನ್ನೆಡೆಗೆ ಎಸೆಯುವ ಕಲ್ಲುಗಳಿಂದಲೇ ಭವಿಷ್ಯಕ್ಕೆ ಬುನಾದಿ ಹಾಕಿಕೊಳ್ಳುವವನು ನಿಜವಾದ ಯಶಸ್ವಿ ವ್ಯಕ್ತಿ. – ಡೆವಿಡ್ ಬ್ರಿಂಕ್ಲೆ

ವೇದ ಸುಳ್ಳಾದರೂ { ತಾಯಿ ಬೇಕು ಇಲ್ಲವೇ
ಗಾದೆ ಸುಳ್ಳಾಗದು { ಬಾಯಿ ಬೇಕು.

ನಿಮ್ಮ ಪತ್ರಗಳು

ಸಫಾರಿ ಮರು ಆರಂಭ ಬೇಡ

ಮಾನ್ಯರೆ,

ಕಳೆದ 3–4 ತಿಂಗಳಲ್ಲಿ ಹುಲಿ, ಚಿರತೆಗಳ ಉಪಟಳ ಹೆಚ್ಚಾಗಿದ್ದು, ಮೈಸೂರು ವಿಭಾಗದಲ್ಲಿ ಹಲವಾರು ಮಂದಿ ಪ್ರಾಣಿಗಳ ದಾಳಿಗೆ ಒಳಗಾಗಿ ಸಾವನ್ನಪ್ಪಿದ್ದಾರೆ. ಇದರಿಂದ ಮಾನವ–ಪ್ರಾಣಿ ಸಂಘರ್ಷ ತಡೆಗಟ್ಟುವ ಸಲುವಾಗಿ ರೈತ ಸಂಘದ ಮುಖಂಡರು, ಗ್ರಾಮಸ್ಥರು, ನಾಗರಹೊಳೆ, ಬಂಡೀಪುರ ಅರಣ್ಯ ಧಾಮ ವ್ಯಾಪ್ತಿಯಲ್ಲಿ ಸಫಾರಿ ನಿಲ್ಲಿಸಬೇಕು ಎಂದು ತೀವ್ರ ಹೋರಾಟ ನಡೆಸಿದ ಕಾರಣ ಸಫಾರಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು. ಆದರೆ ನಿಲ್ಲಿಸಿದ ಬೆನ್ನಲ್ಲೇ ಸಫಾರಿ ಪುನರಾರಂಭಿಸಬೇಕು ಎನ್ನುವ ಒತ್ತಡ ಕೇಳಿ ಬಂದಿತ್ತು. ಆದರೆ ರೈತ ಸಂಘದವರು, ಸಾರ್ವಜನಿಕರು ಇದನ್ನು ಬಲವಾಗಿ ವಿರೋಧಿಸಿದ್ದರು. ಇದೀಗ ಒಂದೆರಡು ತಿಂಗಳು ಕಳೆಯುವಷ್ಟರಲ್ಲೇ, ಪ್ರವಾಸಿ ಲಾಬಿಗೆ ಮಣಿದು ಮುಖ್ಯಮಂತ್ರಿಗಳು, ತಜ್ಞರ ಸಲಹೆ ಪಡೆದು ಸಫಾರಿಯನ್ನು ಮತ್ತೆ ಆರಂಭಿಸುವಂತೆ ಅರಣ್ಯ ಸಚಿವರಿಗೆ ಸೂಚನೆ ನೀಡಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಪ್ರಾಣಿಗಳು ಕಾಡು ದಾಟಿ ಊರುಗಳ ಜಮೀನುಗಳಿಗೆ ಬರುತ್ತಿರುವುದಕ್ಕೆ ಅರಣ್ಯ ಇಲಾಖೆ ನಡೆಸುತ್ತಿರುವ ಈ ಸಫಾರಿಯೂ ಒಂದು ಕಾರಣ ಎನ್ನುವುದು ಬಲವಾದ ಕಾರಣಗಳಲ್ಲೊಂದು. ಹೀಗಿರುವಾಗ ಅದರ ಸಾಧಕ–ಬಾಧಕಗಳನ್ನು ತಿಳಿಯದೇ ಏಕಾ ಏಕಿ ಮತ್ತೆ ಸಫಾರಿ ಆರಂಭಕ್ಕೆ ಸೂಚನೆ ನೀಡಿರುವುದು ಸರಿಯಲ್ಲ.

ಸಫಾರಿ ನಿಲ್ಲಿಸಿರುವುದು ಸರ್ಕಾರಕ್ಕೆ ನಷ್ಟವಾಗಿದೆ. ಹೋಟೆಲ್, ರೆಸಾರ್ಟ್‌ಗಳಿಗೆ ನಷ್ಟವಾಗಿದೆ. ಸಫಾರಿ ಗುತ್ತಿಗೆ ನೌಕರರಿಗೆ ವೇತನ ಕಡಿತಗೊಂಡಿದೆ. ಸಫಾರಿ ವಾಹನಗಳು, ವಾಹನ ಚಾಲಕರು, ಗೈಡ್‌ಗಳು ಕೆಲಸವಿಲ್ಲದೆ ಇದ್ದಾರೆ ಎನ್ನುವುದು ಸಮಂಜಸ ಕಾರಣವಲ್ಲ. ಹಿಂದೆ ಒಂದೆರಡು ಸಫಾರಿ ವಾಹನಗಳಿದ್ದದ್ದು ಈಗ ಒಂದೊಂದು ಧಾಮದಲ್ಲಿ 15–20ಕ್ಕೂ ಹೆಚ್ಚು ವಾಹನಗಳಿವೆ. ಇವರು ಇಷ್ಟೂ ವಾಹನಗಳಲ್ಲಿ ಏಕ ಕಾಲಕ್ಕೆ, ಸಿಬ್ಬಂದಿ, ಗೈಡ್, ನೂರಾರು ಪ್ರವಾಸಿಗರು ಜಾತ್ರೆಗೆ ಹೋಗುವವರಂತೆ, ಹೀಗೆ ರೈಲು ಬೋಗಿಗಳಂತೆ ಅರಣ್ಯ ಪ್ರದೇಶದ 10–12 ಕಿಮೀ ಒಳಗೆ ಹೋಗುವುದು. ಅಲ್ಲಿ ಹುಲಿ, ಆನೆ ಸಿಕ್ಕಿದರೆ ಅಲ್ಲಿ ನಿಂತು ಫೋಟೋ, ವೀಡಿಯೊ ಮಾಡುವುದು, ಅವುಗಳ ಹತ್ತಿರಕ್ಕೆ ಹೋಗುವುದು ಅವುಗಳ ಏಕಾಗ್ರತೆಗೆ ಭಂಗ ತರುವುದಿಲ್ಲವೇ? ಸಂರಕ್ಷಿತ ಅರಣ್ಯ ಪ್ರದೇಶ ಎಂದರೆ ಅದು ಮಾನವ ಪ್ರವೇಶ ನಿರ್ಬಂಧವಿರುವ ಪ್ರದೇಶವೆಂದೇ ಅರ್ಥ. ಹೀಗಿರುವಾಗ ಇಂತಹ ನೂರಾರು ವಾಹನಗಳು ಬೆಳಗ್ಗಿನಿಂದ ಸಂಜೆವರೆಗೂ ಹಲವು ಬಾರಿ ಅರಣ್ಯ ಪ್ರವೇಶ ಮಾಡಿದರೆ ಇದು ಸಂರಕ್ಷಿತ ಅರಣ್ಯ ಪ್ರದೇಶ ಹೇಗಾಗುತ್ತದೆ? ಅರಣ್ಯ ಪ್ರದೇಶದ ಗ್ರಾಮಗಳ ಜನರು ತಮ್ಮ ಜಾನುವಾರುಗಳನ್ನು ಮೇಯಿಸಲು ಅರಣ್ಯ ಪ್ರದೇಶ ಪ್ರವೇಶಿಸಿದರೆ ಅದು ಅಪರಾಧ! ಆದರೆ ಅರಣ್ಯ ಇಲಾಖೆಯವರೇ ನೂರಾರು ವಾಹನಗಳ ಜೊತೆ ನೂರಾರು ಜನರನ್ನು ಅರಣ್ಯದೊಳಗೆ ಕರೆದುಕೊಂಡು ಹೋದರೆ ಯಾವ ಅಪರಾಧವೂ ಇಲ್ಲ. ಇದು ಸರ್ಕಾರ, ಅರಣ್ಯ ಇಲಾಖೆ ಅರಣ್ಯಧಾಮ ಎಂದು ಮಾಡಿ, ಆದಾಯ ಕಂಡು ಕೊಳ್ಳುವ ಮಾರ್ಗವಾಗಿದೆ ಎನ್ನುವುದು ವಿಪರ್ಯಾಸ. ರಜಾ ದಿನಗಳಲ್ಲಿ ಮೋಜು ಮಸ್ತಿ ಮಾಡಲು ಬರುವ ನಗರ ಪ್ರದೇಶಗಳ ಮಂದಿ, ಪ್ರಾಣಿಗಳನ್ನು ನೋಡಲೇಬೇಕು ಎಂದರೆ ನಗರಗಳಲ್ಲೇ ಇರುವ ಪ್ರಾಣಿ ಸಂಗ್ರಹಾಲಯಗಳಿಗೆ ಹೋಗಲಿ. ಪ್ರವಾಸವೇ ಬೇಕು ಎಂದರೆ ಕಾಡನ್ನು ಬಿಟ್ಟು ನೂರಾರು ಪ್ರವಾಸಿ ಸ್ಥಳಗಳಿವೆ ಅಲ್ಲಿಗೆ ಹೋಗಲಿ. ಸರ್ಕಾರ ಸಫಾರಿಗೆ ಮತ್ತೆ ಅನುಮತಿ ನೀಡದಿರಲಿ. **–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.**

ಕುರಿಮಂಡಿ ಸರ್ಕಲ್ ರಸ್ತೆ ಮೇಲೆ ತ್ಯಾಜ್ಯ ನೀರು



ಮಾನ್ಯರೆ,

ಮೈಸೂರಿನ ಕೆಸರೆ ಕುರಿಮಂಡಿ ಸರ್ಕಲ್‌ನಲ್ಲಿ ಕೆಲವು ಮನೆಗಳಿಂದ ಬಳಸಿದ ತ್ಯಾಜ್ಯ ನೀರು ಸೀದಾ ಬೇಕರಿ ಬಳಿಯಿರುವ ಮುಖ್ಯರಸ್ತೆಗೆ ಹರಿಯುತ್ತಿದೆ. ಇದರಿಂದ ತ್ಯಾಜ್ಯ ನೀರು ನಿಂತು ಸೊಳ್ಳೆಗಳಿಗೆ ಆವಾಸ ಸ್ಥಾನವಾಗಿದೆ. ಜನರಿಗೆ ಹಾಗೂ ಜಾನುವಾರುಗಳಿಗೆ ರೋಗಗಳು ಬರುವ ಸಾಧ್ಯತೆಗಳಿವೆ. ಇದರಿಂದ ರಸ್ತೆಯೂ ಹಾಳಾಗಿ, ಜನರ ಹಾಗೂ ವಾಹನ ಸಂಚಾರಕ್ಕೂ ಸಂಚಕಾರವಾಗಿದೆ. ಜನಪ್ರತಿನಿಧಿಗಳಾಗಲೀ, ಸಂಬಂಧಪಟ್ಟ ವಾರ್ಡಿನ ನಗರಸಭಾ ಸದಸ್ಯರಾಗಲೀ, ಆರೋಗ್ಯ ಇಲಾಖೆಯವರಾಗಲೀ ಇತ್ತ ಗಮನಹರಿಸಿಲ್ಲ. ಸಂಬಂಧಪಟ್ಟವರು ದಯವಿಟ್ಟು ಇದರ ಬಗ್ಗೆ ಗಮನಹರಿಸಿ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

–ಗೋಪಿನಾಥ್, ಕುರಿಮಂಡಿ, ಕೆಸರೆ, ಮೈಸೂರು.

ಖಾಲಿ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಿ

ಮಾನ್ಯರೆ,

ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಸುಮಾರು 24,300 ಹುದ್ದೆಗಳ ಭರ್ತಿಗೆ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹವಾದರೂ ಈ ನೇಮಕಾತಿ ಪ್ರಕ್ರಿಯೆಯು 2026ರ ಆರಂಭದಲ್ಲೇ ಚಾಲನೆಗೆ ತರುವುದು ಅತ್ಯಗತ್ಯವಾಗಿದೆ. ಏಕೆಂದರೆ ಸ್ವಂತ ಊರು ಬಿಟ್ಟು, ನಗರಗಳಲ್ಲಿ ಸಣ್ಣ ಬಾಡಿಗೆ ರೂಮುಗಳಲ್ಲಿ ಹಸಿವು–ನಿದ್ದೆ ಮರೆತು, ತಂದೆ–ತಾಯಿಯರ ಕಷ್ಟದ ಹಣದಲ್ಲಿ ಪುಸ್ತಕಗಳನ್ನು ಖರೀದಿಸಿ ಹಗಲಿರುಳು ಓದುತ್ತಿರುವ ಲಕ್ಷಾಂತರ ಅಭ್ಯರ್ಥಿಗಳ ಶ್ರಮ ಅಸಾಧಾರಣವಾದುದು. ದಿನ ಕಳೆದಂತೆ ಹೆಚ್ಚುತ್ತಿರುವ ವಯೋಮಿತಿ ಕೇವಲ ಅಂಕಿ–ಅಂಶವಲ್ಲ. ಅದು ಸಾವಿರಾರು ಪ್ರತಿಭಾವಂತರ ಬದುಕಿನ ಗಡುವು ಮತ್ತು ವರ್ಷಗಟ್ಟಲೇ ಅವರ ಕುಟುಂಬಗಳು ಕಂಡ ಆಶೋತ್ತರಗಳ ಪ್ರಶ್ನೆಯಾಗಿದೆ.

ಆಡಳಿತ ಮಂಡಳಿಗಳು ನೇಮಕಾತಿ ವಿಳಂಬದಿಂದಾಗಿ ಮಾನಸಿಕ ಒತ್ತಡಕ್ಕೊಳಗಾಗಿ ಅರ್ಹತೆಯನ್ನೇ ಕಳೆದುಕೊಳ್ಳುವ ಭೀತಿಯಲ್ಲಿರುವ ಈ ವಿದ್ಯಾರ್ಥಿಗಳ ಸಂಕಷ್ಟವನ್ನು ಅರ್ಥೈಸಿಕೊಂಡು ತಕ್ಷಣವೇ ಅಧಿಸೂಚನೆ ಹೊರಡಿಸಬೇಕೆಂದು ವಿನಂತಿಸುತ್ತೇನೆ. ಒಂದು ವೇಳೆ ಅನಿವಾರ್ಯ ಕಾರಣಗಳಿಂದ ಸರ್ಕಾರಿ ಉದ್ಯೋಗ ದೊರೆಯದಿದ್ದರೂ ಅಭ್ಯರ್ಥಿಗಳು ಹತಾಶರಾಗಬಾರದು. ನೀವು ಕಲಿತ ವಿದ್ಯೆಗೆ ಆಧುನಿಕ ಕೌಶಲ್ಯಗಳನ್ನು ಸೇರಿಸಿಕೊಂಡರೆ, ಸ್ವಂತ ಉದ್ಯೋಗ ಮಾಡುವ ಮೂಲಕ ಹತ್ತಾರು ಜನರಿಗೆ ನೀವೇ ಕೆಲಸ ನೀಡಬಹುದು.

– ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ದ್ವೇಷ ಭಾಷಣಕ್ಕೆ ತಪ್ಪು ಮದ್ದು!

ರಾಜ್ಯಗಳನ್ನೇ ತೆಗೆದುಕೊಳ್ಳಿ ಇಲ್ಲ ಕೇಂದ್ರವನ್ನೇ ತೆಗೆದುಕೊಳ್ಳಿ, ಎಲ್ಲಾ ಕಡೆ ಈಗ ಕಾನೂನುಗಳನ್ನು ರೂಪಿಸುವುದು ಒಂದು ವಿವೇಚನಾರಹಿತ ಲೆಕ್ಕಾಚಾರವಾಗಿಬಿಟ್ಟಿದೆ.

ನಿಮ್ಮ ಬಳಿ ಲೆಕ್ಕ ಇದ್ದರೆ, ನೀವು ಹಳೆಯ ಮಸೂದೆಗಳನ್ನೆಲ್ಲಾ ಒಮ್ಮೆ ನೆನಪಿಸಿಕೊಳ್ಳಿ. ಚರ್ಚೆ ಮಾಡುವುದು ನಿಮಗೆ ಬಿಟ್ಟಿದ್ದು. ಆದರೆ ವಿವೇಚನೆಗೆ ಮಾತ್ರ ವಿನಾಯಿತಿಯೇ ಇಲ್ಲ.

ಕರ್ನಾಟಕದಲ್ಲಿ ಮಂಡಿಸಲಾದ 'ದ್ವೇಷ ಭಾಷಣ ಮಸೂದೆ' ಇದಕ್ಕೆ ಸ್ಪಷ್ಟ ಉದಾಹರಣೆ. ಬಿಜೆಪಿ ವಿಸ್ತೃತ ಚರ್ಚೆಗೆ ಬೇಡಿಕೆ ಇಟ್ಟು ಒತ್ತಾಯಿಸಿದರೂ, ಮಸೂದೆಯನ್ನು ಯಾವ ಚರ್ಚೆಗೂ ಅವಕಾಶವಿಲ್ಲದಂತೆ ಅಂಗೀಕರಿಸಲಾಯಿತು.

ಇದು ಕೇವಲ ಆಡಳಿತ ಮತ್ತು ವಿರೋಧ ಪಕ್ಷದ ನೈತಿಕ ಜಿದ್ದಾಜಿದ್ದಿನಂತೆ ಕಾಣುತ್ತಿಲ್ಲ. ಆದರೆ ಇದು ಇಬ್ಬರ ರಾಜಕೀಯ ಬೇಜವಾಬ್ದಾರಿಯನ್ನು ಸೂಚಿಸುತ್ತದೆ.

ವಿರೋಧ ಪಕ್ಷದಲ್ಲಿರುವ ಬಿಜೆಪಿ, ಮಸೂದೆಯನ್ನು ವಿರೋಧಿಸಲೇಬೇಕೆಂದು ವಿರೋಧಿಸಿತೇ ವಿನಃ ಮಸೂದೆ ಏಕೆ ಅಪಾಯಕಾರಿ, ಹೇಗೆ ಇದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುತ್ತದೆ. ಹೇಗೆ ಇದರ ದುರುಪಯೋಗ ಆಗಬಹುದು ಇಲ್ಲವೆ ಇದನ್ನು ಯಾವ ತಿದ್ದುಪಡಿಗಳೊಂದಿಗೆ ಜಾರಿ ಮಾಡಬಹುದು ಎನ್ನುವ ಬಗ್ಗೆ ಒಂದು ಪತ್ರಿಕಾಗೋಷ್ಠಿ ಕರೆದು ಜನರಿಗೆ ವಿವರಿಸುವ ಗೋಜಿಗೂ ಹೋಗಲಿಲ್ಲ.

ಜನಸಾಮಾನ್ಯರಿಗೆ ಈ ಮಸೂದೆಯ ಬಗ್ಗೆ ಸರಿಯಾದ ತಿಳುವಳಿಕೆ ಕೊಡುವ ಯತ್ನವನ್ನೇ ಬಿಜೆಪಿ ಮಾಡಲಿಲ್ಲ. ಏಕಿರಬಹುದು?

ಮುಂದೊಂದು ದಿನ ಎಂದಾದರೂ ತಾನು ಅಧಿಕಾರಕ್ಕೆ ಬಂದೇ ಬರುತ್ತೇನೆ. ಆಗ ಇದೇ ಮಸೂದೆಯನ್ನು ಮುಂದೆ ಇಟ್ಟುಕೊಂಡು ಪತ್ರಕರ್ತರ, ವ್ಯಂಗ್ಯಚಿತ್ರಕಾರರ, ಲೇಖಕರ ಮತ್ತು ತನಗೆ ಸರಿ ಎನಿಸದ ಟೀಕಾಕಾರರನ್ನು ಮಟ್ಟ ಹಾಕಬಹುದು ಎಂದಿರಬಹುದೆ?

ಈ ಮಸೂದೆಯಲ್ಲಿ ತುಷ್ಟೀಕರಣದ ಪ್ರಯತ್ನವೂ ಇದೆ ಎಂದೆನಿಸುತ್ತದೆ. ಗೃಹಮಂತ್ರಿಗಳು ಈ ಮಸೂದೆಯನ್ನು ಸಮರ್ಥಿಸುತ್ತಾ 'ವಿಶೇಷ ಸಮುದಾಯ'ವನ್ನು ರಕ್ಷಿಸಲು ದ್ವೇಷಭರಿತ ಅಪರಾಧಕ್ಕೆ ಸರಿಯಾದ ವ್ಯಾಖ್ಯಾನದ ಅಗತ್ಯವಿದೆ ಎಂದರು.

ಗೃಹಮಂತ್ರಿಗಳ ಈ ಮಾತನ್ನು ಕೇಳಿದಾಗ, ಈ ಮಸೂದೆ ನಿಜಕ್ಕೂ ದ್ವೇಷವನ್ನು ಕಡಿಮೆ ಮಾಡುವುದಕ್ಕೋ ಅಥವಾ ವೋಟ್ ಬ್ಯಾಂಕ್ ಅನ್ನು ರಕ್ಷಿಸಿಕೊಳ್ಳುವುದಕ್ಕೋ ಎಂಬ ಅನುಮಾನ ಮೂಡುವುದು ಸಹಜ.

ಸರ್ಕಾರ ಈ ಮಸೂದೆಯನ್ನು ನಿಜಕ್ಕೂ ಪ್ರಾಮಾಣಿಕವಾಗಿ ಎಲ್ಲರ ಒಳಿತಿಗಾಗಿಯೇ ತರಲು ಬಯಸಿದೆ ಎಂದಾದರೆ, ತನ್ನನ್ನೇ ಒಂದಷ್ಟು ಪ್ರಶ್ನೆಗಳನ್ನು ಕೇಳಿ ಕೊಳ್ಳಬೇಕಿದೆ. ರಕ್ಷಣೆ ನೀಡುವ ಅಂಶಗಳೇನಿವೆ?

ಆ ಪ್ರಶ್ನೆಗಳೇನೆಂದರೆ... ಮಸೂದೆಯನ್ನು ಗುರಾಣಿಯಾಗಿ ಬಳಸಿಕೊಂಡು ಯಾವುದೇ ಸಮುದಾಯವನ್ನು ಗುರಿಯಾಗಿಸಿ ಬ್ಲಾಕ್ಮೇಲ್ ಅಥವಾ ಶೋಷಣೆ ಮಾಡುವ ಸಾಧ್ಯತೆ ಇದೆಯೇ? ದ್ವೇಷಭರಿತ ದೂರುಗಳಿಗಾಗಲಿ, ತಪ್ಪು ಮಾಹಿತಿಗಳಿಗಾಗಲಿ ಶಿಕ್ಷೆ ಏನು?

ಅಚ್ಚರಿ ಏನೆಂದರೆ, 'ಅಪರಾಧ' ಯಾವುದು ಎಂದು ಸರಿಯಾಗಿ ವ್ಯಾಖ್ಯಾನಿಸದೆಯೇ ಸರ್ಕಾರ ಶಿಕ್ಷೆಯನ್ನು ನಿರ್ಧರಿಸಿಬಿಟ್ಟಿದೆ !

ದ್ವೇಷ ಭಾಷಣವನ್ನು ವ್ಯಾಖ್ಯಾನಿಸುತ್ತಾ, 'ಒಂದು ಸಮುದಾಯದ ಅಥವಾ ವ್ಯಕ್ತಿಯ ಮೇಲೆ ಹಲ್ಲೆ, ದ್ವೇಷ, ಜಿದ್ದು, ಹಗೆತನ ಅಥವಾ ಸಾಮರಸ್ಯ ಇಲ್ಲದಿರುವ ಹಾಗೆ ನಡೆದುಕೊಳ್ಳುವುದು' ಎಂದು ಸರ್ಕಾರ ಹೇಳುತ್ತದೆ.

ಆದರೆ ಇವ್ಯಾವೂ ಕಾನೂನಾತ್ಮಕವಾದ ವಿಷಯವಲ್ಲ. ಇವೆಲ್ಲಾ ಕೇವಲ ಭಾವನಾತ್ಮಕ ಅಂಶಗಳು. ಅಸಾಮರಸ್ಯ, ದ್ವೇಷ, ಹಗೆತನಗಳನ್ನು ಅಳೆಯಲು ಮಾನದಂಡಗಳೇನು?

ಒಂದು ಸಮುದಾಯಕ್ಕೆ ಸೇರಿದ ಒಬ್ಬ ರಾಜಕೀಯ ವ್ಯಕ್ತಿಯ ಕುರಿತಾಗಿ ವ್ಯಂಗ್ಯಚಿತ್ರ ಬರೆದರೆ, ಅದು ಅವನ ಸಮುದಾಯವನ್ನೇ ದ್ವೇಷಿಸಿದಂತೆಯೇ?

ಒಂದು ಯೋಜನೆಯ ಯುಕ್ತಾಯುಕ್ತತೆ ಬಗ್ಗೆ ಹೇಳುತ್ತ, ಯಾವನಾದರೂ ಪತ್ರಕರ್ತ ಅದನ್ನು ಹಣಕಾಸಿನ ಸರಿಯಾದ ಲೆಕ್ಕಾಚಾರವಿಲ್ಲದ ಯೋಜನೆ ಎಂದರೆ ಅದು ಹಗೆತನವೇ? ಯಾರಾದರೂ ಇತಿಹಾಸ ತಜ್ಞ ಚಾಲ್ತಿಯಲ್ಲಿರುವ ಯಾವುದಾದರೊಂದು ವಾದವನ್ನು ಅಲ್ಲಗಳೆದರೆ ಅಥವಾ ಪ್ರಶ್ನಿಸಿದರೆ ಅದು ಶಾಂತಿ ಕದಡುವ ಯತ್ನವೇ?



> ❝ ನಾವೆಲ್ಲರೂ ಇಂದು ಧ್ರುವಗಳಾಗಿಬಿಟ್ಟಿದ್ದೇವೆ. ಇಂದು ನಮ್ಮ ಕೈಲಿರುವ ಪ್ರತಿ ಫೋನು ಧ್ವನಿವರ್ಧಕದಂತಾಗಿಬಿಟ್ಟಿದೆ ಮತ್ತು ದ್ವೇಷವನ್ನು ಹರಡುವುದು ಬಹು ಸುಲಭವಾಗಿಬಿಟ್ಟಿದೆ. ದುರ್ಬಲ ಸಮುದಾಯಗಳಿಗೆ ಇಂದು ರಕ್ಷಣೆ ಬೇಕಿದೆ ಮತ್ತು ಸಾರ್ವಜನಿಕ ಭಾಷಣಗಳಿಗೆ ತಡೆಗೋಡೆ ಬೇಕಾಗಿದೆ. ಆದರೆ, ಮಾತನ್ನು ನಾಗರಿಕವಾಗಿಸುವ ಒಂದು ಕಾನೂನಾತ್ಮಕ ಪ್ರಯತ್ನವೇ ಅನಾಗರಿಕ ರೀತಿಯಲ್ಲಿ ಜಾರಿಯಾಗುವ ಯತ್ನದಲ್ಲಿರುವುದು ಹೇಯ. ಹಾಗಾಗಲೇಬಾರದು.

ಮಸೂದೆಯು, ಮಾತು ಮತ್ತು ಹಿಂಸಾಕೃತ್ಯದ ನಡುವೆ ಸ್ಪಷ್ಟ ಸಂಬಂಧ ಇರಲೇಬೇಕೆಂದೇನೂ ಇಲ್ಲ ಎಂದು ಪ್ರತಿಪಾದಿಸುವಂತೆ ತೋರುತ್ತದೆ. ದುರದೃಷ್ಟಕರ ಸಂಗತಿ ಎಂದರೆ, ಕಾನೂನು ವ್ಯಾಪಕ ರೀತಿಯಲ್ಲಿ ತಡೆಗಟ್ಟುವ ಅಧಿಕಾರವನ್ನು ನೀಡುತ್ತದೆ.

ಒಬ್ಬ ಮನುಷ್ಯ, 'ಅಪರಾಧ' ಮಾಡಬಹುದು ಎಂದೆನಿಸಿದರೆ ಪೊಲೀಸರು ಕ್ರಮಕೈಗೊಳ್ಳಬಹುದು ಎಂದಿದೆ. ಮತ್ತು ಈ ಅಪರಾಧಗಳು ಜಾಮೀನುರಹಿತ ಮತ್ತು ಶಿಕ್ಷಾರ್ಹ ಅಪರಾಧ ಎಂದಿದೆ.

ಮುಂದುವರೆದು, ಈ ಮಸೂದೆ ದ್ವೇಷ ಭಾಷಣಕ್ಕೆ ಏಳು ವರ್ಷಗಳ ಕಠಿಣ ಸಜೆ ಎನ್ನುತ್ತದೆ. ಆದರೆ, ಕಾನೂನಾತ್ಮಕವಾದ ಸ್ಪಷ್ಟತೆ ಇಲ್ಲದ ಯಾವ ಕಠಿಣ ಸಜೆಯೂ ಸಮರ್ಥನೀಯವಲ್ಲ. ಇದು ಶೋಷಣೆ ಮತ್ತು ನಿಂದನೆಯಾಗುತ್ತದೆ.

ದ್ವೇಷ ಭಾಷಣಕ್ಕೆ ವಾರಂಟ್‌ರಹಿತ ಬಂಧನಕ್ಕೆ ಅವಕಾಶ ಕಲ್ಪಿಸಿರುವುದು ಯಾವುದೇ ಪ್ರಜಾ ಪ್ರಭುತ್ವದಲ್ಲಿ ಅಸಾಮಾನ್ಯ ವೆನ್ನಿಸುವ ವಿದ್ಯಮಾನ. ಸರಿಯಾದ ವ್ಯಾಖ್ಯೆ ಇಲ್ಲದ ಅಪರಾಧಕ್ಕೆ ಇದು ಒಂದು ಸಾಧನವಾಗಿ ಬಿಡುವ ಸಾಧ್ಯತೆಯೇ ಹೆಚ್ಚು.

ಕಾನೂನಾತ್ಮಕವಾದ ಟೀಕೆ ಮತ್ತು ಅಪರಾಧಿ ವರ್ತನೆಯ ನಡುವೆ ಸರಿಯಾದ ಹಾಗೂ ಸ್ಪಷ್ಟವಾದ ಗೆರೆ ಇರಬೇಕು. ಮಸೂದೆಯಲ್ಲಿನ ಗೊಂದಲ ಮತ್ತು ಅಸ್ಪಷ್ಟತೆ ದುರಂತಕ್ಕೆ ಎಡೆಮಾಡಿಕೊಡಬಹುದು. ರಾಜಕೀಯವಾಗಿ ಪ್ರಬಲರಾಗಿರುವವರನ್ನು ಇದು ಇನ್ನಷ್ಟು ಶಕ್ತಗೊಳಿಸುವ ಸಾಧ್ಯತೆ ಇದೆ.

ಈ ಮಸೂದೆ ರಾಜ್ಯಪಾಲರ ಅಂಗೀಕಾರದೊಂದಿಗೆ, ಒಂದು ವೇಳೆ ಈ ಎಲ್ಲಾ ಅಸ್ಪಷ್ಟತೆಯೊಂದಿಗೆ ಜಾರಿಯಾದರೆ, ಖಂಡಿತವಾಗಿ ನಮ್ಮ ನ್ಯಾಯಾಲಯಗಳ ಕಾರ್ಯನಿರ್ವಹಣೆ ಕಷ್ಟಸಾಧ್ಯವಾಗುತ್ತದೆ.

ಏಕೆಂದರೆ... ಇಂದು ಯಾರನ್ನಾದರೂ, ಯಾರಾದರೂ ನೋಯಿಸಬಹುದು. ಮತ್ತು ಆ 'ಭಾವನೆ' ಈ ಮಸೂದೆಯ ನೆರವಿನಿಂದ ಆಯುಧವಾಗಿ ಪರಿವರ್ತಿತವಾಗಿಬಿಡುತ್ತದೆ. ನಮ್ಮ ನ್ಯಾಯಾಂಗ ಇಂತಹ ಕ್ಷುಲ್ಲಕ ನೀತಿಗಳಿಂದ ಬಾಧಿತವಾಗುತ್ತದೆ ಎನ್ನಿಸುವುದಿಲ್ಲವೇ?

ಹಾಗಂತ ಭಾರತಕ್ಕೆ ಒಂದು ಗಟ್ಟಿಯಾದ ದ್ವೇಷ ಭಾಷಣ ನೀತಿ ಬೇಡವೇ? ಖಂಡಿತವಾಗಿ ಬೇಕು.

ನಾವೆಲ್ಲರೂ ಇಂದು ಧ್ರುವಗಳಾಗಿಬಿಟ್ಟಿದ್ದೇವೆ. ಇಂದು ನಮ್ಮ ಕೈಲಿರುವ ಪ್ರತಿ ಫೋನು ಧ್ವನಿವರ್ಧಕದಂತಾಗಿಬಿಟ್ಟಿದೆ ಮತ್ತು ದ್ವೇಷವನ್ನು ಹರಡುವುದು ಬಹು ಸುಲಭವಾಗಿಬಿಟ್ಟಿದೆ. ದುರ್ಬಲ ಸಮುದಾಯಗಳಿಗೆ ಇಂದು ರಕ್ಷಣೆ ಬೇಕಿದೆ ಮತ್ತು ಸಾರ್ವಜನಿಕ ಭಾಷಣಗಳಿಗೆ ತಡೆಗೋಡೆಬೇಕಾಗಿದೆ.

ಆದರೆ, ಮಾತನ್ನು ನಾಗರಿಕವಾಗಿಸುವ ಒಂದು ಕಾನೂನಾತ್ಮಕ ಪ್ರಯತ್ನವೇ ಅನಾಗರಿಕ ರೀತಿಯಲ್ಲಿ ಜಾರಿಯಾಗುವ ಯತ್ನದಲ್ಲಿರುವುದು ಹೇಯ. ಹಾಗಾಗಲೇಬಾರದು.

ಅವಸರದ ಶಾಸನ ಮಂಡನೆ, ಚರ್ಚೆಗೆ ನಿರಾಕರಣೆ, ಅಸ್ಪಷ್ಟ ನಿಬಂಧನೆಗಳ ರೂಪಿಸುವಿಕೆ ಮತ್ತು ಮುಂಬರುವ ಸರ್ಕಾರಗಳನ್ನು ಮಾತ್ರ ಪ್ರಾಮಾಣಿಕ ಮತ್ತು ಪರೋಪಕಾರಿಯಾಗಿರುವಂತೆ ಅಪೇಕ್ಷಿಸುವುದು ಮೂರ್ಖತನ.

ದ್ವೇಷ ಭಾಷಣಕ್ಕೆ ಕಡಿವಾಣ ಹಾಕಿ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವುದೇ ಗುರಿಯಾಗಿದ್ದಲ್ಲಿ, ಆ ಪ್ರಕ್ರಿಯೆಯನ್ನು ಮೊದಲು ಸರಿಯಾಗಿ ಮಾಡಬೇಕು. ಇಲ್ಲದಿದ್ದಲ್ಲಿ ಇಂದಿನ ಪರಿಹಾರ ನಾಳಿನವರಿಗೆ ಆಯುಧವಾದೀತು.

ಕಾನೂನುಗಳು ನೆನಪಿನಲ್ಲಿರುವುದು, ರೂಪಿಸಿದವರ ಮನೋಧರ್ಮದ ಆಧಾರದಲ್ಲಲ್ಲ. ಬದಲಿಗೆ ಅದನ್ನು ಬಳಸಿದವರು ಹೇಗೆ ಶೋಷಿಸಿದರು ಎಂಬುದರ ಮೇಲೆ. ಈ ಮಸೂದೆಯಂತೂ ಖಂಡಿತವಾಗಿ ಶೋಷಣೆಯ ಅಸ್ತ್ರವಾಗಲಿದೆ.

ಈ ದ್ವೇಷ ಭಾಷಣ ಮಸೂದೆ, ದ್ವೇಷವನ್ನು ನೀಗಲು ನೀಡುತ್ತಿರುವ ತಪ್ಪು ಔಷಧ. ಇದರ ತಿದ್ದುಪಡಿ ಆಗಲೇಬೇಕು. ಇಲ್ಲವಾದಲ್ಲಿ, ರೋಹಿಂಟನ್ ಮಿಸ್ತ್ರಿ ಹೇಳಿದ ಹಾಗೆ, **'ಭಾರತದಲ್ಲಿ ಕಾನೂನುಗಳು ವಿಸರ್ಜಿಸಿದ ಮೂತ್ರವಿದ್ದ ಹಾಗೆ; ಅದು ಸೇರುವುದು ಚರಂಡಿಯನ್ನ'** ಎನ್ನುವ ಹಾಗಾಗುತ್ತದೆ.

ಕೊನೆಯದಾಗಿ...;

1. ಒಂದು ದೊಡ್ಡ ಪ್ರಶ್ನೆಯಿದೆ. ಟೀಕಿಸುವುದು ಜಾಮೀನುರಹಿತ ಅಪರಾಧ ಎಂದು ಕಾನೂನನ್ನು ತರುವ ಪ್ರಯತ್ನ ಜಾರಿಯಲ್ಲಿ ಇರುವಾಗ, ವಾಕ್ ಸ್ವಾತಂತ್ರ್ಯಕ್ಕಾಗಿ ಯಾವಾಗಲೂ ಕೂಗಾಡುವ 'ಹೋರಾಟಗಾರ'ರೆಲ್ಲಿ?

ಏನು ಗೊತ್ತೇ, ಅವರು ಬೆಂಬಲಿಸುವ ಸರ್ವಾಧಿಕಾರಿ ಕಾನೂನನ್ನು ಜಾರಿ ಮಾಡಿದರೆ ಅದು ಪ್ರಜಾಪ್ರಭುತ್ವದ ರಕ್ಷಣೆ. ಬೇರೆಯವರು ಬೆಂಬಲಿಸುವ ಸರ್ವಾಧಿಕಾರಿ ಯಾವುದೇ ಕಾನೂನನ್ನು ಜಾರಿ ಮಾಡಲೆತ್ನಿಸಿದರೆ ಅದು ಪ್ರಜಾಪ್ರಭುತ್ವದ ಕಗ್ಗೊಲೆ!

2. ಭಾರತದ ರಾಜಕೀಯ ಒಂದು ಜಾತಿವ್ಯವಸ್ಥೆ ಇದ್ದಂತೆ. ರಾಜಕಾರಣಿಗಳು ತಮ್ಮ ಜಾತಿಯವರನ್ನು ಜೈಲಿಗೆ ತಳ್ಳುವುದಿಲ್ಲ.

ಬಿಜೆಪಿ 2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದದ್ದು, ಕಾಂಗ್ರೆಸ್‌ನ ಭ್ರಷ್ಟಚಾರವನ್ನು ಟೀಕಿಸುತ್ತಲೇ. ಆದರೆ, ಅವರ 12 ವರ್ಷಗಳ ಅಧಿಕಾರಾವಧಿಯಲ್ಲಿ ಯಾವನಾದರೂ ಒಬ್ಬ ಕಾಂಗ್ರೆಸ್ ಮುಖಂಡ ಜೈಲಿಗೆ ಹೋಗಿದ್ದಾನೆಯೇ? ಇಲ್ಲ!

ಕರ್ನಾಟಕದಲ್ಲಿಯೂ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿದದ್ದು ಬಿಜೆಪಿಯ ಭ್ರಷ್ಟಾಚಾರವನ್ನು ಟೀಕಿಸುತ್ತಲೇ, ಅದೂ 'ಪೇಸಿಎಂ' ಎಂದು ಘೋಷಣೆ ಕೂಗುತ್ತಾ. ಈಗ ಎರಡೂವರೆ ವರ್ಷಗಳಾದವು. ಯಾವ ಬಿಜೆಪಿ ಮುಖಂಡ ಜೈಲಿಗೆ ಹೋಗಿದ್ದಾನೆ? ಯಾರೂ ಇಲ್ಲ!

ಹಾಗಾಗಿ ಈ ಮಸೂದೆ ರಾಜಕಾರಣಿಗಳಿಂದ ಒಂದು ಅಸ್ತ್ರವಾಗಿಯಷ್ಟೇ ಬಳಸಲ್ಪಡುತ್ತದೆ. ತಮ್ಮನ್ನು ಅಂದರೆ ತನ್ನ 'ರಾಜಕೀಯ ಜಾತಿ'ಗೆ ಸೇರಿದವರನ್ನು–ಅದೇ ಕರ್ನಾಟಕದಲ್ಲಿ ಇಂದು ಶಕ್ತಿಶಾಲಿ ಜಾತಿ. ಗುರಿಯಾಗಿಸುವವರನ್ನು ಗುರಿಯಾಗಿಸಿ ಹಣಿಯುವುದಕ್ಕೆ ಈ ಮಸೂದೆ ಉಪಯೋಗಕ್ಕೆ ಬರಲಿದೆ.

Email: vikram@starofmysore.com

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜನವರಿ 6 ಮಂಗಳವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 259 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಸಿದ್ದರಾಮಯ್ಯ ರಾಜ್ಯದ ಅತೀ ದೀರ್ಘಾವಧಿಯ ಮುಖ್ಯಮಂತ್ರಿ

ಇಂದಿಗೆ ದೇವರಾಜ ಅರಸು ದಾಖಲೆಯ ಸರಿಗಟ್ಟಿದ ಭಾಗ್ಯವಿದಾತ

ಮೈಸೂರು, ಜ.5(ಎಸ್‌ಬಿಡಿ)– ಮೈಸೂರು ತಾಲೂಕು ಸಿದ್ದರಾಮನಹುಂಡಿ ಸಿದ್ದರಾಮಯ್ಯ ಅವರು ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ದಾಖಲೆ ನಿರ್ಮಿಸಿದ್ದಾರೆ. ಅತೀ ಹೆಚ್ಚು ಅವಧಿಗೆ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ ದಾಖಲೆ ಸಿದ್ದರಾಮಯ್ಯ ಅವರ ಹೆಸರಿನಲ್ಲಿ ಮಂಗಳವಾರ(ಜ.6) ದಾಖಲಾಗಲಿದೆ.

ಮೈಸೂರಿನವರೇ ಆದ ದಿ. ಡಿ.ದೇವರಾಜ ಅರಸು ಅವರು, 7 ವರ್ಷ 239 ದಿನಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸುವ ಮೂಲಕ ರಾಜ್ಯದಲ್ಲಿ ಅತೀ ಹೆಚ್ಚು ದಿನ ಮುಖ್ಯಮಂತ್ರಿಯಾಗಿರುವ ದಾಖಲೆ ಬರೆದಿದ್ದರು. ಈ ದಾಖಲೆಯನ್ನು ಸಿದ್ದರಾಮಯ್ಯ ಅವರು ಮಂಗಳವಾರ



ಡಿ. ದೇವರಾಜ ಅರಸು
2792 ದಿನ



ಸಿದ್ದರಾಮಯ್ಯ
2792* ದಿನ

ಸರಿಗಟ್ಟಲಿದ್ದು, ಮರುದಿನ ಅರಸು ಅವರ ದಾಖಲೆ ಮುರಿಯಲಿದ್ದಾರೆ. ಸಿದ್ದರಾಮಯ್ಯ ಅವರು 2013 ರಲ್ಲಿ ಮುಖ್ಯಮಂತ್ರಿಯಾಗಿ ಐದು ವರ್ಷ ಪೂರೈಸುವುದರೊಂದಿಗೆ 1829 ದಿನ ಆಡಳಿತ ನಡೆಸಿದ್ದರು.

ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ(2023ರ ಮೇ 20) ನಾಳೆ (ಜ.6)ಗೆ 963 ದಿನಗಳಾಗಲಿವೆ. ಇದರೊಂದಿಗೆ ಒಟ್ಟು 2792 ದಿನ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ ಡಿ.ದೇವರಾಜಅರಸು ಅವರ ದಾಖಲೆಯನ್ನು ಸರಿಗಟ್ಟಲಿದ್ದಾರೆ. ಅತೀ ಹೆಚ್ಚು ಬಾರಿ (16) ಬಜೆಟ್ ಮಂಡಿಸಿರುವುದು ಸಿದ್ದರಾಮಯ್ಯನವರ ಮತ್ತೊಂದು ದಾಖಲೆ. ಇನ್ನು ಐದು ವರ್ಷ ಆಡಳಿತಾವಧಿಯನ್ನು ಪೂರ್ಣಗೊಳಿಸಿದ ■10ನೇ ಪುಟಕ್ಕೆ

ಕಾಂಗ್ರೆಸ್‌ನ ಕೊನೆ ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ಜ.5(ಕೆಎಂಶಿ)– ಕರ್ನಾಟಕದಲ್ಲಿ ದೀರ್ಘ ಕಾಲ ಆಡಳಿತ ನಡೆಸಿದ್ದೇನೆ ಎಂಬುದಾಗಿ ಕೊಚ್ಚಿಕೊಳ್ಳುತ್ತಿರುವ ಸಿದ್ದರಾಮಯ್ಯ ಆಡಳಿತ ವೈಖರಿ ಗಮನಿಸಿದರೆ ದಾಖಲೆಗೆ ಮಣ್ಣು ಹೊಯ್ದುಕೊಳ್ಳಬೇಕು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವ್ಯಂಗ್ಯವಾಡಿದ್ದಾರೆ.



ದೇವರಾಜ ಅರಸ್ ದಾಖಲೆ ಮುರಿಯುವ ಕಾಂಗ್ರೆಸ್‌ನ ಕೊನೆ ಮುಖ್ಯಮಂತ್ರಿ ಇವರಾಗಲಿದ್ದಾರೆ. ಆ ಪಕ್ಷಕ್ಕೆ ರಾಜ್ಯದಲ್ಲಿ ಇದು ಕೊನೆ ಆಡಳಿತ. ಮುಂದಿನ ಚುನಾವಣೆಯಲ್ಲೂ ನಾವೇ ಗೆಲ್ಲುತ್ತೇವೆ ಎಂಬುದಾಗಿ ಹೇಳಿಕೊಳ್ಳುವ ಇವರಿಗೆ ಮತದಾರರು ಸರಿಯಾಗಿ ಬುದ್ಧಿ ಕಲಿಸಲಿದ್ದಾರೆ.

ಕಳೆದ ಎರಡೂವರೆ ವರ್ಷಗಳ ಆಡಳಿತ ಇತಿಹಾಸ ಸೇರುವಂತಹ ಕೆಟ್ಟ ಆಡಳಿತವಾಗಿದೆ, ಭ್ರಷ್ಟಾಚಾರ, ಕೊಲೆ, ಸುಲಿಗೆ, ಡ್ರಗ್ಸ್ ಮಾಫಿಯಾ, ಮಾರ್ಯಾದಾ ಹತ್ಯೆ ಪ್ರಕರಣಗಳು ನಿರಂತರವಾಗಿವೆ. ಇದನ್ನು ಹತ್ತಿಕ್ಕಲು ಸಾಧ್ಯವಾಗದೆ, ದಾಖಲೆಗೋಸ್ಕರ ಸಿದ್ದ ರಾಮಯ್ಯ ಆಡಳಿತ ನಡೆಸುತ್ತಿರುವಂತಿದೆ. ಅಧಿಕಾರಿಗಳು ಇವರ ಆಡಳಿತದಲ್ಲಿ ಗುಲಾಮರಾಗಿ ಕೆಲಸ ಮಾಡುತ್ತಿ ದ್ದಾರೆ. ಸ್ವಾತಂತ್ರ್ಯ ಎಂಬುದೇ ಇಲ್ಲ, ಬ್ಯಾಟರಿ ಹಾಕಿ ಹುಡುಕಿದರೂ ಒಬ್ಬ ಒಳ್ಳೆ ಅಧಿಕಾರಿ ಸಿಗುವುದಿಲ್ಲ ಎಂದು ಟೀಕಿಸಿದರು.

ಸಿಬಿಐ ತನಿಖೆ ಆಗಲಿ: ಬಳ್ಳಾರಿಯಲ್ಲಿ ಮಾಜಿ ಸಚಿವ ಜನಾರ್ಧನ ರೆಡ್ಡಿ ಮನೆ ಮುಂದೆ ನಡೆದ ಗುಂಪು ಘರ್ಷಣೆಗೆ ಸಂಬಂಧಿಸಿದಂತೆ ತುರ್ತು ಸುದ್ದಿಗೋಷ್ಠಿ ನಡೆಸಿದ ಕುಮಾರಸ್ವಾಮಿ, ಇಡೀ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು. ಘಟನಾ ಸ್ಥಳದಲ್ಲಿದ್ದ ಐಜಿ, ಹೆಚ್ಚುವರಿ ಎಸ್‌ಪಿ ಹಾಗೂ ಡಿವೈಎಸ್‌ಪಿ ಅವರನ್ನು ತಕ್ಷಣವೇ ಅಮಾನತು ಮಾಡಬೇಕು ಎಂದು ಆಗ್ರಹಿಸಿದರು. ■10ನೇ ಪುಟಕ್ಕೆ





ಜನರ ಆಶೀರ್ವಾದದಿಂದ ದಾಖಲೆ ನಿರ್ಮಾಣ

- ಮುಖ್ಯಮಂತ್ರಿ ಸಿದ್ದರಾಮಯ್ಯ ಹರ್ಷದ ಪ್ರತಿಕ್ರಿಯೆ
- ಮುಂದೆ ನನ್ನ ದಾಖಲೆಯನ್ನೂ ಯಾರಾದರೂ ಮುರಿಯಬಹುದು
- ಸಂಕ್ರಾಂತಿ ನಂತರ ಬಜೆಟ್ ಸಿದ್ಧತೆ; ಸಂಪುಟ ಪುನರ್ರಚನೆ ಸಂಬಂಧ ರಾಹುಲ್ ಗಾಂಧಿ ಭೇಟಿ

ಮೈಸೂರು, ಜ.5(ಎಂಟಿವೈ)– ರಾಜ್ಯದ ಜನರ ಆಶೀರ್ವಾದದಿಂದಾಗಿ ಸುದೀರ್ಘ ಅವಧಿಯಲ್ಲಿ ಆಡಳಿತ ನಡೆಸಿದ ಮುಖ್ಯಮಂತ್ರಿ ಎಂಬ ದಾಖಲೆ ನಿರ್ಮಾಣವಾಗುತ್ತಿದೆ. ದಾಖಲೆಗಳು ಮುರಿಯಲೆಂದೆ ನಿರ್ಮಾಣವಾಗಲಿದ್ದು ಮುಂದಿನ ದಿನಗಳಲ್ಲಿ ನನ್ನ ಹೆಸರಲ್ಲಿರುವ ದಾಖಲೆಯನ್ನು ಯಾರಾದರೂ ಮುರಿಯಲೂಬಹುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದ್ದಾರೆ.

ವಿವಿಧ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ವಿಶೇಷ ವಿಮಾನದಲ್ಲಿ ಬೆಂಗಳೂರಿಂದ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಸಿಎಂ ಸಿದ್ದರಾಮಯ್ಯ ಪತ್ರಕರ್ತರೊಂದಿಗೆ ಮಾತನಾಡಿ, ಕರ್ನಾಟಕದಲ್ಲಿ ಹೆಚ್ಚು ದಿನ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದ ಮುಖ್ಯಮಂತ್ರಿಗಳಲ್ಲಿ ಅಗ್ರಪಂಕ್ತಿಗೇರುವ ದಾಖಲೆ ನಿರ್ಮಿಸುತ್ತಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು. ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜ ಅರಸ್ ಅವರ ಹೆಸರಿನಲ್ಲಿದ್ದ ■10ನೇ ಪುಟಕ್ಕೆ



ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಕರ್ತರೊಂದಿಗೆ ಮಾತನಾಡಿದರು.

ಹುಲಿ ಗಣತಿ ಆರಂಭದ ದಿನವೇ ಮೈಸೂರು ವಿಮಾನ ನಿಲ್ದಾಣದಲ್ಲಿ ಹುಲಿ ಪ್ರತ್ಯಕ್ಷ

- 100ಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿಯಿಂದ ಕೂಂಬಿಂಗ್ ಕಾರ್ಯಾಚರಣೆ
- ವಿಮಾನ ನಿಲ್ದಾಣ ಸಿಬ್ಬಂದಿಯಿಂದ ಹುಲಿ ಓಡಾಟದ ಚಿತ್ರೀಕರಣ
- ಅರಣ್ಯ ಇಲಾಖೆ ಡ್ರೋನ್ ಕಣ್ಣಿಗೆ ಕಂಡ ಹಂದಿಗಳ ಹಿಂಡು

ಮೈಸೂರು, ಜ.5(ಎಂಟಿವೈ)– ದೇಶದಾದ್ಯಂತ ಆರನೇ ಆವೃತ್ತಿಯ ರಾಷ್ಟ್ರೀಯ ಹುಲಿ ಗಣತಿ ಆರಂಭವಾದ ದಿನವೇ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಹುಲಿಯೊಂದು ಪ್ರತ್ಯಕ್ಷವಾಗಿದ್ದು, ಸೋಮವಾರ ಬೆಳಗ್ಗೆ 100ಕ್ಕೂ ಹೆಚ್ಚು ಸಿಬ್ಬಂದಿ ಕೂಂಬಿಂಗ್ ಕಾರ್ಯಾಚರಣೆ ನಡೆಸಿದರಾದರೂ ಹುಲಿ ಸುಳಿವು ಪತ್ತೆಯಾಗಲಿಲ್ಲ.

ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಕಳೆದ ರಾತ್ರಿ ಎಂದಿನಂತೆ ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿ ಗಸ್ತು ತಿರುಗುತ್ತಿದ್ದಾಗ ವಿಮಾನ ನಿಲ್ದಾಣದ ರಸ್ತೆಯಲ್ಲಿ ಹುಲಿ ಹೋಗುತ್ತಿರುವುದನ್ನು ಕಂಡಿದ್ದಾರೆ. ಆರಂಭದಲ್ಲಿ ಚಿರತೆ ಅಥವಾ ಯಾವುದೋ ಪ್ರಾಣಿ ಇರಬಹುದೆಂದು ಭಾವಿಸಿದ ಸಿಬ್ಬಂದಿ ಸಮೀಪಕ್ಕೆ ವಾಹನದಲ್ಲಿ ಹೋದಾಗ ರಸ್ತೆ ಬದಿ ಹೋಗುತ್ತಿರುವುದು ಹುಲಿಯೆಂದು ಖಚಿತವಾಗಿದೆ. ಗಸ್ತು ಸಿಬ್ಬಂದಿ ತಮ್ಮ ಮೊಬೈಲ್‌ನಲ್ಲಿ ಅದನ್ನು ಚಿತ್ರೀಕರಿಸಿದ್ದಾರೆ. 19 ಸೆಕೆಂಡ್‌ಗಳ ವಿಡಿಯೋದಲ್ಲಿ ಹುಲಿ ವಿಮಾನ ನಿಲ್ದಾಣದ ರಸ್ತೆಯಲ್ಲಿ ಅತ್ತಿಂದಿತ್ತ, ■10ನೇ ಪುಟಕ್ಕೆ



ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಹುಲಿ ಪತ್ತೆಗಾಗಿ ಕೂಂಬಿಂಗ್ ನಡೆಸುತ್ತಿರುವುದು.

ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ಪ್ರಕರಣ; ಮೃತರ ಕುಟುಂಬಗಳಿಗೆ 5 ಲಕ್ಷ ಪರಿಹಾರ

ಮೈಸೂರು ಅರಮನೆಯ ಜಯಮಾರ್ತಾಂಡ ದ್ವಾರದ ಬಳಿ ಡಿ.25ರಂದು ಸಂಜೆ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ಇಬ್ಬರು ಮಹಿಳೆಯರು ಹಾಗೂ ಬಲೂನು ಮಾರಾಟಗಾರ ಸೇರಿದಂತೆ ಮೂವರು ಮೃತಪಟ್ಟಿದ್ದರು. ಇಂದು ಮೈಸೂರಿಗೆ ಆಗಮಿಸಿದ ಸಿಎಂ ಸಿದ್ದರಾಮಯ್ಯ ಅವರು ಸ್ಫೋಟ ಪ್ರಕರಣದಲ್ಲಿ ಮೃತಪಟ್ಟವರಿಗೆ 5 ಲಕ್ಷ ರೂ. ಪರಿಹಾರ ಘೋಷಿಸಿದರು.

2028ರ ವಿಧಾನಸಭಾ ಚುನಾವಣೆಗೆ ಅಖಾಡ ಅಣಿ...!

ನಾನು ಚಾಮರಾಜ ಕ್ಷೇತ್ರದಿಂದ ಸ್ಪರ್ಧೆ ಬಯಸಿದ್ದೇನೆ



ಮಾಜಿ ಸಂಸದ ಪ್ರತಾಪ್ ಸಿಂಹ ಘೋಷಣೆ

- ರಾಷ್ಟ್ರ ರಾಜಕಾರಣದಿಂದ ರಾಜ್ಯ ರಾಜಕಾರಣಕ್ಕೆ ಬರಬೇಕಿದೆ
- ಚಾಮರಾಜ ಕ್ಷೇತ್ರವನ್ನು ಮಾದರಿ ಕ್ಷೇತ್ರವಾಗಿ ಮಾಡುವಾಸೆ
- ಎಂಪಿ ಆಗಿದ್ದಾಗ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದೇನೆ
- ಇಲ್ಲಿನ ಮತದಾರರು ಅಭಿವೃದ್ಧಿ ನೋಡುತ್ತಾರೆಯೇ ಹೊರತು ಹಣವನ್ನಲ್ಲ

ಮೈಸೂರು, ಜ.5(ಬಿಎಲ್‌ಯು)– ರಾಷ್ಟ್ರ ರಾಜಕಾರಣದಿಂದ ಈಗ ರಾಜ್ಯ ರಾಜಕಾರಣಕ್ಕೆ ಬಂದಿದ್ದು, ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಮೈಸೂರು ಚಾಮರಾಜ ಕ್ಷೇತ್ರದಿಂದ ಸ್ಪರ್ಧಿಸುತ್ತೇನೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಘೋಷಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೇಂದ್ರ ರಾಜಕಾರಣ ಮುಗಿದ ನಂತರ ರಾಜ್ಯ ರಾಜಕಾರಣಕ್ಕೆ ಬರುವುದು ಸಹಜ ಅಲ್ಲವೇ? ಎಂದು ಪ್ರಶ್ನಿಸಿದರು. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಎಲ್ಲಾ ದೃಷ್ಟಿಯಿಂದಲೂ ಚಾಮರಾಜ ಕ್ಷೇತ್ರ ನನಗೆ ಅನುಕೂಲಕರವಾಗಿದೆ. ಈ ಹಿನ್ನೆಲೆಯಲ್ಲಿ ಚಾಮರಾಜ ಕ್ಷೇತ್ರವನ್ನು ನಾನು ಆಯ್ಕೆ ಮಾಡಿಕೊಂಡಿದ್ದೇನೆ ಎಂದು ಹೇಳಿದರು.

ಈ ಹಿಂದೆ ಹೆಚ್.ಎಸ್.ಶಂಕರಲಿಂಗೇಗೌಡರು ಬಿಜೆಪಿಯಿಂದ ನಾಲ್ಕು ಬಾರಿ ಈ ಕ್ಷೇತ್ರದಿಂದಲೇ ಆಯ್ಕೆಯಾಗಿದ್ದರು. ಇದರಿಂದ ಚಾಮರಾಜ ಕ್ಷೇತ್ರ ಬಿಜೆಪಿಯ ಭದ್ರ ಕೋಟೆಯಾಗಿದೆ. ಈ ಹಿನ್ನೆಲೆಯಲ್ಲಿ ಇಲ್ಲಿಂದಲೇ ನಾನು ಕೂಡ ಚಟುವಟಿಕೆ ಆರಂಭಿಸಿದ್ದೇನೆ ಎಂದು ಪ್ರತಾಪ್ ಸಿಂಹ ತಿಳಿಸಿದರು.

ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪ್ರತಾಪ್ ಸಿಂಹ, ಚಾಮರಾಜ ಕ್ಷೇತ್ರದಲ್ಲಿ ಹಣದ ಲಕೋಟೆಗಳನ್ನು ಹಂಚಿಕೆ ಮಾಡಿ ಚುನಾವಣೆಯಲ್ಲಿ ಗೆಲ್ಲುವ ಶಾಸಕರ ಅಗತ್ಯವಿಲ್ಲ. ಅಷ್ಟೆ ಅಲ್ಲದೆ ಜನರನ್ನು ನಿರ್ಲಕ್ಷಿಸಿ ತನ್ನ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರ ಕಲ್ಯಾಣಕ್ಕಾಗಿ ಮಾತ್ರ ಕೆಲಸ ಮಾಡುವ ಶಾಸಕರ ಅಗತ್ಯ ಕೂಡ ಇಲ್ಲ ಎಂದು ಅಭಿಪ್ರಾಯಪಟ್ಟರು. ಇಡೀ ಚಾಮರಾಜ ಕ್ಷೇತ್ರವನ್ನು ತನ್ನ ಕುಟುಂಬವೆಂದು ಪರಿಗಣಿಸಿ ಅಭಿವೃದ್ಧಿ ಮಾಡುವ ಅಗತ್ಯವಿದೆ. ಅಭಿವೃದ್ಧಿಯ ನಿರಂತರತೆಯನ್ನು ಕಾಯ್ದುಕೊಂಡು ಸತತ 4 ರಿಂದ 5 ಬಾರಿ ಶಾಸಕರನ್ನು ಆಯ್ಕೆ ಮಾಡಲು ಚಾಮರಾಜ ಕ್ಷೇತ್ರದ ಜನರು ಬಯಸಿದ್ದಾರೆ. ಇದಕ್ಕೆ ಶಂಕರಲಿಂಗೇಗೌಡರೇ ಸ್ಪಷ್ಟ ನಿದರ್ಶನ. ಅಭಿವೃದ್ಧಿ ಮಾಡುವ ಶಾಸಕರನ್ನು ನಿರಂತರವಾಗಿ ಗೆಲ್ಲಿಸುವ ಮನೋಭಾವವುಳ್ಳ ಈ ಕ್ಷೇತ್ರದ ಮತದಾರರು ಬದಲಾವಣೆ ಬಯಸುವುದಿಲ್ಲ ಎಂದು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ■10ನೇ ಪುಟಕ್ಕೆ

> "ಹಣದ ಪ್ಯಾಕೆಟ್ ಕೊಟ್ಟು ಚಾಮರಾಜ ಕ್ಷೇತ್ರದಲ್ಲಿ ಗೆಲ್ಲಲು ಸಾಧ್ಯವಿಲ್ಲ. ಪ್ರಜ್ಞಾವಂತರಾದ ಈ ಕ್ಷೇತ್ರದ ಮತದಾರರು ಅಭಿವೃದ್ಧಿ ನೋಡಿ ಪ್ರೀತಿ ತೋರಿಸುತ್ತಾರೆ. ಒಕ್ಕಲಿಗ ಸಮುದಾಯದವರು ಹೆಚ್ಚಾಗಿದ್ದಾರೆಂದು ನಾನು ಈ ಕ್ಷೇತ್ರ ಆಯ್ಕೆ ಮಾಡಿಕೊಂಡಿಲ್ಲ. ಈ ಕ್ಷೇತ್ರದಲ್ಲಿ ಬುದ್ಧಿವಂತ ಮತದಾರರಿದ್ದಾರೆ. ಅಳೆದು, ತೂಗಿ ಜನಪ್ರತಿನಿಧಿಯನ್ನು ಆಯ್ಕೆ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ನಾನು ಚಾಮರಾಜ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದೇನೆ.

ವಲಸಿಗರಿಗೆ ಮನೆ ಕೊಟ್ಟು ಗಂಡಾಂತರ ತರುತ್ತಿದ್ದಾರೆ

ಕೋಗಿಲು ಬಡಾವಣೆಯ ಬಾಂಗ್ಲಾದೇಶದ ವಲಸಿಗರಿಗೆ ಮನೆ ಕೊಟ್ಟು ಭವಿಷ್ಯದಲ್ಲಿ ಕರ್ನಾಟಕಕ್ಕೆ ಗಂಡಾಂತರ ತರುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಆತಂಕ ವ್ಯಕ್ತಪಡಿಸಿದರು.

ಇವರಿಗೆ ಮನೆ ಕೊಡುವ ಮೊದಲು ತಾವು ಆಯ್ಕೆಗೊಂಡಿರುವ ವರುಣ ಕ್ಷೇತ್ರದ ಸೂರಿಲ್ಲದವರಿಗೆ ನಿವೇಶನ ಕೊಡಿ ಎಂದು ಪ್ರತಾಪ್ ಸಿಂಹ ಅವರು ಸಿದ್ದರಾಮಯ್ಯ ಅವರಿಗೆ ಸಲಹೆ ನೀಡಿದರು. ಅಕ್ರಮವಾಗಿ ಬಾಂಗ್ಲಾದೇಶದಿಂದ ಬಂದವರು ಕೋಗಿಲು ಬಡಾವಣೆಯಲ್ಲಿ ವಾಸವಿದ್ದರು. ಹೀಗಿರುವಾಗ ವಲಸಿಗರಿಗೆ ಏಕೆ ಮನೆ ಕೊಡುತ್ತೀರಾ ಎಂದು ಕೇಳಿದ ಪ್ರತಾಪ್ ಸಿಂಹ ಅವರು, ಇವತ್ತು ಮನೆ ಕೊಡುವ ನೀವು ನಾಳೆ ಮತದಾರರ ಪಟ್ಟಿಯಲ್ಲಿ ಅವರ ಹೆಸರು ನಮೂದಿಸಿ ಮತದಾನ ಹಕ್ಕು ನೀಡುವ ಯೋಜನೆ ರೂಪಿಸಿದ್ದೀರಾ ಎಂದು ಪ್ರಶ್ನಿಸಿದರು.



ಆದಿವಾಸಿ ಸಮುದಾಯಗಳ ಯುವ ಜನತೆಯೊಂದಿಗೆ ಕಾರ್ಯಾಗಾರ

ಆದಿವಾಸಿಗಳಿಗೆ ಪೌಷ್ಟಿಕಾಂಶಯುಕ್ತ ಆಹಾರ ಸೇವನೆ ಅರಿವು ಮೂಡಿಸಿ; ಅಧಿಕಾರಿಗಳಿಗೆ ಸಚಿವ ಸತೀಶ್ ಜಾರಕಿಹೊಳಿ ಸಲಹೆ



ಪಿವಿಟಿಜಿ-ಅರಣ್ಯಾಧಾರಿತ ಆದಿವಾಸಿ ಸಮುದಾಯಗಳ ಯುವಕ-ಯುವತಿಯರು, ಮುಖಂಡರು, ಮಹಿಳಾ ಪ್ರತಿನಿಧಿಗಳೊಂದಿಗಿನ ರಾಜ್ಯ ಮಟ್ಟದ ಸಮಾಲೋಚನಾ ಕಾರ್ಯಾಗಾರವನ್ನು ಸಚಿವ ಸತೀಶ್ ಜಾರಕಿಹೊಳಿ ಉದ್ಘಾಟಿಸಿದರು.

ಮೈಸೂರು, ಜ.5(ಎಂಕೆ)– ಬುಡಕಟ್ಟು ಸಮುದಾಯದವರಿಗೆ ಕೌಶಲ್ಯಾಧಾರಿತ ತರಬೇತಿಗಳನ್ನು ಹೆಚ್ಚಿಸಿ, ಪೌಷ್ಠಿಕಾಂಶ ಆಹಾರ ಸೇವನೆಯ ಬಗ್ಗೆ ಅರಿವು ಕಾರ್ಯಕ್ರಮ ಆಯೋಜಿಸುವಂತೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸೂಚಿಸಿದರು.

ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಸ್ಥೆಯ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಪಿವಿಟಿಜಿ ಮತ್ತು ಅರಣ್ಯಾಧಾರಿತ ಆದಿವಾಸಿ ಸಮುದಾಯಗಳ ಯುವಕ–ಯುವತಿಯರು, ಮುಖಂಡರು ಹಾಗೂ ಮಹಿಳಾ ಪ್ರತಿನಿಧಿಗಳೊಂದಿಗಿನ ರಾಜ್ಯ ಮಟ್ಟದ ಸಮಾಲೋಚನಾ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಅಧಿಕಾರಿಗಳು ಬುಡಕಟ್ಟು ಸಮುದಾಯದವರ ಅಹವಾಲುಗಳನ್ನು ಪರಿಶೀಲಿಸಿ ಸಮಸ್ಯೆಗಳನ್ನು ಪರಿಹರಿಸುವಂತೆ ತಿಳಿಸಿದರು.

ಬುಡಕಟ್ಟು ಸಮುದಾಯ ವಾಸಿಸುವ ಸ್ಥಳಗಳಲ್ಲಿ ಶೈಕ್ಷಣಿಕ, ವಸತಿ, ಉದ್ಯೋಗ, ಕುಡಿಯುವ ನೀರು, ವಿದ್ಯುತ್, ರಸ್ತೆ ಸಮಸ್ಯೆಗಳ ಗಮನಹರಿಸಬೇಕು. ಬುಡಕಟ್ಟು ಜನರ ಶ್ರೇಯೋಭಿವೃದ್ಧಿಗಾಗಿ ಅಧಿಕಾರಿಗಳು ಕ್ರಮ ವಹಿಸಬೇಕು. ಸರ್ಕಾರದ ಯೋಜನೆಗಳನ್ನು ತಲುಪಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ಹೇಳಿದರು. ಸಭೆಯಲ್ಲಿ ಶಾಸಕ ಡಿ.ರವಿಶಂಕರ್, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿರ್ದೇಶಕ ಟಿ.ಯೋಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಅರಮನೆ ಬಳಿ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ಹಿನ್ನೆಲೆ

ಮೈಸೂರಲ್ಲಿ ಫುಟ್‌ಪಾತ್‌ಗಳ ಮೇಲಿನ ಅಂಗಡಿಗಳ ತೆರವು ಕಾರ್ಯಾಚರಣೆ ಆರಂಭ





ಮೈಸೂರು ಅರಮನೆ ಬಳಿ ಫುಟ್‌ಪಾತ್ ವ್ಯಾಪಾರಿಗಳನ್ನು ತೆರವುಗೊಳಿಸುತ್ತಿರುವ ನಗರ ಪೊಲೀಸರು. ಬಲಚಿತ್ರದಲ್ಲಿ ಟಾರ್ಚ್‌ಲೈಟ್ ಪೆರೇಡ್ ಮೈದಾನದ ಬಳಿಯ ರಸ್ತೆಬದಿಯ ವ್ಯಾಪಾರಿಗಳನ್ನು ತೆರವುಗೊಳಿಸಿರುವುದು.

ಮೈಸೂರು,ಜ.5 (ಆರ್‌ಕೆ & ಎಂಕೆ)– ಇತ್ತೀಚೆಗಷ್ಟೇ ಅರಮನೆಯ ಜಯಮಾರ್ತಾಂಡ ದ್ವಾರದ ಬಳಿ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ಮೂವರು ಮೃತಪಟ್ಟ ಪ್ರಕರಣದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರಪಾಲಿಕೆ ಹಾಗೂ ನಗರ ಪೊಲೀಸ್ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ಫುಟ್‌ಪಾತ್ ಮೇಲಿನ ಅಂಗಡಿಗಳನ್ನು ತೆರವುಗೊಳಿಸುತ್ತಿದ್ದಾರೆ.

ಮೈಸೂರು ನಗರದಾದ್ಯಂತ ಫುಟ್‌ಪಾತ್‌ಗಳಲ್ಲಿ ಗ್ಯಾಸ್ ಸಿಲಿಂಡರ್‌ಗಳನ್ನು ಬಳಸಿ ಆಹಾರ ತಯಾರು ಮಾಡುವುದು, ಫಾಸ್ಟ್‌ಫುಡ್, ಚಾಟ್ಸ್ ತಯಾರಿಸುವುದು ಸೇರಿದಂತೆ ಅಪಾಯಕಾರಿ ಅಂಗಡಿಗಳು ನಾಯಿಕೊಡೆಗಳಂತೆ ತಲೆ ಎತ್ತಿದ್ದು, ಗ್ರಾಹಕರಿಗೆ ಯಾವುದೇ ಸುರಕ್ಷತಾ ಕ್ರಮಕೈಗೊಂಡಿಲ್ಲ. ಪರಿಣಾಮ ಅಗ್ನಿ ಅವಘಡಗಳು, ಇನ್ನಿತರ ಅಪಾಯಗಳು ಸಂಭವಿಸಿ ಪ್ರಾಣ ಹಾನಿಯಾಗುವ ಸಂಭವವಿದೆ ಎಂಬುದನ್ನು ಅರಿತ ಜಿಲ್ಲಾಡಳಿತವು ಪೊಲೀಸರ ನೆರವಿನೊಂದಿಗೆ ಫುಟ್‌ಪಾತ್ ಅಂಗಡಿಗಳನ್ನು ತೆರವುಗೊಳಿಸುವಂತೆ ಮೈಸೂರು ಮಹಾನಗರಪಾಲಿಕೆಗೆ ನಿರ್ದೇಶನ ನೀಡಿತ್ತು.

ವಾಣಿಜ್ಯ ಸಿಲಿಂಡರ್‌ಗಳನ್ನು ಮಾತ್ರ ವ್ಯಾಪಾರದ ಉದ್ದೇಶಕ್ಕೆ ಬಳಸಬೇಕೆಂಬ ನಿಯಮ ಉಲ್ಲಂಘಿಸಿ ಹಣದ ಆಸೆಗಾಗಿ ಯಾವುದೇ ಮುಂಜಾಗ್ರತ ಕ್ರಮ ಕೈಗೊಳ್ಳದೇ ಗೃಹೋಪಯೋಗಿ ಸಿಲಿಂಡರ್‌ಗಳನ್ನು ಅನಧಿಕೃತವಾಗಿ ಬಳಸಲಾಗುತ್ತಿದೆ. ಇದನ್ನು ಗಮನಿಸಿ ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳು ಪೊಲೀಸರ ಬಂದೋಬಸ್ತ್ ಪಡೆದು ಫುಟ್‌ಪಾತ್ ಅಂಗಡಿಗಳನ್ನು ತೆರವುಗೊಳಿಸಲಾರಂಭಿಸಿದ್ದಾರೆ.

ಬನ್ನಿಮಂಟಪದ ಹೈವೇ ಸರ್ಕಲ್‌ನಿಂದ ಎಲ್‌ಐಸಿ ಜಂಕ್ಷನ್‌ವರೆಗೆ ಫುಟ್‌ಪಾತ್ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಎಲ್ಲಾ ರೀತಿಯ ಅಂಗಡಿಗಳನ್ನು ಎನ್‌ಆರ್ ಠಾಣೆ ಪೊಲೀಸರು ಕಳೆದ ಎರಡು ದಿನಗಳ ಹಿಂದೆ ತೆರವುಗೊಳಿಸಿದ್ದಾರೆ. ಇದರಿಂದಾಗಿ ಬಾಲಭವನದ ಬಳಿ ಫುಟ್‌ಪಾತ್ ಮೇಲೆ ಹಣ್ಣು-ತರಕಾರಿ ಮಾರಾಟ ಮಾಡುತ್ತಿದ್ದವರಿಗೂ ತೊಂದರೆಯಾಗಿದೆ. ಸ್ಫೋಟದ ಬೆನ್ನಲ್ಲೇ ಅರಮನೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫುಟ್‌ಪಾತ್ ಅಂಗಡಿಗಳನ್ನು ತೆರವುಗೊಳಿಸಲಾಗಿತ್ತಾದರೂ ಮತ್ತೆ ನಿನ್ನೆ (ಜ.4) ಸಂಜೆ ಅಂಗಡಿಗಳು ಕಾಣಿಸಿಕೊಂಡಿದ್ದವು. ಇಂದು ಬೆಳಿಗ್ಗೆ ಅಲ್ಲಿ ಯಾವುದೇ ಅಂಗಡಿಗಳು ಕಂಡು ಬರಲಿಲ್ಲ. ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟದ ನಂತರ ಗನ್ ಹೌಸ್ ಸರ್ಕಲ್ ಬಳಿಯ ಕರಕುಶಲ ವಸ್ತುಗಳು, ಆಹಾರ ಪದಾರ್ಥಗಳು, ಚಹಾ ಅಂಗಡಿ ಮುಂತಾದವುಗಳನ್ನು ತೆರವುಗೊಳಿಸಲಾಗಿತ್ತು. ಅಲ್ಲದೇ ಅಲ್ಲಿ ಅಂಗಡಿಗಳು ತಲೆ ಎತ್ತದಂತೆ ನಿಗಾ ವಹಿಸಲಾಗಿದೆ.

ದೇವಾಂಗ ಸಮುದಾಯಕ್ಕೆ ಶಕ್ತಿ ತುಂಬುವ ಕಾರ್ಯ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ




ಡಿ.ಕೆ.ಶಿವಕುಮಾರ್

ಬೆಂಗಳೂರು,ಜ.5(ಕೆಎಂಶಿ)–ದೇವಾಂಗ ಸಮುದಾಯ ಹಿಂದುಳಿದವರು ಎಂಬ ಕೀಳರಿಮೆಯಿಂದ ಹೊರ ಬರಬೇಕು, ನಿಮ್ಮ ಸಹಭಾಗಿತ್ವ ಇಲ್ಲದೆ ಸಮಾಜ ಮುನ್ನಡೆಯುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ದೇವಾಂಗ ಸಂಘದ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೊಡ್ಡ ಸಂಖ್ಯೆಯಲ್ಲಿರುವ ದೇವಾಂಗ ಸಮುದಾಯ ಕಾಯಕ ವರ್ಗಕ್ಕೆ ಸೇರಿದೆ. ಶ್ರಮಪಟ್ಟು ದುಡಿಯುವ ಜನ, ನೀವೂ ಮುಂದುವರೆದ ಜನಾಂಗ. ಈ ಸಮಾಜಕ್ಕೆ ಶಕ್ತಿ ತುಂಬುತ್ತೇವೆ ಎಂದರು.

ಸಮುದಾಯದ ಯುವಜನಾಂಗ ವಿದ್ಯೆ ಜೊತೆಗೆ ಕಸುಬನ್ನೂ ಉಳಿಸಿ, ಬೆಳೆಸಬೇಕು. ಹೊಸ ತಂತ್ರಜ್ಞಾನ ಬಳಸಿ ಬೆಳೆಯಬೇಕು. ನಿಮ್ಮ ಬಳಿ ಅನುಭವ, ಶ್ರಮ, ಕೈಗುಣವಿದೆ. ದೇವರು ವರ ಅಥವಾ ಶಾಪ ನೀಡುವುದಿಲ್ಲ, ಅವಕಾಶ ನೀಡುತ್ತಾನೆ. ಸಿಕ್ಕ ಅವಕಾಶವನ್ನು ಸಮುದಾಯ ಬಳಸಿಕೊಳ್ಳಬೇಕು. ಪುರಾಣದಲ್ಲಿ ದೇವಾಂಗ ಸಮುದಾಯದ ಬಗ್ಗೆ ಉಲ್ಲೇಖವಿದೆ. ಸಮುದಾಯದ ನಾಮ ಕರಣವೂ ದೈವಾಂಶ ಸಂಭೂತವಾಗಿದೆ. ಈ ಪುಣ್ಯ ಬೇರೆಯವರಿಗೆ ದೊರೆಯುವುದಿಲ್ಲ. ದೇವರಿಗೆ ಉಡುಗೆ ಸೇರಿದಂತೆ ಸಮಾಜದ ಪ್ರತಿಯೊಬ್ಬರಿಗೂ ವೇಷ–ಭೂಷಣ ಸಿದ್ಧ ಪಡಿಸುವವರು, ನಿಮ್ಮನ್ನು ಪಡೆದ ನಾವೇ ಭಾಗ್ಯವಂತರು, ದೇವಾಂಗ ಸಮಾಜ, ಉಪ ಪಂಗಡಗಳ ಜೊತೆ ನಾವು ಇರುತ್ತೇವೆ ಎಂದು ಹೇಳಿದರು.

ದೇಶಾದ್ಯಂತ ಹುಲಿ ಗಣತಿ ಆರಂಭ

9276 ಸಿಬ್ಬಂದಿಗಳಿಂದ ಗಣನೆ



ಬಂಡೀಪುರದಲ್ಲಿ ಹುಲಿ ಗಣತಿಗಾಗಿ ಕ್ಯಾಮರಾ ಟ್ರ್ಯಾಪ್ ಅಳವಡಿಸುತ್ತಿರುವುದು.

ಮೈಸೂರು, ಜ.5(ಎಂಟಿವೈ)– ಆರನೇ ಆವೃತ್ತಿಯ ಅಖಿಲ ಭಾರತ ಹುಲಿ ಗಣತಿ ಪ್ರಕ್ರಿಯೆ ಆರಂಭವಾಗಿದ್ದು, ನಾಗರಹೊಳೆ, ಬಂಡೀಪುರ, ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಗಣತಿಗಾಗಿ ನಿಯೋಜನೆಗೊಂಡಿದ್ದ ಸಿಬ್ಬಂದಿಗಳ ತಂಡ ಮೊದಲ ದಿನವೇ ಹುಲಿ ಸೇರಿದಂತೆ ವಿವಿಧ ಪ್ರಾಣಿ–ಸಸ್ಯ ಪ್ರಬೇಧಗಳ ಮಾಹಿತಿ ಕಲೆ ಹಾಕಿದೆ.

ದೇಶದಾದ್ಯಂತ ಏಕಕಾಲದಲ್ಲಿ ಹುಲಿ ಗಣತಿ ಆರಂಭವಾಗಿದ್ದು, ಕರ್ನಾಟಕದ ಐದು ಹುಲಿ ಸಂರಕ್ಷಿತ ಪ್ರದೇಶ, 36 ವನ್ಯಧಾಮ, 12 ಉಪವಿಭಾಗದಲ್ಲಿ ಹುಲಿ ಗಣತಿ ಆರಂಭವಾಗಿದ್ದು, ಒಟ್ಟು 9276 ಸಿಬ್ಬಂದಿಗಳು ವಿವಿಧೆಡೆ ಹುಲಿ ಗಣತಿ ಕಾರ್ಯದಲ್ಲಿ ಪಾಲ್ಗೊಂಡಿದ್ದಾರೆ.


ಕರ್ನಾಟಕದ ಐದು ಹುಲಿ ಸಂರಕ್ಷಿತ ಪ್ರದೇಶಗಳಾದ ನಾಗರಹೊಳೆ, ಬಂಡೀಪುರ, ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಪ್ರದೇಶ, ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಕಾಳಿ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಮಲೆ ಮಹದೇಶ್ವರ ವನ್ಯಧಾಮ, ಕಾವೇರಿ ವನ್ಯಧಾಮ, ಸೇರಿದಂತೆ ರಾಜ್ಯದ 36 ವನ್ಯಧಾಮ ಮತ್ತು ಹುಲಿ ಪ್ರತ್ಯಕ್ಷವಾಗಿದ್ದ ಮೈಸೂರು, ಮಡಿಕೇರಿ, ಹುಣಸೂರು, ಗುಂಡ್ಲುಪೇಟೆ ಸೇರಿದಂತೆ 12 ಉಪ ವಿಭಾಗಗಳಲ್ಲೂ ಈ ಬಾರಿ ಗಣತಿ ನಡೆಸಲಾಗುತ್ತಿದೆ. ಒಟ್ಟು ರಾಜ್ಯದಲ್ಲಿ 3,212 ಬೀಟ್‌ಗಳಲ್ಲಿ 6512 ಸ್ಥಳದಲ್ಲಿ ತಲಾ ಎರಡರಂತೆ 13,024 ಕ್ಯಾಮರಾ ಟ್ರ್ಯಾಪ್ ಬಳಸಿ ಈ ಬಾರಿ ವೈಜ್ಞಾನಿಕ ಮತ್ತು ಕರಾರುವಕ್ಕಾಗಿ ಹುಲಿ ಗಣತಿ ನಡೆಸಲು ನಿರ್ಧರಿಸಲಾಗಿದೆ.

ಈ ಕುರಿತು ಹುಲಿ ಯೋಜನೆಯ ನಿರ್ದೇಶಕ, ಹುಲಿ ಗಣತಿಯ ನೋಡಲ್ ಅಧಿಕಾರಿ ಡಾ.ಪಿ.ರಮೇಶ್ ಕುಮಾರ್ ಮಾತನಾಡಿ, ಈ ಬಾರಿ ಹುಲಿ ಗಣತಿಯನ್ನು ವೈಜ್ಞಾನಿಕವಾಗಿ ಹಾಗೂ ಕರಾರುವಕ್ಕಾಗಿ ನಡೆಸಲಾಗುತ್ತಿದೆ. ಈಗಾಗಲೇ ಐದು ಬಾರಿ ಹುಲಿ ಗಣತಿ ನಡೆಸಲಾಗಿದ್ದು, ವಿಶ್ವದ ಹುಲಿಗಳ ಸಂಖ್ಯೆಯಲ್ಲಿ ಭಾರತವೇ ಅಗ್ರಸ್ಥಾನ ಹೊಂದಿದೆ ಎಂದರು.

2006ರ ಗಣತಿಯಲ್ಲಿ ದೇಶದಲ್ಲಿ 1411 ಹುಲಿಗಳಿದ್ದರೆ, ರಾಜ್ಯದಲ್ಲಿ 290 ಹುಲಿ ಇದ್ದವು. 2010ರ ಗಣತಿಯಲ್ಲಿ ದೇಶದಲ್ಲಿ 1706 ಹುಲಿ, ರಾಜ್ಯದಲ್ಲಿ 300, 2014ರಲ್ಲಿ 2226 ಹುಲಿ, ರಾಜ್ಯದಲ್ಲಿ 406, 2018ರಲ್ಲಿ ದೇಶದಲ್ಲಿ 2967 ಹುಲಿ, ರಾಜ್ಯದಲ್ಲಿ 524 ಹಾಗೂ 2022ರ ಗಣತಿಯಲ್ಲಿ ದೇಶದಲ್ಲಿ 3682 ಹುಲಿಗಳಿರುವುದು ಪತ್ತೆಯಾಗಿದ್ದರೆ, ಕರ್ನಾಟಕದಲ್ಲಿ 563 ಹುಲಿ ಇರುವುದು ಖಚಿತವಾಗಿತ್ತು. ಈ ಬಾರಿ ಗಣತಿಯ ಅಂಕಿಅಂಶವನ್ನು ನಿಖರವಾಗಿ ನಮೂದಿಸಲು ಆ್ಯಪ್ ಬಳಸಲಾಗುತ್ತಿದೆ ಎಂದರು.

ಮೂರು ಹಂತದಲ್ಲಿ ಗಣತಿ ಪ್ರಕ್ರಿಯೆ ನಡೆಸಲಾಗುತ್ತದೆ. ಮೊದಲ ಹಂತದ ಗಣತಿ ವೇಳೆ 3 ದಿನ ಕನಿಷ್ಠ 5 ಕಿ.ಮಿ ಕಾಲುನಡಿಗೆ ಮೂಲಕ ಮಾಂಸಹಾರಿ ಪ್ರಾಣಿಗಳ ಮಾಹಿತಿ ಕಲೆ ಹಾಕಿ ಸಮೀಕ್ಷೆ ನಡೆಸಲಿದ್ದಾರೆ. ಎರಡನೇ ಹಂತದ ಗಣತಿಯಲ್ಲಿ ಲೈನ್ ಟ್ರಾನ್ಸೆಕ್ಟ್‌ನಲ್ಲಿ ಸಮೀಕ್ಷೆ ನಡೆಸಲಾಗುತ್ತದೆ. ಮೂರನೇ ಹಂತದ ಗಣತಿಯಲ್ಲಿ ಎಂ–ಸ್ಟೈಪ್ಸ್ ಎಕೋಲಾಜಿಕಲ್ ಆ್ಯಪ್ ಮೂಲಕ ಕ್ಯಾಮರಾ ಟ್ರ್ಯಾಪ್‌ನಲ್ಲಿ ನಮೂದಾಗಿರುವ ಚಿತ್ರಗಳೊಂದಿಗೆ ಗಣತಿ ಪ್ರಕ್ರಿಯೆ ನಡೆಸಲಾಗುತ್ತದೆ. ಈ ಸಾಲಿನ ಗಣತಿ ಪ್ರಕ್ರಿಯೆಯ ಫಲಿತಾಂಶ 2027ರಲ್ಲಿ ಪ್ರಕಟಗೊಳ್ಳಲಿದೆ ಎಂದು ತಿಳಿಸಿದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜ.5–ವಿವಿ ಮೊಹಲ್ಲಾ ಉಪವಿಭಾಗದ ಜಯಲಕ್ಷ್ಮಿಪುರಂ ಶಾಖಾ ವ್ಯಾಪ್ತಿಯ ವಿದ್ಯುತ್ ಮಾರ್ಗಗಳಲ್ಲಿ ಭೂಗತ ಕೇಬಲ್ ಕಾರ್ಯ ನಿಮಿತ್ತ ಜ.7 ರಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಡಿಸಿ ಹೌಸ್, ಆರ್‌ಸಿ ಆಫೀಸ್, ಸಿಎಫ್‌ಟಿಆರ್‌ಐ, ವಾಲ್ಮೀಕಿ ರಸ್ತೆ, ಜಡ್ಜ್ ಕ್ವಾರ್ಟ್ರಸ್, ನರ್ಸ್ ಕ್ವಾರ್ಟ್ರಸ್, ಎಲ್‌ಐಸಿ ಬಿಲ್ಡಿಂಗ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಹುಣಸೂರು ಮುಖ್ಯರಸ್ತೆ, ವಿಜಯ ನಗರ 1ನೇ ಹಂತ, ಮಿನಿ ವಾಟರ್ ಟ್ಯಾಂಕ್ ಏರಿಯಾ, ಕೆ.ಡಿ ರಸ್ತೆ ಹಾಗೂ ಸುತ್ತಮುತ್ತ. ಬೃಂದಾವನ 1 ಮತ್ತು 2ನೇ ಹಂತ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಇಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್‌ರಿಂದ ಭಾರತದ ಶಾಸ್ತ್ರೀಯ ಭಾಷೆಗಳ ಸಂಶೋಧನಾ ಕೃತಿಗಳ ಬಿಡುಗಡೆ



ಧರ್ಮೇಂದ್ರ

ಮೈಸೂರು,ಜ.5–ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಜ.6ರಂದು ನವದೆಹಲಿಯ ಕೌಶಲ ಭವನದಲ್ಲಿ ಕನ್ನಡ, ಮಲಯಾಳಂ, ಓಡಿಯಾ, ತಮಿಳು ಮತ್ತು ತೆಲುಗು ಈ ಶಾಸ್ತ್ರೀಯ ಭಾಷೆಗಳ ಕುರಿತ ಸಂಶೋಧನಾ ಕೃತಿಗಳನ್ನು ಅಧಿಕೃತವಾಗಿ ಬಿಡುಗಡೆ ಮಾಡಲಿದ್ದಾರೆ.

ಮಾನಸಗಂಗೋತ್ರಿಯಲ್ಲಿರುವ ಭಾರತೀಯ ಭಾಷಾ ಸಂಸ್ಥಾನದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರಗಳು (ಕನ್ನಡ, ತೆಲುಗು, ಮಲೆಯಾಳಂ, ಒಡಿಯಾ) ಮತ್ತು ಶಾಸ್ತ್ರೀಯ ತಮಿಳು ಭಾಷೆಯ ಕುರಿತ ಕೃತಿಗಳನ್ನು ಚೆನ್ನೈನ ಶಾಸ್ತ್ರೀಯ ತಮಿಳು ಕೇಂದ್ರ ಸಂಸ್ಥೆ (ಸಿಐಸಿಟಿ) ಸಿದ್ಧಪಡಿಸಿದ್ದು, ಈ ಗ್ರಂಥಗಳ ಬಿಡುಗಡೆ ಸಮಾರಂಭದಲ್ಲಿ ವಿದ್ವಾಂಸರು, ಹಿರಿಯ ನೀತಿ ನಿರೂಪಕರು, ಸಂಶೋಧಕರು ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕೇಂದ್ರ ಶಿಕ್ಷಣ ಸಚಿವಾಲಯದ ಉನ್ನತ ಶಿಕ್ಷಣ ಕಾರ್ಯದರ್ಶಿ ವಿನೀತ್ ಜೋಷಿ, ಉನ್ನತ ಶಿಕ್ಷಣ ವಿಭಾಗದ ಜಂಟಿ ಕಾರ್ಯದರ್ಶಿ ಮನ್ಮೋಹನ್‌ಕೌರ್, ಭಾರತೀಯ ಭಾಷಾ ಸಮಿತಿ ಅಧ್ಯಕ್ಷ ಪದ್ಮಶ್ರೀ ಚಾಮು ಕೃಷ್ಣಶಾಸ್ತ್ರಿ, ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್, ಸಿಐಸಿಟಿ ನಿರ್ದೇಶಕ ಪ್ರೊ.ಆರ್.ಚಂದ್ರಶೇಖರನ್, ಶಾಸ್ತ್ರೀಯ ಭಾಷೆಗಳ ಸಂಯೋಜಕ ಡಾ.ಪ್ರೇಮ್‌ಕುಮಾರ್, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ತಳವಾರ, ಸಿಐಐಎಲ್–ಸಿಐಸಿಟಿಯ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರದ ಹಿರಿಯ ಅಧಿಕಾರಿಗಳು, ವಿದ್ವಾಂಸರು ಉಪಸ್ಥಿತರಿರುವರು.

ಮಹರ್ಷಿ ವಿದ್ಯಾಸಂಸ್ಥೆ ವಾರ್ಷಿಕೋತ್ಸವ




ಮೈಸೂರಿನ ಮಹರ್ಷಿ ವಿದ್ಯಾಸಂಸ್ಥೆಯ ವಾರ್ಷಿಕೋತ್ಸವ ಆಚರಿಸಲಾಯಿತು.

ಮೈಸೂರು, ಜ. 5– ಮೈಸೂರಿನ ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಮಹರ್ಷಿ ಪರಂಪರೆ–32, ಎರಡು ದಿನಗಳ ಶಾಲಾ ವಾರ್ಷಿಕೋತ್ಸವ ಆಚರಿಸಲಾಯಿತು.

ರಾಮಕೃಷ್ಣ ಆಶ್ರಮದ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಶ್ರೀ ಇಷ್ಟನಾಥಾನಂದಜೀ ಮಹರಾಜ್ ಸಾನ್ನಿಧ್ಯ ವಹಿಸಿದ್ದರು. ಸಂಸ್ಥೆಯ ವ್ಯವಸ್ಥಾಪಕ ವಿಶ್ವಸ್ಥ ಡಾ.ಭವಾನಿ ಶಂಕರ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕಾರಿ ಸಂಯೋಜಕ ತೇಜಸ್ ಬಿ.ಶಂಕರ್, ಸಂಸ್ಥೆಯ ನಿರ್ದೇಶಕರಾದ ಅಪೂರ್ವ ಶ್ರೇಯಸ್, ಸಂಸ್ಥೆ ಸದಸ್ಯ ಕೇದಾರ್‌ನಾಥ್, ಸಂಸ್ಥೆಯ ಎಲ್ಲಾ ವಿಭಾಗದ ಪ್ರಾಚಾರ್ಯರಾದ ಗೋಪಾಲ ಸ್ವಾಮಿ, ಮಹದೇವಸ್ವಾಮಿ, ಎ.ಕುಮಾರ್, ಆಡಳಿತಾಧಿಕಾರಿ ಪ್ರಿಯಾಂಕ, ಸಂಯೋಜಕಿ ಅನಿತಾ ಹಾಗೂ ಶೇಷಾದ್ರಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಿಧನ

ಸರಸ್ವತಿ



ಮೈಸೂರು, ಜ. 5– ಭಾರತೀಯ ಜನತಾ ಪಾರ್ಟಿಯ ಮುಖಂಡರಾದ ಹೂಟಗಳ್ಳಿಯ ಎಸ್.ಬಿ.ಕೃಷ್ಣ ಅವರ ಪತ್ನಿ ಶ್ರೀಮತಿ ಸರಸ್ವತಿ ಶನಿವಾರ ಸಂಜೆ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಮೃತರು ಪತಿ, ಇಬ್ಬರು ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯ ಸಂಸ್ಕಾರವನ್ನು ಹೂಟಗಳ್ಳಿಯ ರುದ್ರಭೂಮಿಯಲ್ಲಿ ಇಂದು ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

06.1.2026 ಮಂಗಳವಾರ, ಮಳೆ ನಕ್ಷತ್ರ: ಮೂಲ, 29.12.2025ರಿಂದ 10.01.2026 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 3ರಿಂದ 4.30 ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭ್ಯುದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಬೆಳಗ್ಗೆಯಿಂದ ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.

■ **ಡಾ. ಕೆ. ಶಿವಕುಮಾರ್ ಅಭಿನಂದನಾ ಸಮಿತಿ ಮತ್ತು ದಲಿತ ಸಂಘಟನೆಗಳ ಒಕ್ಕೂಟ :** ನೂತನ ವಿಧಾನ ಪರಿಷತ್ ಸದಸ್ಯರಾದ ಡಾ. ಕೆ. ಶಿವಕುಮಾರ್ ಅವರಿಗೆ ಅಭಿನಂದನಾ ಕಾರ್ಯಕ್ರಮ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಬುದ್ಧ ಮತ್ತು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ : ಪಶು ಸಂಗೋಪನಾ ಇಲಾಖೆ ಸಚಿವ ಕೆ. ವೆಂಕಟೇಶ್, ಅಭಿನಂದಿತರು : ಹಿರಿಯ ಪತ್ರಕರ್ತ ಹಾಗೂ ನೂತನ ವಿಧಾನ ಪರಿಷತ್ ಸದಸ್ಯ ಡಾ. ಕೆ. ಶಿವಕುಮಾರ್, ಮುಖ್ಯ ಭಾಷಣಕಾರರು : ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್, ಪ್ರಾಸ್ತಾವಿಕ ನುಡಿ: ಸಮಿತಿ ಸಂಚಾಲಕ ಹರಿಹರ ಆನಂದಸ್ವಾಮಿ, ಉಪಸ್ಥಿತರು : ಶಾಸಕರಾದ ತನ್ವೀರ್ ಸೇಠ್, ಎ.ಆರ್. ಕೃಷ್ಣಮೂರ್ತಿ, ಡಾ. ಯತೀಂದ್ರ ಸಿದ್ದರಾಮಯ್ಯ, ಅನಿಲ್ ಚಿಕ್ಕಮಾದು, ಕೆ. ಹರೀಶ್‌ಗೌಡ, ಡಿ. ರವಿಶಂಕರ್, ಡಾ. ಡಿ. ತಿಮ್ಮಯ್ಯ, ದರ್ಶನ್ ಧ್ರುವನಾರಾಯಣ್, ಸಂಸದ ಸುನೀಲ್ ಬೋಸ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಸ್ಥಳ: ಸೆನೆಟ್ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಕೋ–ಆಪ್ಟೆಕ್ಸ್ :** ಸಂಕ್ರಾಂತಿ ಹಬ್ಬದ ಪ್ರಯುಕ್ತ ವಿಶೇಷ ಪ್ರದರ್ಶನ ಮಾರಾಟ ಮೇಳ, ಸ್ಥಳ: ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ :** 2025–26ನೇ ಸಾಲಿನ ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉದ್ಘಾಟನೆ : ಹಾಸ್ಯ ಕಲಾವಿದ ಚಂದ್ರಪ್ರಭ, ಉಪಸ್ಥಿತರು : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು :** ಇಂಡಕ್ಷನ್ ಪ್ರೋಗ್ರಾಂ–2026 ಸಂಪ್ರವೇಶ, ಉದ್ಘಾಟನೆ : ಸಿಎಫ್‌ಟಿಆರ್‌ಐ ಪ್ರಧಾನ ವಿಜ್ಞಾನಿ ಡಾ. ಹರೀಶ್ ಪ್ರಶಾಂತ್ ಕೆ.ವಿ., ಮುಖ್ಯ ಅತಿಥಿಗಳು : ಕೆ.ಆರ್. ಆಸ್ಪತ್ರೆ ಸ್ಥಾನಿಕ ವೈದ್ಯಾಧಿಕಾರಿ ಡಾ. ನಯಾಜ್ ಪಾಷಾ, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಆರ್. ದಿನೇಶ್, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಶಿ, ಸ್ಥಳ: ಪ್ರೊ. ಎಸ್. ಚಿನ್ನಸ್ವಾಮಿ ಶೆಟ್ಟಿ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ರಾಷ್ಟ್ರೀಯ ಐಕ್ಯತಾ ಸಪ್ತಾಹ ದಿನಾಚರಣೆ ಅಂಗವಾಗಿ ರಾಷ್ಟ್ರೀಯ ಐಕ್ಯತಾ ದಿನ ಕಾರ್ಯಕ್ರಮ, ಅಧ್ಯಕ್ಷತೆ: ಕರಾಮುವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಮುಖ್ಯ ಅತಿಥಿಗಳು: ಹಾಸನ ವಿವಿ ಕುಲಪತಿ ಪ್ರೊ.ಟಿ.ಸಿ.ತಾರಾನಾಥ, ಕರಾಮುವಿ ಕುಲಸಚಿವ ಪ್ರೊ. ನವೀನ್‌ಕುಮಾರ್, ಸ್ಥಳ: ವ್ಯವಸ್ಥಾಪನಾ ಮಂಡಳಿ ಸಭಾಂಗಣ, ಕರಾಮುವಿವಿ, ಮುಕ್ತಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಸಾಧನ ಮಂದಿರ, ಮೈಸೂರು :** ವಿಶೇಷ ತರಬೇತಿ ಶಿಬಿರ ಹಾಗೂ ಸರಸ್ವತಿ ಪೂಜೆ, ಸಾನ್ನಿಧ್ಯ: ಪೂಜ್ಯ ಸ್ವಾಮಿ ಹಂಸಾನಂದ, ಸಂಜೆ 4 ರಿಂದ ಶ್ರೀ ವೆಂಕಟೇಶ್ವರ ದೇವಸ್ಥಾನ, ಸಿದ್ಧಾರ್ಥನಗರ; ಸಂಜೆ 5.15 ರಿಂದ ಬಲಮುರಿ ವಿನಾಯಕ ದೇವಸ್ಥಾನ, ಸಿದ್ಧಾರ್ಥ ಬಡಾವಣೆ, ಸಂಜೆ 6.30 ರಿಂದ ಗೀತಾ ಶಿಶು ಶಿಕ್ಷಣ ಸಂಘ, ಸಿದ್ಧಾರ್ಥ ಬಡಾವಣೆ.

■ **ಶ್ರೀ ಮಹಾಜನ ಸಭಾ ಟ್ರಸ್ಟ್:** ತಿರುಪ್ಪಾವೈ ಪಾರಾಯಣ, ಆಧ್ಯಾತ್ಮಿಕ ಪ್ರವಚನಕಾರರಾದ ಡಾ.ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾವರಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್, ಶ್ರೀರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ. ಸಂಜೆ 6.30ಕ್ಕೆ

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ – ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ರೋಹಿಣಿ ಸುಧಾಂ ಹಾಗೂ ಎಸ್. ಸಂಗೀತಾ, ವ್ಯಾಖ್ಯಾನ: ಡಾ. ಪ್ರದೀಪ್‌ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 – ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು. ಮುಕ್ತವಾಣಿ, ಪ್ರಾಯೋಜಕರು: ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರವೇಶಾತಿ ಕುರಿತು ಮಾನ್ಯ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ ಅವರೊಂದಿಗೆ ಸಂವಾದ, ಪ್ರಸ್ತುತಿ: ಎನ್.ಕೇಶವಮೂರ್ತಿ, 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ. ಎನ್. ರಮಣಿ: ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ:ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ. ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ: ಶಾರದಾದೇವಿ ಮಹಿಳಾ ಸಮಾಜದ ಸದಸ್ಯೆಯರಿಂದ ಹೊಸವರ್ಷದ ಕುರಿತು ಕಾರ್ಯಕ್ರಮ ವೈವಿಧ್ಯ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು: ಪಿ. ರಮಾ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಅಕ್ಕರೈ ಸುಬ್ಬುಲಕ್ಷ್ಮಿ ಮತ್ತು ಅಕ್ಕರೈ ಸ್ವರ್ಣಲತಾ–ಯುಗಳ ಗಾಯನ, 4.00 ಕಥಾಕಾಲಕ್ಷೇಪ–ಶ್ರೀ ಸುಬ್ರಹ್ಮಣ್ಯೇಶ್ವರ, ಪ್ರಸ್ತುತಿ:ಸಂತಶ್ರೀ ಭದ್ರಗಿರಿ ಅಚ್ಯುತದಾಸರು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ್ಯ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಮೀನುಮರಿ ಪಾಲನೆ ಕುರಿತು ಸಂವಾದ, ಭಾಗವಹಿಸುತ್ತಾರೆ:ಮೈಸೂರು ತಾಲೂಕು ರಾಮನಹಳ್ಳಿಯ ಕೃಷಿಕ ದಂಪತಿ ಎಸ್. ರಘು ಮತ್ತು ಸವಿತಾ, ಪ್ರಸ್ತುತಿ: ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್, ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ: ಬಿ. ದಿಗ್ವಿಜಯ್, 8.00 ನಾಟಕ – ಪಯಣ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಲಾಲ್ ಗುಡಿ ಜಿ.ಜೆ.ಆರ್. ಕೃಷ್ಣನ್ ಹಾಗೂ ಲಾಲ್‌ಗುಡಿ ವಿಜಯಲಕ್ಷ್ಮಿ ಅವರಿಂದ ಯುಗಳ ವೈಯೋಲಿನ್ ವಾದನ, 10.00 ಆಕಾಶವಾಣಿ ಸಂಗೀತ್ ಸಮ್ಮೇಳನ್–2025 – ಸಬೀನ ಮುಮ್ತಾಜ್ ಇಸ್ಲಾಂ–ತುಮರಿ, ದಾದ್ರ

ಮೈಸೂರು ಮಿತ್ರ
ಮಂಗಳವಾರ 6 ಜನವರಿ 2026

ರಾಜ್ಯ ಸರ್ಕಾರದ ದುರಾಡಳಿತದ ವಿರುದ್ಧ ಜನ ಜಾಗೃತಿ: ಶಾಸಕ ಟಿ.ಎಸ್.ಶ್ರೀವತ್ಸ


ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ಬಿಜೆಪಿ ಮೈಸೂರು ಮಹಾನಗರ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು.

ಮೈಸೂರು, ಜ.5(ಎಂಕೆ)– ರಾಜ್ಯದಲ್ಲಿರುವ ಭ್ರಷ್ಟ ಕಾಂಗ್ರೆಸ್ ಸರ್ಕಾರದ ದುರಾಡಳಿತದ ವಿರುದ್ಧ ಜನಜಾಗೃತಿ ಮೂಡಿಸಲಾಗುವುದು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ನಡೆದ ಬಿಜೆಪಿ ಮೈಸೂರು ಮಹಾನಗರ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ಕೇವಲ 5 ಯೋಜನೆಗಳನ್ನು ಮುಂದಿಟ್ಟುಕೊಂಡು ಮುಂದಿನ ಬಾರಿಯೂ ಅಧಿಕಾರಕ್ಕೆ ಬರುತ್ತೇವೆ ಎನ್ನುವ ರಾಜ್ಯದಲ್ಲಿನ ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಡಲು ದೃಢ ನಿರ್ಧಾರ ಮಾಡುವಂತೆ ಪಕ್ಷದ ಮುಖಂಡರು, ಕಾರ್ಯಕರ್ತರಿಗೆ ಕರೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಸರ್ಕಾರದಲ್ಲಿ ನಾಲ್ಕೈದು ಜನ ಶಾಸಕರು ಅವ್ಯವಹಾರದಿಂದ ಜೈಲು ಸೇರಿದ್ದಾರೆ. ಜಾಮೀನು ಪಡೆದು ಹೊರಗಡೆ ಬಂದಿದ್ದರೂ ಅವರು ಮಾಡಿರುವ ಭ್ರಷ್ಟಾಚಾರ ರಾಜ್ಯದ ಜನತೆಗೆ ತಿಳಿದಿದೆ. ಇಂತಹ ಕೆಟ್ಟ ಸರ್ಕಾರದ ವಿರುದ್ಧ ನಗರ, ಜಿಲ್ಲಾ ಹಾಗೂ ಮಂಡಲ ಮಟ್ಟದಲ್ಲಿ ಹೋರಾಟ ರೂಪಿಸಬೇಕಾದ ಅನಿವಾರ್ಯತೆ ಮತ್ತು ಅಗತ್ಯತೆ ಇದೆ ಎಂದರು.

ರಾಜ್ಯದ ಎಲ್ಲಾ ಜನತೆಗೂ ಗ್ಯಾರಂಟಿ ಯೋಜನೆ ತಲುಪಬೇಕು ಎನ್ನುವ ಉದ್ದೇಶದೊಂದಿಗೆ ವಿಧಾನ ಸೌಧದ ಒಳಗೆ ಮತ್ತು ಹೊರಗೆ ಬಿಜೆಪಿ ಹೋರಾಟ ಮಾಡುತ್ತಿದೆ. ಗೃಹಲಕ್ಷ್ಮಿ ಯೋಜನೆಯಡಿ ಮಹಿಳೆಯರಿಗೆ ನೀಡಬೇಕಾದ ಕೋಟ್ಯಾಂತರ ರೂ. ಹಣವನ್ನು ಬಿಹಾರ ಚುನಾವಣೆಗೆ ಬಳಸಿಕೊಳ್ಳಲಾಗಿದೆ ಎಂಬ ಸುದ್ದಿಗಳು ಹೊರಬೀಳುತ್ತಿವೆ. ಇದರ ಬಗ್ಗೆ ಪ್ರಶ್ನೆ ಮಾಡಿದರೆ ಉಡಾಫೆ ಉತ್ತರ ನೀಡುತ್ತಿದ್ದಾರೆ. ಅನವಶ್ಯಕವಾದ ಯೋಜನೆಗಳನ್ನು ಜಾರಿಗೆ ತಂದು, ಪ್ರಶ್ನಿಸುವವರ ಬಾಯಿ ಮುಚ್ಚಿಸುವ ಯತ್ನ ನಡೆಸಲಾಗುತ್ತಿದೆ ಎಂದು ಕಿಡಿಕಾರಿದರು.

ಇದಕ್ಕೂ ಮುನ್ನ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ನೀಡಿ ಅಭಿನಂದಿಸಿದರು.

ಮಾಜಿ ಶಾಸಕ ಹಾಗೂ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಸುಬ್ಬಣ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಹಿಂದುಳಿತ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ಅಲ್ಪಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಅನಿಲ್ ಥಾಮಸ್, ಮೈಲ್ಯಾಕ್ ಮಾಜಿ ಅಧ್ಯಕ್ಷ ಫಣೀಶ್, ಮಾಜಿ ಮೇಯರ್ ಶಿವಕುಮಾರ್, ಮಾಜಿ ಉಪಮೇಯರ್ ರೂಪ, ಮುಖಂಡರಾದ ಅಪ್ಪಣ್ಣ ಬಿ.ಪಿ.ಮಂಜುನಾಥ್, ಶಿವಕುಮಾರ್, ಮಹೇಶ್‌ರಾಜೇ ಅರಸ್ ಇನ್ನಿತರರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ
'ರಾಜೀವ್‌ಗಾಂಧಿ ಡ್ರ್ಯಾಗನ್ ಪಾಂಡ್' ಉದ್ಘಾಟನೆ

● ದೇಶದಲ್ಲೇ ಅತ್ಯಾಕರ್ಷಕ ಅಚ್ಚರಿ 3.59 ಕೋಟಿ ವೆಚ್ಚದಲ್ಲಿ ನಿರ್ಮಾಣ ● ಮೈಸೂರಲ್ಲಿ ಎಲ್ಲಾ ರೀತಿಯ ಅಭಿವೃದ್ಧಿಗೆ ಸಿಎಂ ಪ್ರೋತ್ಸಾಹ: ಸಚಿವ ಮಹದೇವಪ್ಪ ಗುಣಗಾನ


ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ ನಿರ್ಮಿಸಲಾಗಿರುವ 'ರಾಜೀವ್ ಗಾಂಧಿ ಡ್ರ್ಯಾಗನ್ ಪಾಂಡ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ನಿರ್ಮಾಣವಾಗಿರುವ 'ರಾಜೀವ್‌ಗಾಂಧಿ ಡ್ರ್ಯಾಗನ್ ಪಾಂಡ್' ಉದ್ಘಾಟಿಸಿದ ಸಿಎಂ ಸಿದ್ದರಾಮಯ್ಯ, ಕಾರ್ಯಕ್ರಮ ಕುರಿತು ಮಾತನಾಡುವಂತೆ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ವಿನಂತಿಸಿದರೂ ಸಿಎಂ ಮಾತನಾಡದೇ ಮೌನಕ್ಕೆ ಶರಣಾಗಿದ್ದರು. ಉದ್ಘಾಟನೆ ಬಳಿಕ ವೇದಿಕೆಗೆ ಆಗಮಿಸಿದ ಸಿದ್ದರಾಮಯ್ಯ, ಸಭಾಂಗಣದಲ್ಲಿದ್ದ ಜನಪ್ರತಿನಿಧಿಗಳು, ಜಾನಪದ ಗಾಯಕರ ಕೈಕುಲುಕಿ, ಜನರತ್ತ ಕೈಬಿಸಿ ಕಾರು ಹತ್ತಿದರು.

ಮೈಸೂರು,ಜ.5(ಎಸ್‌ಪಿಎನ್)– ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ ಭಾರತದಲ್ಲೇ ಪ್ರಪ್ರಥಮವಾಗಿ ನಿರ್ಮಿಸಲಾಗಿರುವ ಅಂದಾಜು 3.59 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ 'ರಾಜೀವ್ ಗಾಂಧಿ ಡ್ರ್ಯಾಗನ್ ಪಾಂಡ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಉದ್ಘಾಟಿಸಿದರು.

ಈ ವೇಳೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್, ಎಂಎಲ್‌ಸಿ ಡಾ.ತಿಮ್ಮಯ್ಯ, ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಪಂ ಸಿಇಓ ಯುಕೇಶ್ ಕುಮಾರ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಸೇರಿದಂತೆ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.

ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹಾದೇವಪ್ಪ ಮಾತನಾಡಿ, ಮುಖ್ಯಮಂತ್ರಿಗಳಿಗೆ ಮೈಸೂರು ಜಿಲ್ಲೆಯ ಮೇಲೆ ವಿಶೇಷ ಪ್ರೀತಿಯಿದೆ. ಇದರಿಂದಾಗಿ ಮೈಸೂರು ಜಿಲ್ಲೆಯನ್ನು ವಿಭಿನ್ನವಾಗಿ ಅಭಿವೃದ್ಧಿ ಪಡಿಸಿದ್ದಾರೆ. ಅವರು, ಈ ಹಿಂದೆ ಹಣಕಾಸು ಸಚಿವರಾಗಿದ್ದ ವೇಳೆ ವಿದೇಶಿ ಪ್ರವಾಸ ಕೈಗೊಂಡಿದ್ದರು. ಪ್ರವಾಸದಲ್ಲಿದ್ದ ವೇಳೆ ನನಗೆ ಕರೆ ಮಾಡಿ, ಮೈಸೂರಿಗೆ ಹೋಗಿದ್ದೀಯಾ? ದಸರಾ ಸಿದ್ಧತೆಗಳು ಹೇಗೆ ನಡೆಯುತ್ತಿವೆ ಎಂದು ವಿಚಾರಿಸಿಕೊಳ್ಳುತ್ತಿದ್ದ ಪ್ರಸಂಗವನ್ನು ವಿವರಿಸಿದರು.

ಈ ಹಿಂದೆ ಹೆಚ್.ಡಿ.ದೇವೇಗೌಡರು ಮೈಸೂರು ವಿಷಯ ಬಂದಾಗ ಸಿದ್ದರಾಮಯ್ಯ ಅವರನ್ನು ಒಮ್ಮೆ ಕೇಳಿಬಿಡಿ ಎನ್ನುತ್ತಿದ್ದರು. ಅವರು ವಕೀಲರಾಗಿ, ತಾಲೂಕು ಬೋರ್ಡ್ ಸದಸ್ಯರಾಗಿ, ಕನ್ನಡ ಕಾವಲು ಸಮಿತಿ ಅಧ್ಯಕ್ಷರಾಗಿ, ಶಾಸಕರಾಗಿ, ಮಂತ್ರಿಗಳಾಗಿ ವಿವಿಧ ಖಾತೆಗಳನ್ನು ನಿಭಾಯಿಸಿದ್ದಾರೆ. ಅಲ್ಲದೆ, ಎರಡು ಬಾರಿ ಮುಖ್ಯಮಂತ್ರಿಗಳಾಗಿ ಅಧಿಕಾರ ನಡೆಸಿದ್ದಾರೆ.

ಮೈಸೂರು ವೈಚಾರಿಕತೆಯ ನೆಲೆಗಟ್ಟಿನಲ್ಲಿ ಬೆಳೆದಿದೆ. ಈ ಪರಿಸರದಲ್ಲಿ ಬೆಳೆದು ಬಂದಿರುವ ಸಿದ್ದರಾಮಯ್ಯ, ಕಳೆದ 45 ವರ್ಷಗಳಿಂದ ರಾಜ್ಯ ರಾಜಕಾರಣದಲ್ಲಿದ್ದಾರೆ. ಈ ವೇಳೆ ಎಂದಿಗೂ ಸ್ವಜನ ಪಕ್ಷಪಾತ, ಜಾತಿವಾದವಿಲ್ಲದೆ, ಭ್ರಷ್ಟಾಚಾರ ಮುಕ್ತ ಆಡಳಿತ ನೀಡುತ್ತಿದ್ದಾರೆ. ಇಂತಹ ಸಿದ್ದರಾಮಯ್ಯ ಎರಡನೇ ಬಾರಿ ಮುಖ್ಯಮಂತ್ರಿಗಳಾಗುವ ಮೂಲಕ ದೀರ್ಘಾವಧಿ ಮುಖ್ಯಮಂತ್ರಿಗಳ ಪಟ್ಟಿಯಲ್ಲಿ ಮೊದಲಿಗರಿದಾರೆ. ಇಲ್ಲಿಯವರೆಗೆ ಆ ಸ್ಥಾನ ಡಿ.ದೇವರಾಜ ಅರಸು ಹೆಸರಿನಲ್ಲಿತ್ತು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ನ್ಯಾಯದ ಪರ, ಬಡವರು ಹಾಗೂ ಅಭಿವೃದ್ಧಿಯ ಪರ ಇದ್ದಾರೆ. ಅವರಿಗೆ ಗ್ರಾಮೀಣ ಜೀವನ ಎಂದರೆ ಅಚ್ಚುಮೆಚ್ಚು. ಮುಖ್ಯಮಂತ್ರಿಗಳು ರಾಜ್ಯದಲ್ಲಿ ಅನೇಕ ಅಭಿವೃದ್ಧಿ ಕೆಲಸ ಮಾಡುವ ಮೂಲಕ ಉತ್ತಮ ಆಡಳಿತ ನೀಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯರದ್ದು, 'ಟೈಗರ್ ಫೇಸ್ ವಿತ್ ಎ ಟೆಂಡರ್ ಹಾರ್ಟ್' (Tiger face with a tender heart) ಎಂದು ಬಣ್ಣಿಸಿದರು.

ಗಮನ ಸೆಳೆದ ಬಾಣ ಬಿರುಸು: ಸಿದ್ದರಾಮಯ್ಯನವರು, ಮುಖ್ಯಮಂತ್ರಿಗಳಾಗಿ ಅತೀ ಹೆಚ್ಚು ದಿನ ಆಡಳಿತ ನಡೆಸಿ, ದಾಖಲೆ ನಿರ್ಮಿಸಿದ ನೆನಪಿನಾರ್ಥ ಲೇಸರ್ ಶೋ ಪ್ರದರ್ಶನ ಬಳಿಕ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ, ಬಗೆಯ ಬಾಣ ಬಿರುಸುಗಳನ್ನು ಸಿಡಿಸಿ ಸಂತೋಷಪಟ್ಟರಲ್ಲದೆ, ಪ್ರಾಧಿಕಾರದ ಆವರಣಕ್ಕೆ ಸಿದ್ದರಾಮಯ್ಯ ಆಗಮಿಸಿದಾಗ ಫೋಟೋ ಹಿಡಿದು ಘೋಷಣೆ ಕೂಗಿ, ಸಂತಸ ವ್ಯಕ್ತಪಡಿಸಿದರು. ಈ ವೇಳೆ ಸಿದ್ದರಾಮಯ್ಯನವರು ಕರ್ನಾಟಕದಲ್ಲಿ ಮುಖ್ಯಮಂತ್ರಿಗಳಾಗಿ ಅತೀ ಹೆಚ್ಚು ದಿನಗಳ ಕಾಲ ಆಡಳಿತ ನಡೆಸಿದ ಸವಿನೆನಪಿನಾರ್ಥ ಪ್ರದರ್ಶಿಸಿದ 'ಲೇಸರ್ ಶೋ' ಆಕರ್ಷಕವಾಗಿತ್ತು.


'ರಾಜೀವ್‌ಗಾಂಧಿ ಡ್ರ್ಯಾಗನ್ ಪಾಂಡ್' ಪ್ರದರ್ಶನದ ಝಲಕ್

JOB AND BUSINESS OPPORTUNITY
Golden Opportunity for Those Who Are Having Zeal , Energy, Enough Time to Earn Monthly Income Join Hands With Us Explore The Unlimited Opportunity Towards Creating An Income to Have A Better Life Style Only Retired, Senior Citizen, NRI, Business Professionals and Educated Home Makers (45 and Above) One Call May Change Your Life
9972187247
9902508150

WANTED
CRAFTSMAN - MALE / FEMALE
For assembly of Miniature Architectural Building Models.
REQUIREMENTS - Precision model-making skills, experience with balsa wood, foam board and acrylic & shall have knowledge on Laser Process & CAD Drawings
Interested Candidates Contact:
Mob: 99649-82545

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರಿವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ.
ಒಂದು ಗ್ರಾಂ: 12,500 (24 CT)
Mob: 9108146123

ಕಳೆದಿದೆ
ಎಂ.ಎಸ್. ಹೇಮಲತ ಬಾಬ್ತು ಹಂಚ್ಯಾ ಸಾತಗಳ್ಳಿ ಬಿ ವಲಯದ ನಿವೇಶನ ನಂ. 26ರ (50x80) ಮಂಜೂರಾತಿ ಪತ್ರ, ನಿವೇಶನ ಖಾತಾ ಪತ್ರ ಮತ್ತು ಪೌತಿ ಖಾತೆ ವರ್ಗಾವಣೆ ಪತ್ರ ಕಳೆದು ಹೋಗಿರುತ್ತದೆ
ಸಿಕ್ಕವರು ಸಂಪರ್ಕಿಸಿ
8105989749
9663859695

PREMIUM CORNER SITE FOR SALE
At Arvind Nagar
(Opp. Shiva Temple Cricle)
5670 Sft, N/W Corner
CONTACT
99800 83876 / 93421 04203

ಹಸಿರು ನಮ್ಮ ಉಸಿರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಪ್ರಚುರಪಡಿಸುವುದೇನೆಂದರೆ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ರಮೇಶ್ ಕೆ. ತಲೇಜ ಮತ್ತು ಶೋಭಾ ರಮೇಶ್ ತಲೇಜ, (ಮಾಲೀಕರು ಪೂಜಾ ಗಾರ್ಮೆಂಟ್ಸ್, ಉಮಾ ಟಾಕೀಸ್ ಎದುರು), ಮನೆ ಸಂಖ್ಯೆ 300/ಎ, ಆನಂದ ಮಾರ್ಗ, ಸಿದ್ದಾರ್ಥ ಬಡಾವಣೆ, ಮೈಸೂರು–11 ರವರಿಂದ ಕ್ರಯಕ್ಕೆ ಪಡೆಯಲು ನಿರ್ಧರಿಸಿರುತ್ತಾರೆ.

ಆದ್ದರಿಂದ ಯಾರಿಗಾದರೂ ಈ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ರೀತಿಯ ಹಕ್ಕು, ಅಧಿಕಾರ, ಪಾಲು ಇದ್ದಲ್ಲಿ ಈ ಪ್ರಕಟಣೆಯ ದಿನದಿಂದ ಹತ್ತು (10) ದಿನಗಳ ಒಳಗಾಗಿ, ಈ ಕೆಳಗಿನ ವಿಳಾಸದಾರರನ್ನು ಸಂಪರ್ಕಿಸತಕ್ಕದ್ದು, ತಪ್ಪಿದಲ್ಲಿ, ಈ ಸ್ವತ್ತಿನ ಮೇಲೆ ಯಾವುದೇ ಹಕ್ಕು ಅಧಿಕಾರಗಳು ಮತ್ತು ಅಭ್ಯಂತರಗಳು ಯಾರಿಗೂ ಇರುವುದಿಲ್ಲವೆಂದು ಭಾವಿಸಿ ಮಾರಾಟ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಸ್ವತ್ತಿನ ವಿವರ

ನಿವೇಶನ ಸಂಖ್ಯೆ 1–ಜೆ, ಸ್ವತ್ತಿನ ಸಂಖ್ಯೆ (ಇ ಖಾತಾ ಪ್ರಕಾರ) 152200405128021023 ಶ್ರೀ ಸಪ್ತಗಿರಿ ಲೇಔಟ್, ಹುಯಿಲಾಳು ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲೂಕು, ಅಳತೆ : ಪೂ–ಪ – 15.3 ಮೀಟರ್, ಉ–ದ – 24.4 ಮೀಟರ್, ಒಟ್ಟು 373.32 ಚ.ಮೀ. ಇದಕ್ಕೆ ಚಕ್ಕುಬಂದಿ: ಪೂ.ನಿ.ಸಂ. 1–ಐ, ಪ–ನಿ ಸಂ.1–ಕೆ, ಉ–ನಿ. ಸಂ 2ಈ ಮತ್ತು 2 ಎಫ್, ದ–ರಸ್ತೆ.

ಸಹಿ/– ಎಂ.ಎನ್. ಶ್ರೀಧರ್
ವಕೀಲರು,
212/ಎಸ್, 4ನೇ ಮೇನ್, 1ಬಿ ಕ್ರಾಸ್, 'ಐ' ಬ್ಲಾಕ್, ರಾಮಕೃಷ್ಣನಗರ, ಮೈಸೂರು–22
ಮೊ.ಸಂ. 94484 67703

ದಿನಾಂಕ : 4.1.2026, ಸ್ಥಳ : ಮೈಸೂರು

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀಮತಿ ಸಿದ್ದಮ್ಮ ಕೋಂ ಲೇಟ್ ಸಿದ್ದಪ್ಪ, ವಯಸ್ಸು 80 ವರ್ಷ, ವಾಸ ಕಗ್ಗಲಿಪುರ ಗ್ರಾಮ, ಸೋಸಲೆ ಹೋಬಳಿ, ತಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ, ಇವರ ಇರಾದೆಯ ಮೇರೆಗೆ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ: ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿಗೆ ಸಂಬಂಧಪಟ್ಟಂತೆ ನಮ್ಮ ಕಕ್ಷಿದಾರರು ಮೈಸೂರಿನ ಮಾನ್ಯ ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 41/2007ರ ರೀತ್ಯಾ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನವನ್ನು ಕೋರಿ ದಾವೆ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಮಾನ್ಯ ನ್ಯಾಯಾಲಯವು ತೀರ್ಪು ಮತ್ತು ಡಿಕ್ರಿಯನ್ನು ನಮ್ಮ ಕಕ್ಷಿದಾರರ ಪರವಾಗಿ ನೀಡಿರುತ್ತದೆ. ನಂತರ ನಮ್ಮ ಕಕ್ಷಿದಾರರು ಪ್ರಾಥಮಿಕ ಆದೇಶದ ಅನ್ವಯ ಅಂತಿಮ ಡಿಕ್ರಿಗಾಗಿ ಎಫ್.ಡಿ.ಪಿ. 6/2018ರ ರೀತ್ಯಾ ಪ್ರಕರಣ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಮಾನ್ಯ ನ್ಯಾಯಾಲಯವು ತೀರ್ಪು ಮತ್ತು ಡಿಕ್ರಿಯನ್ನು ನಮ್ಮ ಕಕ್ಷಿದಾರರ ಪರವಾಗಿ ನೀಡಿರುತ್ತದೆ. ನಂತರ ನಮ್ಮ ಕಕ್ಷಿದಾರರು ಪ್ರಾಥಮಿಕ ಆದೇಶದ ಅನ್ವಯ ಅಂತಿಮ ಡಿಕ್ರಿಗಾಗಿ ಎಫ್.ಡಿ.ಪಿ. 6/2018ರ ರೀತ್ಯಾ ಪ್ರಕರಣ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನಿಮ್ಮ ಕಕ್ಷಿದಾರರಾದ ನಜ್ಜುನ್ನೀಸಾರವರು ಸಹ ಉದ್ದೇಶಿ ಪ್ರತಿವಾದಿಯಾಗಿ ಸೇರ್ಪಡೆಗೊಂಡಿರುತ್ತಾರೆ. ನಂತರ ನಮ್ಮ ಕಕ್ಷಿದಾರರು ಸದರಿ ಎಫ್.ಡಿ.ಪಿ. ಪ್ರಕರಣದ ಮೇಲೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಆರ್.ಎಫ್.ಎ. ನಂ. 1023/2025ರಂತೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯು ವಿಚಾರಣಾ ಹಂತದಲ್ಲಿರುತ್ತದೆ. ಆದಕಾರಣ ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆಯವರೊಂದಿಗೆ ಯಾವುದೇ ರೀತಿಯಲ್ಲಿ ಖರೀದಿ ಮಾಡಬಾರದಾಗಿ ಈ ಮೂಲಕ ತಿಳಿಯಪಡಿಸಿದೆ. ಒಂದು ಪಕ್ಷ ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಕ್ರಯ, ಭೋಗ್ಯ, ಬಾಡಿಗೆ, ದಾನ, ರಿಲೀಸ್ ಇತ್ಯಾದಿ ದಾಖಲಾತಿಗಳನ್ನು ಮಾಡಿಸಿಕೊಂಡಲ್ಲಿ ಅಂತಹ ದಾಖಲಾತಿಗಳು ಕಾನೂನುಪ್ರಕಾರ ಊರ್ಜಿತವಾಗತಕ್ಕದ್ದಾಗಿರುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ.

ಷೆಡ್ಯೂಲ್ ಸ್ವತ್ತಿನ ವಿವರ

1) ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವಾಜಮಂಗಲ ಗ್ರಾಮದಲ್ಲಿರುವ ಸರ್ವೆ ನಂ. 76/4 ರಲ್ಲಿರುವ 2 ಎಕರೆ 33 ಗುಂಟೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 77ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 76/7ರ ಜಮೀನು, ಉತ್ತರಕ್ಕೆ: ಸರ್ವೆ ನಂ. 76/3, 76/5 ಮತ್ತು 76/9ರ ಜಮೀನುಗಳು, ದಕ್ಷಿಣಕ್ಕೆ: ಬನ್ನೂರು ರಸ್ತೆ.

2) ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವಾಜಮಂಗಲ ಗ್ರಾಮದಲ್ಲಿರುವ ಸರ್ವೆ ನಂ.76/7 ರಲ್ಲಿರುವ 2 ಎಕರೆ 30 ಗುಂಟೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 76/4ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 75ರ ಜಮೀನು, ಉತ್ತರಕ್ಕೆ: ಸರ್ವೆ ನಂ.76/1, 76/2, 76/3, 76/5 ಮತ್ತು 76/6 ಜಮೀನುಗಳು, ದಕ್ಷಿಣಕ್ಕೆ: ಬನ್ನೂರು ರಸ್ತೆ.

ವಕೀಲರು: ಸ್ವಾಮಿ, ಬಿ.ಎಸ್‌ಸಿ., ಎಲ್‌ಎಲ್.ಬಿ., ಕೆಎಆರ್ 2702/07 #36/1ಎ, 5ನೇ ಮುಖ್ಯ, 4ನೇ ಕ್ರಾಸ್, ಹೊಸ ಕೋರ್ಟ್ ಕಾಂಪ್ಲೆಕ್ಸ್ ಹತ್ತಿರ, ಜಯನಗರ, ಮೈಸೂರು–570024.
ಮೊ: 9535765007
ದಿನಾಂಕ: 05–01–2026

THE BEST QUALITY WATER PROOF Plywood
₹67/- PER SQ.FT.
15 YEARS CERTIFIED WARRANTY
Neem BOND PLATINUM
Neem AKSHAYAGOLD
9148991267 | 9901291267

NOT GETTING YOUR STAR OF MYSORE & ಮೈಸೂರು ಮಿತ್ರ
Call:
98452-96447
99003-82840

WANTED INDUSTRIAL LAND
Industrial Land with or Without Building 2 to 10 Acres, Around Hebbal / Ring Road with Wide Road Minimum 40 ft, for Out Right Sale or Joint Venture
Contact 8970293399

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

Promotional Feature



ದಿನಾಂಕ: 05–01–2026 ಸೋಮವಾರ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ತಮ್ಮ ಅಮೃತ ಹಸ್ತದಿಂದ "ನಂದಿ ಸೆಕ್ಯೂರಿಟಿ ಅಂಡ್ ಅಲೈಡ್ ಸರ್ವಿಸಸ್" ಸಂಸ್ಥೆಯ 2026ನೇ ವರ್ಷದ ಕ್ಯಾಲೆಂಡರನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ನಂದಿ ಸೆಕ್ಯೂರಿಟಿ ಅಂಡ್ ಅಲೈಡ್ ಸರ್ವಿಸಸ್ ಮಾಲೀಕರಾದ ಶ್ರೀಯುತ ಮಂಜುನಾಥ ಆರ್ ಹಾಗೂ ಕನಕ ಮೂರ್ತಿ, ಹಡಜನ ಕಾಂಗ್ರೆಸ್ ಮುಖಂಡರು, ವರುಣ ಕ್ಷೇತ್ರ, ಇತರರು ಉಪಸ್ಥಿತರಿದ್ದರು.

ದೇಶ – ವಿದೇಶ

ಒಎನ್‌ಜಿಸಿ ಪೈಪ್‌ಲೈನ್ ಸ್ಫೋಟ: ಅನಿಲ ಸೋರಿಕೆ, ಮುಗಿಲೆತ್ತರಕ್ಕೆ ಚಿಮ್ಮಿದ ಜ್ವಾಲೆ


ಅಮರಾವತಿ: ಆಂಧ್ರಪ್ರದೇಶದ ಕೊನಸೀಮಾ ಜಿಲ್ಲೆಯಲ್ಲಿ ಒಎನ್‌ಜಿಸಿ ಪೈಪ್ ಲೈನ್ ಸ್ಫೋಟಗೊಂಡು ಭಾರೀ ಪ್ರಮಾಣದ ಅನಿಲ ಸೋರಿಕೆಯಾಗಿದೆ.



ಕೊನಸೀಮಾ ಜಿಲ್ಲೆಯ ಮಾಲಿಕಿಪುರಂ ಮಂಡಲದ ಇರುಸು ಮಂಡದಲ್ಲಿ ಈ ಘಟನೆ ನಡೆದಿದೆ. ಸ್ಫೋಟದ ತೀವ್ರತೆಗೆ ಬೆಂಕಿ ಜ್ವಾಲೆ ಮುಗಿಲೆತ್ತರಕ್ಕೆ ಚಿಮ್ಮಿದ್ದು ಕೃಷಿ ಭೂಮಿಗಳು ಸುಟ್ಟು ಹೋಗಿವೆ. ಸೋರಿಕೆಯಾಗುತ್ತಿದ್ದಂತೆ ಮೂರು ಗ್ರಾಮಗಳ ಜನರನ್ನು ಹತ್ತಿರ ಜಾಗಗಳಿಗೆ ಸ್ಥಳಾಂತರ ಮಾಡಲಾಗಿದ್ದು ವಿದ್ಯುತ್, ಗ್ಯಾಸ್ ಸ್ಟೌ ಮತ್ತು ಒಲೆಯನ್ನು ಹೊತ್ತಿಸಬೇಡಿ ಎಂದು ಸೂಚಿಸಲಾಗಿದೆ. ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಒಎನ್‌ಜಿಸಿ ತಂಡವನ್ನು ಸ್ಥಳಕ್ಕೆ ರವಾನಿಸಲಾಗಿದೆ. ಒಎನ್‌ಜಿಸಿ ಬಾವಿಯಲ್ಲಿ ಮರು ಕೊರೆಯುವ ಕಾರ್ಯಾಚರಣೆ ಸಮಯದಲ್ಲಿ ಈ ಘಟನೆ ಸಂಭವಿಸಿದೆ. ಇದ್ದಕ್ಕಿದ್ದಂತೆ ಅನಿಲವು ಹೆಚ್ಚಿನ ಒತ್ತಡದಿಂದ ಸ್ಫೋಟಗೊಂಡಿರುವ ಸಾಧ್ಯತೆಯಿದೆ.

ಭಾರತ ಮೂಲದ ಮಹಿಳೆ ಕೊಲೆ: ಮಾಜಿ ಪ್ರಿಯಕರನಿಂದ ಕೃತ್ಯ ಶಂಕೆ

ಲಾಸ್ ವೇಗಸ್: ಕಳೆದ ವಾರ ನಾಪತ್ತೆಯಾಗಿದ್ದ ಭಾರತ ಮೂಲದ 27 ವರ್ಷದ ಮಹಿಳೆ ಮೃತದೇಹ ಪತ್ತೆಯಾಗಿದ್ದು, ಆಕೆಯ ಮಾಜಿ ಪ್ರಿಯಕರನೇ ಕೊಲೆ ಮಾಡಿದ್ದಾನೆ ಎಂದು ಪೊಲೀಸರು ಶಂಕಿಸಿದ್ದಾರೆ. ಎಲ್ಲಿಕ್ವಾಟ್ ಸಿಟಿಯ ನಿಖಿತಾ ಗೋಡಿಶಾಲಾ ಎಂಬುವರು ಜ.2ರಂದು ನಾಪತ್ತೆಯಾಗಿದ್ದರು.



ಅವರ ಮೃತದೇಹವು ಕೊಲಂಬಿಯಾದಲ್ಲಿರುವ ಮೇರಿಲ್ಯಾಂಡ್ ಅಪಾರ್ಟ್‌ಮೆಂಟ್‌ನಲ್ಲಿ ಮಾಜಿ ಪ್ರಿಯಕರ ಅರ್ಜುನ್ ಶರ್ಮಾ (26) ಕೋಣೆಯಲ್ಲಿ ಪತ್ತೆಯಾಗಿದೆ. ಅವರ ದೇಹದಲ್ಲಿ ಇರಿದ ಗಾಯಗಳಿವೆ ಎಂದು ಹಾವರ್ಡ್ ಕೌಂಟಿ ಪೊಲೀಸರು ತಿಳಿಸಿದ್ದಾರೆ. ನಿಕಿತಾ ಗೋಡಿಶಾಲಾಯನ್ನು ಕೊಲೆ ಮಾಡಿ ಭಾರತಕ್ಕೆ ಬಂದಿದ್ದ ಆರೋಪಿ ಅರ್ಜುನ್ ಶರ್ಮಾ(26)ನನ್ನು ಚೆನ್ನೈನಲ್ಲಿ ಇಂಟರ್‌ಪೋಲ್ ಪೊಲೀಸರು ಬಂಧಿಸಿದ್ದಾರೆ. ಘಟನೆ ಕುರಿತು ಹೊವರ್ಡ್ ಕೌಂಟಿ ಪೊಲೀಸರು ನೀಡಿದ ಮಾಹಿತಿಯಂತೆ, ನಿಕಿತಾ ಶವವು ಅರ್ಜುನ್ ಶರ್ಮಾಗೆ ಸೇರಿದ ಅಪಾರ್ಟ್‌ಮೆಂಟ್‌ನಲ್ಲಿ ಪತ್ತೆಯಾಗಿದೆ. ಅಲ್ಲದೆ ನಿಕಿತಾ ಅವರ ದೇಹದ ಮೇಲೆ ಚಾಕುವಿನಿಂದ ಇರಿದ ಗಾಯಗಳು ಕಂಡುಬಂದಿದೆ.

ಗುಲ್ಮಾರ್ಗ್‌ನಲ್ಲಿ ದಾಖಲೆಯ ಮೈನಸ್ 8.8 ಡಿಗ್ರಿ ಸೆಲ್ಸಿಯಸ್ ದಾಖಲು

ಗುಲ್ಮಾರ್ಗ್: ಜಮ್ಮು–ಕಾಶ್ಮೀರದ ಗುಲ್ಮಾರ್ಗ್ ಪ್ರವಾಸಿ ತಾಣವು ಕೊರೆಯುವ ಚಳಿಗೆ ತತ್ತರಿಸಿದ್ದು, ಈ ಚಳಿ ಗಾಲದ ಅತ್ಯಂತ ಹೆಚ್ಚು ಶೀತ ರಾತ್ರಿಯನ್ನು ದಾಖಲಿಸಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ. ಉತ್ತರ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಜನಪ್ರಿಯ ಸ್ಕೀ ರೆಸಾರ್ಟ್‌ನಲ್ಲಿ ಭಾನುವಾರ ಮತ್ತೆ ಹಿಮಪಾತವಾಗಿದ್ದು, ಕನಿಷ್ಠ ತಾಪಮಾನ ಮೈನಸ್ 8.8 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.



ಗುಲ್ಮಾರ್ಗ್‌ನಲ್ಲಿ ಕಳೆದ ಎರಡು ರಾತ್ರಿಗಳಲ್ಲಿ ಕನಿಷ್ಠ ತಾಪಮಾನ ಮೈನಸ್ 6.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಶ್ರೀನಗರದಲ್ಲಿ, ಶನಿವಾರ ರಾತ್ರಿ ಕನಿಷ್ಠ ತಾಪಮಾನ ಮೈನಸ್ 3.2 ಡಿಗ್ರಿ ಸೆಲ್ಸಿಯಸ್‌ಗೆ ಹೋಲಿಸಿದರೆ ಭಾನುವಾರ ರಾತ್ರಿ ಕನಿಷ್ಠ ತಾಪಮಾನ ಮೈನಸ್ 3.6 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಿದೆ. ದಕ್ಷಿಣ ಕಾಶ್ಮೀರದ ಪಹಲ್ಗಾಮ್ ಪ್ರವಾಸಿ ತಾಣವು ಕನಿಷ್ಠ ಮೈನಸ್ 4.8 ಡಿಗ್ರಿ ಸೆಲ್ಸಿಯಸ್ ಅನ್ನು ದಾಖಲಿಸಿದೆ. ಕಣಿವೆಯ ಹೆಬ್ಬಾಗಿಲು ಪಟ್ಟಣವಾದ ಖಾಜಿಗುಂಡ್‌ನಲ್ಲಿ ಕನಿಷ್ಠ ತಾಪಮಾನ ಮೈನಸ್ 2.0 ಡಿಗ್ರಿ ಸೆಲ್ಸಿಯಸ್, ಕೊಕರ್ನಾಗ್‌ನಲ್ಲಿ ಕನಿಷ್ಠ ಮೈನಸ್ 1.2 ಡಿಗ್ರಿ ಸೆಲ್ಸಿಯಸ್ ಮತ್ತು ಉತ್ತರ ಕಾಶ್ಮೀರದ ಕುಪ್ವಾರಾದಲ್ಲಿ ಕನಿಷ್ಠ ಮೈನಸ್ 1.8 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಅಮೇರಿಕಾದಲ್ಲಿ ಭೀಕರ ಅಪಘಾತ: ಆಂಧ್ರ ಮೂಲದ ಟೆಕ್ಕಿ ದಂಪತಿ ಸಾವು


ವಾಷಿಂಗ್ಟನ್: ಅಮೇರಿಕಾದಲ್ಲಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಆಂಧ್ರಪ್ರದೇಶ ಮೂಲದ ಸಾಫ್ಟ್‌ವೇರ್ ಎಂಜಿನಿಯರ್ ಮತ್ತು ಪತ್ನಿ ಮೃತಪಟ್ಟು, ಇಬ್ಬರು ಮಕ್ಕಳು ಗಂಭೀರ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ಕೃಷ್ಣ ಕಿಶೋರ್ (45) ಮತ್ತು ಅವರ ಪತ್ನಿ ಆಶಾ (40) ಮೃತಪಟ್ಟ ದಂಪತಿ. ಇವರು ಕಳೆದ 10 ವರ್ಷಗಳಿಂದ ಅಮೇರಿಕಾದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ. 10 ದಿನಗಳ ಹಿಂದೆಯಷ್ಟೇ ತಮ್ಮ ಹುಟ್ಟೂರಾದ ಪಾಲಕೊಲ್ಲುಗೆ ಕುಟುಂಬ ಸಮೇತ ಭೇಟಿ ನೀಡಿ ಅಮೆರಿಕಕ್ಕೆ ವಾಪಸ್ಸಾಗುವ ವೇಳೆ ದುರಂತ ಸಂಭವಿಸಿದೆ. ಹೊಸ ವರ್ಷಾಚರಣೆಯ ಹಿನ್ನೆಲೆಯಲ್ಲಿ ದುಬೈನಲ್ಲಿ ತಂಗಿದ್ದ ಕುಟುಂಬ ಬಳಿಕ ಅಮೆರಿಕಕ್ಕೆ ತೆರಳಿದ್ದು, ಈ ವೇಳೆ ಅಪಘಾತ ಸಂಭವಿಸಿದೆ. ಘಟನೆಯಲ್ಲಿ ದಂಪತಿಗಳು ಸ್ಥಳದಲ್ಲೇ ಮೃತ ಪಟ್ಟರೆ ಮಗ ಮತ್ತು ಮಗಳಿಗೆ ಗಂಭೀರ ಗಾಯಗಳಾಗಿದ್ದು, ಪ್ರಸ್ತುತ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವಾಷಿಂಗ್ಟನ್‌ನ ತೆಲುಗು ಸಮುದಾಯ ಹಾಗೂ ಉತ್ತರ ಅಮೆರಿಕದ ತೆಲುಗು ಅಸೋಸಿಯೇಷನ್ ಅಪಘಾತದಲ್ಲಿ ಬದುಕುಳಿದ ಮಕ್ಕಳ ನೆರವಿಗೆ ಧಾವಿಸಿವೆ.

ಬೀದಿನಾಯಿಗೆ ನೈಂಟಿ ಕುಡಿಸಿದ ಅಸಾಮಿ ಈಗ ಪೊಲೀಸರ ಅತಿಥಿ

ಬಾಗ್ಪತ್: ಉತ್ತರ ಪ್ರದೇಶದಲ್ಲಿ ಬೀದಿನಾಯಿಗೆ ಬಲವಂತವಾಗಿ ಮದ್ಯ ಕುಡಿಸಿದ ಆರೋಪದ ಮೇಲೆ ಯುವಕನೊಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.




ಆರೋಪಿಯು ಬೀದಿ ನಾಯಿಗೆ ಮದ್ಯ ಕುಡಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಬಾಗ್ಪತ್ ಸಾಮಾಜಿಕ ಮಾಧ್ಯಮ ಸೆಲ್ ಹಾಗೂ ರಾಮಲಾ ಪೊಲೀಸ್ ಠಾಣೆಯ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಆರೋಪಿಯನ್ನು ಬಂಧಿಸಿದ್ದು, ಅವನನ್ನು ಜಿತೇಂದ್ರ ಅಲಿಯಾಸ್ ಬಲ್ಲು ಎಂದು ಗುರುತಿಸಲಾಗಿದೆ ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ವಿಚಾರಣೆಯ ನಂತರ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾಯಿ ರಕ್ಷಿಸಲು ಹೋಗಿ ತೋಡಿಗೆ ಬಿದ್ದ ಕಾರು


ತೋಡಿಗೆ ಉರುಳಿ ಬಿದ್ದಿರುವ ಕಾರು

ಮಡಿಕೇರಿ: ರಸ್ತೆಯಲ್ಲಿ ಅಡ್ಡ ಬಂದ ನಾಯಿಯನ್ನು ಉಳಿಸಲು ಹೋಗಿ ಚಾಲಕನ ನಿಯಂತ್ರಣ ಕಳೆದುಕೊಂಡ ಕಾರೊಂದು(ಕೆಎ.12, ಝಡ್–1737) ರಸ್ತೆ ಬದಿಯ ತೋಡಿನೊಳಗೆ ಉರುಳಿ ಬಿದ್ದ ಘಟನೆ ನಾಪೋಕ್ಲು ಮೂರ್ನಾಡು ಮುಖ್ಯ ರಸ್ತೆಯ ಬೊಳಿಬಾಣೆ ಎಂಬಲ್ಲಿ ಭಾನುವಾರ ಮಧ್ಯ ರಾತ್ರಿ ನಡೆದಿದೆ.

ಕಾವೇರಿ ನದಿಗೆ ಹೊಂದಿಕೊಂಡಿರುವ ರಸ್ತೆ ಬದಿಯ ತೋಡಿನೊಳಗೆ ಕಾರು ಉರುಳಿ ಬಿದ್ದಿದ್ದು, ಸಂಪೂರ್ಣ ಜಖಂಗೊಂಡಿದೆ. ಚಾಲಕ ಮೂರ್ನಾಡು ನಿವಾಸಿ ಎಂದು ತಿಳಿದು ಬಂದಿದ್ದು ಸಣ್ಣ ಪುಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ತೋಡಿನೊಳಗೆ ಉರುಳಿ ಬಿದ್ದ ಕಾರನ್ನು ಸೋಮವಾರ ಕ್ರೇನ್ ಮೂಲಕ ಮೇಲೆತ್ತಲಾಗಿದೆ. ಸ್ಥಳಕ್ಕೆ ನಾಪೋಕ್ಲು ಪೊಲೀಸರು ಭೇಟಿ ನೀಡಿ, ಮಹಜರು ನಡೆಸಿ, ದೂರು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಲಾರಿ, ಬೈಕ್ ಮುಖಾಮುಖಿ ಡಿಕ್ಕಿ: ಸವಾರ ಸಾವು



ಗೋಣಿಕೊಪ್ಪ, ಜ.5– ಬೈಕ್ ರೇಸ್‌ನಲ್ಲಿ ಪಾಲ್ಗೊಂಡು ಹಿಂದಿರುಗುತ್ತಿದ್ದ ಸವಾರ ಅಪಘಾತಕ್ಕೆ ತುತ್ತಾದ ಘಟನೆ ವಿರಾಜಪೇಟೆ ರಸ್ತೆಯ ಹಾತೂರು ಸಮೀಪ ನಡೆದಿದೆ.

ಬೈಕ್ ಸವಾರ ಬೆಕ್ಕೆಸುಡ್ಲೂರು ನಿವಾಸಿ ಸುಳ್ಳಿಮಾಡ ಭಜನ್ ದೇವಯ್ಯ (27) ಮೃತ ವ್ಯಕ್ತಿ. ಕೊಡಗಿನಿಂದ ಕೇರಳಕ್ಕೆ ಕೊಡಗು ರೈಡರ್ಸ್ ಕ್ಲಬ್ ವತಿಯಿಂದ ಆಯೋಜಿಸಲಾಗಿದ್ದ ರೈಡ್‌ನಲ್ಲಿ ಪಾಲ್ಗೊಂಡು ಭಾನುವಾರ ಸಂಜೆ ಅಲ್ಲಿಂದ ಹಿಂತಿರುಗುತ್ತಿದ್ದಾಗ ರಾತ್ರಿ ಸಮಯದಲ್ಲಿ ಹಾತೂರಿನ ವನ ಭದ್ರಕಾಳಿ ದೇವಸ್ಥಾನದ ಸಮೀಪ ಕಾರನ್ನು ಓವರ್ ಟೇಕ್ ಮಾಡಲೆತ್ನಿಸಿ ಎದುರಿನಿಂದ ಬಂದ ಲಾರಿಗೆ ಡಿಕ್ಕಿ ಹೊಡೆದಿದ್ದಾರೆ ಎಂದು ಹೇಳಲಾಗಿದೆ. ಗೋಣಿಕೊಪ್ಪ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಆರ್.ಕೃಷ್ಣ ನಿಧನ



ಕುಶಾಲನಗರ, ಜ.5–ಸಮೀಪದ ಕೂಡುಮಂಗಳೂರು ಗ್ರಾಪಂ ವ್ಯಾಪ್ತಿಯ ಬಸವತ್ತೂರು ಗ್ರಾಮದ ನಿವಾಸಿ, ಕೂಡಿಗೆಯ ಆರ್.ಕೆ. ಟೈಲರ್ ಎಂದು ಹೆಸರುವಾಸಿಯಾಗಿದ್ದ ಆರ್.ಕೃಷ್ಣ (75) ಸೋಮವಾರ ಸಂಜೆ ನಿಧನರಾದರು.

ಮೃತರು ಮೂವರು ಪುತ್ರರು, ಓರ್ವ ಪುತ್ರಿಯನ್ನು ಆಗಲಿದ್ದಾರೆ. ಅಂತ್ಯಕ್ರಿಯೆ ಜ.6ರಂದು ಸ್ವಗ್ರಾಮ ಬಸವತ್ತೂರಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂವಿಧಾನದ 8ನೇ ಪರಿಚ್ಛೇದಕ್ಕೆ ಕೊಡವ ಭಾಷೆ ವರದಿಗೆ ಸೂಚನೆ


ಕೊಡವ ಸಮಾಜದ ಸಭಾಂಗಣದಲ್ಲಿ ಸೋಮವಾರ ನಡೆದ ಸಭೆಯನ್ನು ಶಾಸಕ ಎ.ಎಸ್. ಪೊನ್ನಣ್ಣ ಉದ್ಘಾಟಿಸಿದರು.

ವಿರಾಜಪೇಟೆ, ಜ.5–ಕೊಡವ ಭಾಷೆಯನ್ನು ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರ್ಪಡೆ ಮಾಡುವ ಬಗ್ಗೆ ಸರ್ಕಾರ ವರದಿ ಕೇಳಿದ್ದು, ಕಾನೂನಾತ್ಮಕ ವರದಿ ಸಿದ್ಧಪಡಿಸುವಂತೆ ಶಾಸಕ ಎ.ಎಸ್.ಪೊನ್ನಣ್ಣ ಅವರು ಸೂಚನೆ ನೀಡಿದ್ದಾರೆ.

ಪಟ್ಟಣದ ಕೊಡವ ಸಮಾಜದ ಸಭಾಂಗಣದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರ್ಪಡೆ ಮಾಡುವಂತೆ ದಶಕಗಳಿಂದ ಹೋರಾಟ ನಡೆಸಿಕೊಂಡು ಬಂದಿದ್ದು, ಈಗಾಗಲೇ 2 ಸಲ ವರದಿ ಸಲ್ಲಿಸಲಾಗಿದೆ. ಹಾಗಾಗಿ ಕೊಡವ ಭಾಷೆ ಸಂವಿಧಾನದ 8ನೇ ಪರಿಚ್ಛೇದ ಸೇರ್ಪಡೆ ಪ್ರಕ್ರಿಯೆಯಲ್ಲಿ ಎಲ್ಲರೂ ಕೈಜೋಡಿಸುವಂತೆ ತಿಳಿಸಿ, ಮುಖ್ಯಮಂತ್ರಿ ಬಳಿಗೆ ನಿಯೋಗ ಕರೆದುಕೊಂಡು ಹೋಗುವುದಾಗಿ ಆಶ್ವಾಸನೆ ನೀಡಿದರು.

ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರುವುದರಿಂದ ರಾಜ್ಯ, ರಾಷ್ಟ್ರ ಮಟ್ಟದ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮ್ಮೇಳನ, ಶಾಲಾ ಕಾಲೇಜು ಹಾಗೂ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಹಾಗೂ ಕೇಂದ್ರ ಮತ್ತು ರಾಜ್ಯ ನಾಗರಿಕ ಸೇವೆಗಳಲ್ಲೂ ಸಹ ಕೊಡವ ಭಾಷೆ ಅಧ್ಯಯನಕ್ಕೆ ಅವಕಾಶ ಸೇರಿದಂತೆ ಹಲವು ಉಪಯೋಗಗಳು ದೊರೆಯಲಿದೆ ಎಂದು ಮಹೇಶ್ ನಾಚಯ್ಯ ಅಭಿಪ್ರಾಯಿಸಿದರು.

ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಅರುಣ್ ಮಾಚಯ್ಯ, ಪಿ.ಜಿ.ಅಯ್ಯಪ್ಪ, ಕೊಡವ ಭಾಷಿಕ ಜನಾಂಗಗಳ ಪ್ರಮುಖರಾದ ಡಾ. ಮೇಚಿರ ಸುಭಾಷ್ ನಾಣಯ್ಯ, ಪರದಂಡ ಕೆ.ಸುಬ್ರಮಣಿ, ಕೊಡವ ನ್ಯಾಷನಲ್ ಕೌನ್ಸಿಲ್ ನಂದಿನೆರವಂಡ ನಾಚಪ್ಪ, ಕೊಕ್ಕಲೆಮಾಡ ಮಂಜು ಚಿಣ್ಣಪ್ಪ, ಡಾ.ತೀತಿರ ರೇಖಾ ವಸಂತ್, ಕೊಡವ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಅಮ್ಮಾಟಂಡ ಪಾರ್ವತಿ ಅಪ್ಪಯ್ಯ, ಮಾಧ್ಯಮ ಅಕಾಡೆಮಿ ಮಾಜಿ ಅಧ್ಯಕ್ಷ ಮನೆಯಪಂಡ ಎ.ಪೊನ್ನಪ್ಪ, ಬೆಂಗಳೂರು ಕೊಡವ ಸಮಾಜದ ಅಧ್ಯಕ್ಷ ಚೆರಿಯಪಂಡ ಸುರೇಶ್ ಚಂಗಪ್ಪ, ಕೊಡವ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಬಿದ್ದಾಟಂಡ ಎಸ್.ತಮ್ಮಯ್ಯ, ಮುಲ್ಲೆಂಗಡ ರೇವತಿ ಪೂವಯ್ಯ, ಬಾಚರಣಿಯಂಡ ಅಪ್ಪಣ್ಣ, ರಾಜು ಬೋಪಯ್ಯ, ಮಾತನಾಡಿದರು.

ವಿಧಾನ ಪರಿಷತ್ ಮಾಜಿ ಸದಸ್ಯರಾದ ವೀಣಾ ಅಚ್ಚಯ್ಯ, ಕಳ್ಳಿಚಂಡ ವಿಷ್ಣು ಕಾರ್ಯಪ್ಪ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್, ಕೊಡಗು ಜಾನಪದ ಪರಿಷತ್ತು ಅಧ್ಯಕ್ಷ ಬಿ.ಜಿ.ಅನಂತಶಯನ ವಿವಿಧ ಕೊಡವ ಸಮಾಜದ ಅಧ್ಯಕ್ಷರು, ಬರಹಗಾರರು, ಸಾಹಿತಿಗಳು, ಭಾಷಾ ತಜ್ಞರು ಇತರರು ಇದ್ದರು.

ಗಾಂಜಾ ಮಾರಾಟ : ಮೂವರು ಅಸ್ಸಾಂ ಕಾರ್ಮಿಕರ ಬಂಧನ

ಮಡಿಕೇರಿ: ಮೂರ್ನಾಡು ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಮೂವರು ಅಸ್ಸಾಂ ಕಾರ್ಮಿಕರನ್ನು ಗ್ರಾಮಾಂತರ ಠಾಣಾ ಪೊಲೀಸರು ಬಂಧಿಸಿ, ಅವರ ಬಳಿ ಇದ್ದ 1,400 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆದಿದ್ದಾರೆ. ಅಸ್ಸಾಂ ರಾಜ್ಯದ ಸೈಫಾಲಿ ಇಸ್ಲಾಂ, ಅಜೀಂ ಆಲಿ ಹಾಗೂ ಕಾನೂನು ಸಂಘರ್ಷಕ್ಕೆ ಒಳಪಟ್ಟ ಆರೋಪಿಯಾಗಿದ್ದಾರೆ. ಆರೋಪಿಗಳು ಬ್ಯಾಗ್‌ನಲ್ಲಿ ಗಾಂಜಾ ಇಟ್ಟುಕೊಂಡು ಮರದ ಕೆಳಗೆ ಮಾರಲು ಸಿದ್ಧತೆ ನಡೆಸುತ್ತಿದ್ದಾಗಲೇ ಪೊಲೀಸರು ದಾಳಿ ನಡೆಸಿ ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯಿದೆ ಅಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆರ್ಥಿಕ ವಂಚನೆ ಪ್ರಕರಣಗಳ ಬಗ್ಗೆ ಸದಾ ಜಾಗೃತರಾಗಿರಿ



ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಜನ ಸಂಪರ್ಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಮಡಿಕೇರಿ,ಜ.5–ಆಧುನಿಕ ಸಾಮಾಜಿಕ ಜಾಲತಾಣಗಳ ಮೂಲಕ ನಡೆಯುವ ಸೈಬರ್ ಕ್ರೈಂ, ಡಿಜಿಟಲ್ ಅರೆಸ್ಟ್ ಮೊದಲಾದ ಆರ್ಥಿಕ ವಂಚನೆ ಪ್ರಕರಣಗಳ ಬಗ್ಗೆ ಸದಾ ಜಾಗೃತರಾಗಿ ಇತರರಲ್ಲಿ ಅರಿವು ಮೂಡಿಸಿ ಎಂದು ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ತಿಳಿಸಿದ್ದಾರೆ.

ನಗರದ ಪೊಲೀಸ್ ಸಮುದಾಯ ಭವನ ಮೈತ್ರಿಯಲ್ಲಿ ಆಯೋಜಿತ ಮಡಿಕೇರಿ ಉಪ ವಿಭಾಗದ ಜನ ಸಂಪರ್ಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಸ್ತುತ ಸಾಮಾಜಿಕ ಜಾಲತಾಣಗಳ ಮೂಲಕ ನಡೆಯುತ್ತಿರುವ ಹಣಕಾಸಿನ ವಂಚನೆ ಪ್ರಕರಣಗಳು ಪ್ರಮುಖವಾಗಿ ಹಿರಿಯರು, ನಿವೃತ್ತ ಉದ್ಯೋಗಿಗಳನ್ನೇ ಗುರಿಯಾಗಿಸಿಕೊಂಡು ನಡೆಯುತ್ತಿದೆ. ಸಾಮಾಜಿಕ ಜಾಲ ತಾಣಗಳ ಮೂಲಕ ತಮ್ಮನ್ನು ಸಂಪರ್ಕಿಸುವ ವಂಚಕರು ಹಣವನ್ನು ದುಪ್ಪಟ್ಟು ಮಾಡಿಕೊಡುವ ಆಮಿಷವನ್ನೊಡ್ಡಿ, ಆರಂಭಿಕ ಹಂತದಲ್ಲಿ ಸಣ್ಣ ಮೊತ್ತವನ್ನು ನೀವು ಅದರಲ್ಲಿ ತೊಡಗಿಸಿದಲ್ಲಿ ಹೆಚ್ಚಿನ ಮೊತ್ತವನ್ನು ನೀಡುತ್ತಾರೆ. ನಂತರದ ದಿನಗಳಲ್ಲಿ ನಿಮ್ಮಲ್ಲಿ ವಿಶ್ವಾಸವನ್ನು ಮೂಡಿಸುವ ಮೂಲಕ ದೊಡ್ಡ ಮೊತ್ತದ ಹಣವನ್ನು ಹೂಡುವಂತೆ ಪ್ರೇರೇಪಿಸಿ ವಂಚಿಸುತ್ತಾರೆ ಎಂದು ಕಿವಿಮಾತು ಹೇಳಿದರು.

ಶಿಕ್ಷಣವಂತರೇ ಟಾರ್ಗೆಟ್: ಡಿಜಿಟಲ್ ಅರೆಸ್ಟ್‌ನಂತಹ ಪ್ರಕರಣಗಳಲ್ಲಿ ಸಿಲುಕುವ ಬಹುತೇಕ ಮಂದಿ ಶಿಕ್ಷಣವಂತರೇ ಆಗಿದ್ದಾರೆ. ಯಾವುದೇ ಕಾರಣಕ್ಕೂ ನಿಮ್ಮ ವಾಟ್ಸ್ ಅಪ್, ಫೇಸ್ ಬುಕ್ ಸೇರಿದಂತೆ ಸಾಮಾಜಿಕ ಜಾಲತಾಣಗಳ ಮೂಲಕ ಬರುವ ಅನಾಮಧೇಯ ಲಿಂಕ್‌ಗಳನ್ನು ಬಳಸುವ ಪ್ರಯತ್ನ ಮಾಡಬೇಡಿ. ಇಂತಹ ಯಾವುದೇ ಸಂಕಷ್ಟಕ್ಕೆ ಸಿಲುಕಿದ್ದಲ್ಲಿ ತಕ್ಷಣವೇ ಪೊಲೀಸ್ ಇಲಾಖೆಯ 1930 ನೆರವಿಗೆ ದೂರನ್ನು ದಾಖಲಿಸುವಂತೆ ಮನವಿ ಮಾಡಿದರು.

ಪ್ರವಾಸಿ ಕೇಂದ್ರವಾಗಿರುವ ಜಿಲ್ಲೆಯಲ್ಲಿ ಹೋಂ ಸ್ಟೇ ಉದ್ಯಮ ದೊಡ್ಡ ಪ್ರಮಾಣದಲ್ಲಿದೆ. ಅನುಮತಿ ರಹಿತವಾಗಿ ಹೋಂ ಸ್ಟೇಗಳನ್ನು ನಡೆಸುತ್ತಿದ್ದಲ್ಲಿ ಅಂತಹವರ ವಿರುದ್ಧ ಕಾನೂನು ಬದ್ಧವಾಗಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಜಿಲ್ಲೆಯ ತೋಟಗಳಲ್ಲಿ ಕಾರ್ಯ ನಿರ್ವಹಿಸಲು ಹೊರ ಜಿಲ್ಲೆ, ರಾಜ್ಯಗಳಿಂದ ಸಾಕಷ್ಟು ಕಾರ್ಮಿಕರು ಆಗಮಿಸುತ್ತಾರೆ. ಇಂತಹ ಕಾರ್ಮಿಕರನ್ನು ಇರಿಸಿಕೊಳ್ಳುವ ಮೊದಲು ಅವರ ಆಧಾರ್ ಕಾರ್ಡ್ ಸೇರಿದಂತೆ ಅಗತ್ಯ ದಾಖಲೆಗಳನ್ನು ಪರಿಶೀಲಿಸಿ ಅವರು ಎಲ್ಲಿಂದ ಬಂದವರು ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು. ಎಂದರು.

ಸಭೆಯಲ್ಲಿ ಎಎಸ್‌ಪಿ ಬಿ.ಪಿ.ದಿನೇಶ್ ಕುಮಾರ್, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಸದಸ್ಯರು ಪಾಲ್ಗೊಂಡಿದ್ದರು.

ಆರೇಳು ತಿಂಗಳ ಹಿಂದೆ ವ್ಯಕ್ತಿ ಆತ್ಮಹತ್ಯೆ

ನೇಣು ಬಿಗಿದ ಸ್ಥಿತಿಯಲ್ಲಿ ಅಸ್ಥಿಪಂಜರ!

ಭಾರತೀನಗರ, ಜ.5– ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆಯಲ್ಲಿ ಕಳೆದ ಆರೇಳು ತಿಂಗಳ ಹಿಂದೆ ವ್ಯಕ್ತಿಯೊಬ್ಬರು ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಸೋಮವಾರ ನೇಣು ಬಿಗಿದ ಸ್ಥಿತಿಯಲ್ಲಿ ಆತನ ಅಸ್ಥಿಪಂಜರ ಪತ್ತೆಯಾಗಿದೆ.

ಗ್ರಾಮದ ಮಹದೇವಸ್ವಾಮಿ ಅಲಿಯಾಸ್ ಬೋಟಿ ಮಹದೇವ (45) ಆತ್ಮಹತ್ಯೆ ಮಾಡಿಕೊಂಡವರು. ಈತನಿಗೆ ಪತ್ನಿ ಪವಿತ್ರ, ಪುತ್ರ, ಪುತ್ರಿ ಇದ್ದಾರೆ.

ವಿವರ: ಕೆ.ಎಂ.ದೊಡ್ಡಿಯಲ್ಲಿ ಬೀದಿ ಬದಿ ಹೋಟೆಲ್ ನಡೆಸುತ್ತಿದ್ದ ಮಹದೇವಸ್ವಾಮಿ ಅವರು ದೊಡ್ಡರಸಿನಕೆರೆಯ ಚಿಕ್ಕಮಾಯಿಗಯ್ಯ ಎಂಬುವರ ಮನೆಯನ್ನು ಬಾಡಿಗೆ ಪಡೆದು ವಾಸವಾಗಿದ್ದರು. ಆದರೆ ವಿಪರೀತ ಸಾಲ ಮಾಡಿಕೊಂಡಿದ್ದರಿಂದ ನಾಪತ್ತೆಯಾಗಿದ್ದರು. ಈತನ ಪತ್ನಿ ನಾಪತ್ತೆಯಾದ ಗಂಡನನ್ನು ಎಲ್ಲೆಡೆ ಹುಡುಕಿ ಸಾಕಾಗಿದ್ದರು. ನಂತರ ತಮ್ಮ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಬೆಂಗಳೂರಿಗೆ ತೆರಳಿ ಖಾಸಗಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ.

ಚಿಕ್ಕಮಾಯಿಗಯ್ಯ ಅವರ ಪತ್ನಿ ಗೀತಾ ಅವರು ಮನೆ ಬಾಡಿಗೆ ನೀಡದ ಹಿನ್ನೆಲೆಯಲ್ಲಿ ಮಹದೇವಸ್ವಾಮಿ ಅವರ ಸಹೋದರ ರವಿ ಅವರನ್ನು ಮನೆ ಖಾಲಿ ಮಾಡಿಕೊಡುವಂತೆ ಕೇಳಿದ್ದರು. ಈ ವೇಳೆ ರವಿ ಮಹದೇವಸ್ವಾಮಿ ನಾಪತ್ತೆಯಾಗಿರುವ ಕಾರಣ ಆತ ಸಿಗುವವರೆಗೂ ಮನೆ ಖಾಲಿ ಮಾಡಲು ಸಮಯ ನೀಡುವಂತೆ ಮನವಿ ಮಾಡಿದ್ದರು. ಆದರೆ ಮನೆ ಮಾಲೀಕರು ಬಾಡಿಗೆ ವಿಷಯ ಕೈಬಿಟ್ಟು, ಫೆಬ್ರವರಿಯಲ್ಲಿ ಗ್ರಾಮದೇವತೆ ಏಳೂರಮ್ಮ ದೇವಿ ಜಾತ್ರೆ ಇರುವುದರಿಂದ ಸುಣ್ಣ, ಬಣ್ಣ ಬಳಿಯಲು ಮನೆ ಖಾಲಿ ಮಾಡುವಂತೆ ರವಿ ಅವರಿಗೆ ತಿಳಿಸಿದ್ದರು.

ಅದರಂತೆ ರವಿ ಮನೆಯಲ್ಲಿನ ಸಾಮಾನು ಸರಂಜಾಮು ತೆಗೆದುಕೊಳ್ಳಲು ಮನೆಯ ಹತ್ತಿರ ಹೋಗಿದ್ದು, ಮನೆ ಬಾಗಿಲನ್ನು ಒಳಗಿನಿಂದ ಬೀಗ ಹಾಕಿರುವುದು ತಿಳಿದು ಹಾರೆ ಸೇರಿದಂತೆ ಮತ್ತಿತರ ಆಯುಧ ಬಳಸಿ ಬಾಗಿಲು ತೆರೆದಿದ್ದಾರೆ. ಈ ವೇಳೆ ಮನೆ ಬಾಗಿಲ ಹಿಂಬದಿ ಮಹದೇವಸ್ವಾಮಿ ಅವರು ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಅವರ ಅಸ್ಥಿಪಂಜರ ಪತ್ತೆಯಾಗಿದೆ ಎನ್ನಲಾಗಿದೆ. ಈತ ಮನೆಬಿಟ್ಟು ಹೋದ ನಂತರ ಗ್ರಾಮದಲ್ಲಿ ಯಾರಿಗೂ ಕಾಣಿಸಿಕೊಂಡಿರಲಿಲ್ಲ. ಈ ಮಧ್ಯೆ ರಾತ್ರಿ ವೇಳೆ ಮನೆಗೆ ಆಗಮಿಸಿ ನೇಣು ಬಿಗಿದುಕೊಂಡು ಸಾವನ್ನಪ್ಪಿರಬಹುದೆಂದು ಸಹೋದರ ರವಿ ಪೊಲೀಸರಿಗೆ ತಿಳಿಸಿದ್ದಾರೆ. ಮಹದೇವಸ್ವಾಮಿ ಆತ್ಮಹತ್ಯೆ ವಿಚಾರವನ್ನು ಬೆಂಗಳೂರಿನಲ್ಲಿದ್ದ ಪತ್ನಿ ಪವಿತ್ರ ಅವರಿಗೆ ತಿಳಿಸಿ ಅಸ್ಥಿಪಂಜರವನ್ನು ಕೆ.ಎಂ.ದೊಡ್ಡಿ ಪೊಲೀಸರು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ರವಾನಿಸಿದ್ದಾರೆ. ಬಳಿಕ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ಕೆ.ಎಂ. ದೊಡ್ಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ದೀರ್ಘಾವಧಿ ಸಿಎಂ ಆಗಿ ಸಿದ್ದರಾಮಯ್ಯ ದಾಖಲೆ ಹಿನ್ನೆಲೆ

ಇಂದು ಕೆ.ಆರ್.ಪೇಟೆಯಲ್ಲಿ ವಿಜಯೋತ್ಸವ


ಸಭೆಯಲ್ಲಿ ಜಿಪಂ ಮಾಜಿ ಸದಸ್ಯ ದೇವರಾಜು ಮಾತನಾಡಿದರು.

ಕೆ.ಆರ್.ಪೇಟೆ, ಜ.5– ಸಿಎಂ ಸಿದ್ದರಾಮಯ್ಯ ಅವರು ಕರ್ನಾಟಕ ವಿಧಾನ ಸಭೆ ಇತಿಹಾಸದಲ್ಲೇ ಅತೀ ಹೆಚ್ಚು ವರ್ಷಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿ ದಾಖಲೆ ನಿರ್ಮಿಸಿದ್ದು, ಈ ಹಿನ್ನೆಲೆಯಲ್ಲಿ ಜ.6ರಂದು ಪಟ್ಟಣದಲ್ಲಿ ವಿಜಯೋತ್ಸವ ಹಾಗೂ ಸಿಹಿ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಸಿದ್ದರಾಮಯ್ಯ ಅಭಿಮಾನಿ ಬಳಗದ ಅಧ್ಯಕ್ಷ ಹಾಗೂ ಜಿಪಂ ಮಾಜಿ ಸದಸ್ಯ ಕೋಡಿಮಾರನಹಳ್ಳಿ ದೇವರಾಜು ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಾಜಿ ಸಿಎಂ ಡಿ.ದೇವರಾಜ ಅರಸು ಅವರು 7 ವರ್ಷ 239 ದಿನಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿ ದಾಖಲೆ ನಿರ್ಮಿಸಿದ್ದರು. ಇದೀಗ ಪ್ರಸ್ತುತ ಸಿಎಂ ಸಿದ್ದರಾಮಯ್ಯ ಅವರು ಜ.6ಕ್ಕೆ 7 ವರ್ಷ 240 ದಿನಗಳ ಕಾಲ ಸಿಎಂ ಆಗಿ ಸೇವೆ ಸಲ್ಲಿಸುವ ಮೂಲಕ ಡಿ.ದೇವರಾಜು ಅರಸು ಅವರ ದಾಖಲೆ ಮುರಿದಿದ್ದಾರೆ. ಈ ಹಿನ್ನೆಲೆಯಲ್ಲಿ ತಾಲೂಕು ಅಹಿಂದ ವರ್ಗಗಳ ಒಕ್ಕೂಟ, ತಾಲೂಕು ಸಿದ್ದರಾಮಯ್ಯ ಅಭಿಮಾನಿಗಳ ಬಳಗ ಹಾಗೂ ತಾಲೂಕು ಬ್ಲಾಕ್ ಕಾಂಗ್ರೆಸ್ ಘಟಕದ ಸಂಯುಕ್ತಾಶ್ರಯದಲ್ಲಿ ಜ.6 ರಂದು ಬೆಳಗ್ಗೆ 10 ಗಂಟೆಗೆ ಪ್ರವಾಸಿ ಮಂದಿರದಲ್ಲಿ ಸಭೆ ಸೇರಲಾಗುವುದು. ಬಳಿಕ ವಿವಿಧ ದೇವಾಲಯಗಳಲ್ಲಿ ಸಿದ್ದರಾಮಯ್ಯ ಅವರ ಹೆಸರಿನಲ್ಲಿ ಅರ್ಚನೆ, ಅಭಿಷೇಕ, ವಿಶೇಷ ಪೂಜೆ ಸಲ್ಲಿಸಲಾಗುವುದು. ನಂತರ ವಿಜಯೋತ್ಸವ ಹಾಗೂ ಸಿಹಿ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹೀಗಾಗಿ ಸಿದ್ದರಾಮಯ್ಯ ಅಭಿಮಾನಿಗಳು, ಅಹಿಂದಾ ಮುಖಂಡರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಸಮಾಜ ಸೇವಕ ಆರ್‌ಟಿಒ ಮಲ್ಲಿಕಾರ್ಜುನ್, ಪುರಸಭಾ ಸದಸ್ಯ ಕೆ.ಆರ್. ರವೀಂದ್ರಬಾಬು, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಟಿ.ಎನ್.ದಿವಾಕರ್, ತಾಪಂ ಮಾಜಿ ಸದಸ್ಯರಾದ ಶ್ಯಾಮಣ್ಣ, ಸಣ್ಣನಿಂಗೇಗೌಡ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲೋಲಾಕ್ಷಿ, ಮೀನಾಕ್ಷಿ, ವಿನುತ, ಗ್ಯಾರಂಟಿ ಸಮಿತಿ ಸದಸ್ಯರಾದ ಶಿವಣ್ಣ, ಶಿವಮ್ಮ, ಮುಖಂಡರಾದ ರಾಯಪ್ಪ ಈರಪ್ಪ ಜವರಯ್ಯ ಸೇರಿದಂತೆ ಹಲವರಿದ್ದರು.

ಶ್ರೀತ್ರಿಪುರ ಸುಂದರಿ ಅಮ್ಮನವರ ರಥೋತ್ಸವ ಹಿನ್ನೆಲೆ: ವಿಶೇಷ ಪೂಜೆ


ಚಿನಕುರಳಿಯಲ್ಲಿ ಭಕ್ತರು ಗ್ರಾಮದ ಎಲ್ಲಾ ದೇವರಿಗೂ ವಿಶೇಷ ಪೂಜೆ ಸಲ್ಲಿಸಿದರು.

ಚಿನಕುರಳಿ, ಜ.5– ಮೂಗೂರು ಶ್ರೀ ತ್ರಿಪುರ ಸುಂದರಿ ಅಮ್ಮನವರ ರಥೋತ್ಸವ ಹಿನ್ನೆಲೆಯಲ್ಲಿ ಚಿನಕುರಳಿಯ ಅಮ್ಮನವರ ಭಕ್ತರು ಗ್ರಾಮದ ಎಲ್ಲಾ ದೇವರಿಗೂ ವಿಶೇಷ ಪೂಜೆ ಸಲ್ಲಿಸಿದರು. ರಥೋತ್ಸವ ಅಂಗವಾಗಿ ಭಕ್ತರು ಗ್ರಾಮದ ಹೊರವಲಯದಲ್ಲಿರುವ ಶ್ರೀರಾಮೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. ಬಳಿಕ ಮೆರವಣಿಗೆ ಮೂಲಕ ಗ್ರಾಮದ ಆಂಜನೇಯಸ್ವಾಮಿ, ಶ್ರೀಆದಿಶಕ್ತಿ, ಮಂಚಮ್ಮ, ಗಣಪತಿ, ದಣ್ಣಮ್ಮ, ಮಾಸ್ತಮ್ಮ ದೇವಸ್ಥಾನಗಳಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು.

ನಂತರ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆದ ಅನ್ನ ಸಂತರ್ಪಣೆಯಲ್ಲಿ 5 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಈ ವೇಳೆ ಜಿಪಂ ಮಾಜಿ ಸದಸ್ಯೆ ನಾಗಮ್ಮ ಪುಟ್ಟರಾಜು, ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಅಶೋಕ್ ಸೇರಿದಂತೆ ಹಲವು ಮುಖಂಡರು ಇದ್ದರು.

ತಿಥಿ ಸಿನಿಮಾ ಖ್ಯಾತಿಯ ಸೆಂಚುರಿಗೌಡ ನಿಧನ



ಮಂಡ್ಯ, ಜ.5– ರಾಷ್ಟ್ರ ಪ್ರಶಸ್ತಿ ವಿಜೇತ ಹಾಗೂ ತಿಥಿ ಸಿನಿಮಾದ ಸೆಂಚುರಿಗೌಡ ಅಲಿಯಾಸ್ ಸಿಂಗ್ರಿಗೌಡ (101) ಭಾನುವಾರ ರಾತ್ರಿ ಪಾಂಡವಪುರ ತಾಲೂಕಿನ ಸಿಂಗರಿ ಗೌಡನಕೊಪ್ಪಲು ಗ್ರಾಮದಲ್ಲಿ ನಿಧನರಾದರು.

ಮಂಡ್ಯ ಭಾಷೆ ಮತ್ತು ನಟನೆ ಮೂಲಕ ಚಿತ್ರರಸಿಕರನ್ನು ರಂಜಿಸಿದ್ದ ಸಿಂಗ್ರೀಗೌಡರನ್ನು ತಿಥಿ ಸಿನಿಮಾದ ನಂತರ ಎಲ್ಲರೂ 'ಸೆಂಚುರಿಗೌಡ' ಎಂದೇ ಕರೆಯುತ್ತಿದ್ದರು. ತಿಥಿ ಚಿತ್ರದಲ್ಲಿ ಇವರ 'ಹೋಗೋ ಮುಕ್ಕಾ...! ಡೈಲಾಗ್ ಎಷ್ಟು ಮಟ್ಟಿಗೆ ಪಾಪ್ಯುಲರ್ ಆಗಿತ್ತೆಂದರೆ ಸಾಮಾಜಿಕ ಜಾಲತಾಣದಲ್ಲೆಲ್ಲಾ ಇದರದ್ದೇ ಹವಾ. ಸೆಂಚುರಿಗೌಡ ಪಾತ್ರದಲ್ಲಿ ನಟಿಸಿ ರಾಷ್ಟ್ರ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದರು. ಅಲ್ಲದೇ 'ತಿಥಿ' ಸಿನಿಮಾ ರಿಲೀಸ್ ಆಗಿ ಹಿಟ್ ಆದಾಗ, ಊರಿಗೆ ಬರುತ್ತಿದ್ದ ಕೆಲವರು ಸಿಂಗ್ರಿಗೌಡ ಅವರನ್ನು ಭೇಟಿ ಆಗಿ, ಫೋಟೋ ತೆಗೆಸಿ ಕೊಂಡು ಹೋಗುತ್ತಿದ್ದರು. ಅಭಿನಯದಲ್ಲಿ ಚಾಣಕ್ಯನಂತಿದ್ದ ಸಿಂಗ್ರಿಗೌಡರು 'ಹಾಲುತುಪ್ಪ', 'ಚಿನ್ನದಗೊಂಬೆ', 'ಹಳ್ಳಿ ಪಂಚಾಯಿತಿ' ಮತ್ತು 'ತರ್ಲೆ ವಿಲೇಜ್' ಚಿತ್ರಗಳಲ್ಲೂ ನಟಿಸಿ ತಮ್ಮ ನಟನೆಯ ಛಾಪು ಮೂಡಿಸಿದ್ದರು.

ಇತ್ತೀಚೆಗೆ (ನ.12, 2025) ತಿಥಿ ಚಿತ್ರದ ಮತ್ತೊಬ್ಬ ಹಿರಿಯ ನಟ ಗಡ್ಡಪ್ಪ ನಿಧನರಾಗಿದ್ದರು. ಇದೀಗ ಸಿಂಗ್ರಿಗೌಡ ಅವರ ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ನೆರವೇರಿತು ಎಂದು ಮೂಲಗಳು ತಿಳಿಸಿವೆ.

ಜಿ.ಡಿ.ಪುಟ್ಟೇಗೌಡ ನಿಧನ



ಭಾರತೀನಗರ, ಜ.5– ದಿ.ಜಿ.ಮಾದೇಗೌಡರ ಸಹೋದರನ ಪುತ್ರ, ಗುರುದೇವರಹಳ್ಳಿ ಗ್ರಾಪಂ ಮಾಜಿ ಸದಸ್ಯ ಜಿ.ಡಿ.ಪುಟ್ಟೇ ಗೌಡ (53) ಸೋಮವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ ಕಲಾವತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ರುದ್ರಭೂಮಿಯಲ್ಲಿ ನಡೆಯಿತು.

ಪತ್ರಕರ್ತ ರಾಜಕುಮಾರ್ ಭಾವಸಾರ್‌ಗೆ ಶ್ರದ್ಧಾಂಜಲಿ


ಹಿರಿಯ ಪತ್ರಕರ್ತ ರಾಜಕುಮಾರ್ ಭಾವಸಾರ್‌ಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಚಾಮರಾಜನಗರ, ಜ.5– ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಹಿರಿಯ ಪತ್ರಕರ್ತ ರಾಜಕುಮಾರ್ ಭಾವಸಾರ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಪತ್ರಕರ್ತ ರಾಜ್‌ಕುಮಾರ್ ಭಾವಸಾರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮೌನಾಚರಣೆ ಮಾಡಲಾಯಿತು.

ಸಂಘದ ಜಿಲ್ಲಾಧ್ಯಕ್ಷ ಸಿದ್ದಲಿಂಗಸ್ವಾಮಿ ಮಾತನಾಡಿ, ಪತ್ರಕರ್ತ ರಾಜ್‌ಕುಮಾರ್ ಭಾವಸಾರ್ ಅವರು 30 ವರ್ಷಕ್ಕೂ ಹೆಚ್ಚು ಕಾಲ ಪತ್ರಿಕಾ ರಂಗದಲ್ಲಿದ್ದು, ಚಾಮರಾಜನಗರ, ಮೈಸೂರಿನ ಹಲವು ಪತ್ರಿಕೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು ಎಂದು ಸ್ಮರಿಸಿದರು. ಮೃತರ ಆತ್ಮಕ್ಕೆ ಶಾಂತಿ ಸಿಗಲಿ. ಹಾಗೆಯೇ ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ. ಭಾವಸಾರ್ ಕುಟುಂಬಕ್ಕೆ ಸಂಘ ನೆರವಾಗಲಿದೆ ಎಂದರು. ಸಂಘದ ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್, ಖಜಾಂಚಿ ಪುಟ್ಟರಾಜು, ರಾಜ್ಯ ಸಮಿತಿ ಸದಸ್ಯ ಮಹೇಂದ್ರ, ಕಾರ್ಯದರ್ಶಿ ಫಾಲಲೋಚನಾ ಆರಾಧ್ಯ, ಉಪಾಧ್ಯಕ್ಷರಾದ ಪ್ರಸಾದ್, ಚಂದ್ರಶೇಖರ್, ಮಾಜಿ ಅಧ್ಯಕ್ಷ ದೇವರಾಜ, ನಿರ್ದೇಶಕರಾದ ಅಬ್ರಹಾಂ ಡಿ.ಸಿಲ್ವ, ಎಸ್.ಎಂ. ನಂದೀಶ್, ಪ್ರಕಾಶ್ ಬೆಲ್ಲದ್, ವಿಜಯ್ ಕುಮಾರ್, ಪತ್ರಕರ್ತರಾದ ಬನಶಂಕರ ಆರಾಧ್ಯ, ರಾಜೇಶ್, ಆರ್.ಎಂ.ಲಿಂಗಪ್ಪ, ರಾ.ಬಾಬು, ಬಸವಣ್ಣ, ಕಾರ್ತಿಕ್, ಪತ್ರಿಕಾ ವಿತರಕ ಶಿವಲಿಂಗಮೂರ್ತಿ ಹಾಜರಿದ್ದರು.

ನೂತನ ಜಿಲ್ಲಾಧಿಕಾರಿ ಶ್ರೀರೂಪ ಅಧಿಕಾರ ಸ್ವೀಕಾರ



ನೂತನ ಜಿಲ್ಲಾಧಿಕಾರಿ ಶ್ರೀರೂಪ ಅಧಿಕಾರ ಸ್ವೀಕರಿಸಿದರು.

ಚಾಮರಾಜನಗರ, ಜ.5– ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಚಾಮರಾಜನಗರ ನೂತನ ಜಿಲ್ಲಾಧಿಕಾರಿಯಾಗಿ ಶ್ರೀರೂಪ ಅವರು ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಂದ ಸೋಮವಾರ ಅಧಿಕಾರ ಸ್ವೀಕರಿಸಿದರು.

ನೂತನ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಶಿಲ್ಪಾನಾಗ್ ಅವರು ಹೂಗುಚ್ಛ ನೀಡಿ ಶುಭ ಕೋರಿದರೆ, ನೂತನ ಜಿಲ್ಲಾಧಿಕಾರಿ ಶ್ರೀರೂಪ ಅವರು ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ಹೂಗುಚ್ಛ ನೀಡಿ ಹಾರೈಸಿದರು.

ಅಧಿಕಾರ ಸ್ವೀಕರಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ಗಡಿಭಾಗದ ಚಾಮರಾಜನಗರ ಜಿಲ್ಲೆಯಲ್ಲಿ ಪ್ರಸ್ತುತ ಮಾನವ ಪ್ರಾಣಿ ಸಂಘರ್ಷದಂತಹ ಪ್ರಕರಣಗಳಿವೆ. ಆದಿವಾಸಿಗಳಿಗೆ ಸಂಬಂಧಿಸಿದ ಸಮಸ್ಯೆಗಳು ಇದೆ. ಈ ಎಲ್ಲವನ್ನೂ ಪರಿಹರಿಸುವುದು ಆದ್ಯತೆಯಾಗಿದೆ. ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಬೇಕಿದೆ ಎಂದರು.

ಜನರ ಬಳಿ ಆಡಳಿತ ತೆಗೆದುಕೊಂಡು ಹೋಗುವುದು ಮುಖ್ಯವಾಗಿದೆ. ನಿರ್ಗಮಿತ ಜಿಲ್ಲಾಧಿಕಾರಿಯವರು ರೂಪಿಸಿರುವ ಯೋಜನೆ, ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಹೋಗಲಿದ್ದೇನೆ ಎಂದರು.

ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ನೂತನ ಜಿಲ್ಲಾಧಿಕಾರಿ ಶ್ರೀರೂಪ ಅವರು ಜಿಲ್ಲೆಯ ಪ್ರಗತಿಗೆ ಹೆಚ್ಚಿನ ಕಾರ್ಯ ನಿರ್ವಹಿಸಲಿ. ಜಿಲ್ಲೆಯ ಎಲ್ಲಾ ಇಲಾಖೆ ಅಧಿಕಾರಿಗಳು ಅಭಿವೃದ್ಧಿಗೆ ಪೂರಕವಾಗಿ ನೂತನ ಜಿಲ್ಲಾಧಿಕಾರಿಗೆ ಸಹಕರಿಸಬೇಕು ಎಂದರು.

ಜಿಪಂ ಸಿಇಒ ಮೋನಾ ರೋತ್, ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ, ತಹಸೀಲ್ದಾರ್ ಗಿರಿಜಾ, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು. ಇದಕ್ಕೂ ಮೊದಲು ನೂತನ ಜಿಲ್ಲಾಧಿಕಾರಿ ಶ್ರೀರೂಪ ಅವರನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ, ತಹಸೀಲ್ದಾರ್ ಗಿರಿಜಾ ಅವರು ಜಿಲ್ಲೆಗೆ ಬರಮಾಡಿಕೊಂಡರು. ಜಿಲ್ಲಾಧಿಕಾರಿಯವರು ನಗರದ ಚಾಮರಾಜೇಶ್ವರ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು.

ನೀಲಮ್ಮ ನಿಧನ



ಬೇಗೂರು, ಜ.5– ಇಲ್ಲಿಗೆ ಸಮೀಪದ ಅಕ್ಕಲಪುರ ಗ್ರಾಪಂ ಸದಸ್ಯ ಕಾಂಗ್ರೆಸ್ ಮುಖಂಡ ಹಾಗೂ ಎನ್.ಎಂ.ಚಿಕನ್ ಸ್ಟಾಲ್ ಮಾಲೀಕರಾದ ನಾಗೇಶ್ ಹಾಗೂ ನಿರಂಜನ್‌ಸ್ವಾಮಿ ಅವರ ತಾಯಿ ನೀಲಮ್ಮ(70) ನಿಧನರಾದರು.

ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ತೋಟದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಕ್ರಮವಾಗಿ ರಕ್ತಚಂದನ ಸಾಗಣೆ: ಮೂವರ ಬಂಧನ


ರಕ್ತಚಂದನ ಮರ, ಕಾರಿನೊಂದಿಗೆ ಆರೋಪಿಗಳನ್ನು ಚಿತ್ರದಲ್ಲಿ ಕಾಣಬಹುದು

ಕೊಳ್ಳೇಗಾಲ: ಅಕ್ರಮವಾಗಿ ಲಕ್ಷಾಂತರ ರೂ. ಮೌಲ್ಯದ 8 ರಕ್ತಚಂದನ ಮರದ ತುಂಡುಗಳನ್ನು ಸಾಗಿಸುತ್ತಿದ್ದ ಮೂವರು ಆರೋಪಿಗಳನ್ನು ಕೊಳ್ಳೇಗಾಲ ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ಬಂಧಿಸಿದ್ದಾರೆ.

ಮಂಗಳೂರು ಮೂಲದ ಹಾಲಿ ಬೆಂಗಳೂರು ನಿವಾಸಿ ಜಯಚಂದ್ರ, ಬೆಂಗಳೂರಿನ ಯಶವಂತಪುರ ನಿವಾಸಿ ಸುಮನ್, ಬಸವೇಶ್ವರ ನಗರ ಬೋವಿ ಕಾಲೋನಿ ನಿವಾಸಿ ಹರೀಶ ಬಂಧಿತ ಆರೋಪಿಗಳು. ತಾಲೂಕಿನ ಸತ್ತೇಗಾಲ ಗ್ರಾಮದ ವೀರಭದ್ರೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆ ಬಳಿ ಮೂವರು ಆರೋಪಿಗಳು ರಕ್ತಚಂದನ ಮರದ ತುಂಡುಗಳನ್ನು ಸಿಲ್ವರ್ ಬಣ್ಣದ ಟೊಯೋಟ ಇಟಿಯಾಸ್ ಕಾರಿ(ಕೆಎ.04, ಡಿ.7257)ನಲ್ಲಿ ಅಕ್ರಮವಾಗಿ ಸಾಗಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಮಡಿಕೇರಿ ಸಿಐಡಿ ಅರಣ್ಯ ಘಟಕ ಪೊಲೀಸ್ ಅಧೀಕ್ಷಕ ಸುದರ್ಶನ್ ಮಾರ್ಗದರ್ಶನದಲ್ಲಿ ಆರಕ್ಷಕ ಉಪನಿರೀಕ್ಷಕ ವಿಜಯ್ ರಾಜ್, ಸಿಬ್ಬಂದಿಗಳಾದ ಬಸವರಾಜು, ಸೈಯದ್ ಜಮೀಲ್, ಅಹಮದ್, ರಾಮಚಂದ್ರ, ಲತಾ, ಬಸವರಾಜು, ಚಾಲಕ ಪ್ರಭಾಕರ್ ಇನ್ನಿತರರು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ. ಬಳಿಕ ಅವರಿಂದ 8 ಲಕ್ಷ ಮೌಲ್ಯದ ರಕ್ತಚಂದನ ಮರದ ತುಂಡುಗಳು, ಕಾರು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಶ್ರೀ ಅಯ್ಯಪ್ಪಸ್ವಾಮಿ ಜಾತ್ರೆ, ಕೊಂಡ ಮಹೋತ್ಸವ


ಶ್ರೀಅಯ್ಯಪ್ಪಸ್ವಾಮಿ ಜಾತ್ರೆ ಮತ್ತು ಕೊಂಡ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು.

ಗುಂಡ್ಲುಪೇಟೆ, ಜ.5 (ಸೋಮ್.ಜಿ)– ಪಟ್ಟಣದ ಶ್ರೀಅಯ್ಯಪ್ಪಸ್ವಾಮಿ ದೇವಸ್ಥಾನದ ಸಂಘದಿಂದ ಶ್ರೀಅಯ್ಯಪ್ಪಸ್ವಾಮಿ ಜಾತ್ರೆ ಮತ್ತು ಕೊಂಡ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು.

ಕೊಂಡ ಮಹೋತ್ಸವದ ಹಿನ್ನೆಲೆಯಲ್ಲಿ ಅಯ್ಯಪ್ಪಸ್ವಾಮಿ ದೇವಾಲಯವನ್ನು ತಳಿರು ತೋರಣ ಹಾಗೂ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ದೇವಾಲಯದ ಗರ್ಭಗುಡಿಯಲ್ಲಿರುವ ಶ್ರೀಅಯ್ಯಪ್ಪಸ್ವಾಮಿ ಮೂರ್ತಿ, ಶ್ರೀಗಣಪತಿ ಮತ್ತು ಶ್ರೀ ಸುಬ್ರಹ್ಮಣ್ಯಸ್ವಾಮಿ ಮೂರ್ತಿಯನ್ನು ವಿವಿಧ ಹೂಗಳಿಂದ ಅಲಂಕರಿಸಲಾಗಿತ್ತು. ಅಲ್ಲದೇ ಆಂಜನೇಯಸ್ವಾಮಿ ದೇವಾಲಯದ ಹಿಂಭಾಗದಲ್ಲಿ ತಳಿರು ತೋರಣ ಹಾಗೂ ಬಾಳೆ ಪಟ್ಟೆಯಿಂದ ಮಾಡಲಾಗಿದ್ದ ಮಂಟಪದಲ್ಲಿ ಅಯ್ಯಪ್ಪಸ್ವಾಮಿ ಭಾವಚಿತ್ರವನ್ನಿಟ್ಟು ವಿಶೇಷ ಪೂಜೆ ನೆರವೇರಿಸಲಾಯಿತು.

ನಂತರ ಪಟ್ಟಣದ ಪ್ರಮುಖ ಬೀದಿಯಲ್ಲಿ ಮಂಗಳವಾದ್ಯದೊಂದಿಗೆ ಅಯ್ಯಪ್ಪಸ್ವಾಮಿ ಅವರ ಬೆಳ್ಳಿ ವಿಗ್ರಹ ಮೆರವಣಿಗೆ ಮಾಡಲಾಯಿತು. ನಂತರ ದೇವಾಲಯದ ಮುಂಭಾಗ ಸೋಮವಾರ ಮುಂಜಾನೆ ಅಯ್ಯಪ್ಪ ಮಾಲಾಧಾರಿಗಳು ಹಾಗೂ ಭಕ್ತರು ಕೊಂಡ ಹಾಯುವುದರೊಂದಿಗೆ ತಮ್ಮ ಭಕ್ತಿ ಭಾವ ಮೆರೆದರು. ಪಟ್ಟಣ ಹಾಗೂ ತಾಲೂಕಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ದೇವರ ದರ್ಶನ ಪಡೆದು ಪುನೀತರಾದರು.

ಮೈಸೂರು ವಿಶ್ವವಿದ್ಯಾನಿಲಯದ 106ನೇ ವಾರ್ಷಿಕ ಘಟಿಕೋತ್ಸವ

ವಿದ್ಯಾರ್ಥಿಗಳು ವೈಫಲ್ಯಗಳಿಂದ ಎದೆಗುಂದಬಾರದು

- ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಸಲಹೆ
- ರಾಜೇಂದ್ರ ಸಿಂಗ್ ಬಾಬು, ಶ್ಯಾಮ್ ಭಟ್, ಜಯಚಂದ್ರ ರಾಜು ಅವರಿಗೆ ಗೌರವ ಡಾಕ್ಟರೇಟ್
- 30,966 ವಿದ್ಯಾರ್ಥಿಗಳಿಗೆ ವಿವಿಧ ಪದವಿ ಪ್ರದಾನ
- ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಮಾಡುವ ಗುರಿ ಯುವ ಪೀಳಿಗೆ ಮುಂದಿದೆ





ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಸೋಮವಾರ ನಡೆದ 106 ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಚಲನಚಿತ್ರ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು, ನಿವೃತ್ತ ಐಎಎಸ್ ಅಧಿಕಾರಿ ಡಾ.ಟಿ.ಶ್ಯಾಮ್ ಭಟ್, ಶಿಕ್ಷಣ ತಜ್ಞ ಪಿ. ಜಯಚಂದ್ರ ರಾಜು ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. (ಹಿಂದೆ ನಿಂತಿರುವವರು) ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ.ಕೆ.ಸವಿತಾ, ಪ್ರೊ.ಎನ್.ನಾಗರಾಜು, ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹಾಗೂ ಇಸ್ರೋ ಮಾಜಿ ಮುಖ್ಯಸ್ಥ ಡಾ.ಎಸ್.ಸೋಮನಾಥ್ ಅವರನ್ನು ಕಾಣಬಹುದು. ಬಲಚಿತ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಸೋಮವಾರ ನಡೆದ 106 ನೇ ವಾರ್ಷಿಕ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದವರು. (ಎಡದಿಂದ) ಬಿ.ಎಸ್.ವರ್ಣಿಕಾ (24 ಚಿನ್ನದ ಪದಕ), ಎಂ.ಸುಮಲತಾ (7 ಚಿನ್ನದ ಪದಕ), ಚಂದ್ರಶೇಖರ್ (13 ಚಿನ್ನದ ಪದಕ), ಪ್ರೇರಣ (16 ಚಿನ್ನದ ಪದಕ) ಹಾಗೂ ಎಂ.ಅದಿತಿ (24 ಚಿನ್ನದ ಪದಕ)

ಮೈಸೂರು, ಜ.5(ಬಿಎಲ್‌ಯು)– ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ 106 ನೇ ವಾರ್ಷಿಕ ಘಟಿಕೋತ್ಸವ ಸಮಾರಂಭ ಇಂದು ಅದ್ದೂರಿಯಾಗಿ ನಡೆಯಿತು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ವಿಶ್ವವಿದ್ಯಾನಿಲಯಗಳ ಕುಲಾಧಿಪತಿಗಳೂ ಆದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಅಧ್ಯಕ್ಷತೆ ವಹಿಸಿ ಪದವಿ ಪ್ರದಾನ ಮಾಡಿದರು.

ಸಮಾರಂಭದಲ್ಲಿ ಚಲನಚಿತ್ರ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು, ನಿವೃತ್ತ ಐಎಎಸ್ ಅಧಿಕಾರಿ ಡಾ.ಟಿ.ಶ್ಯಾಮ್ ಭಟ್, ಶಿಕ್ಷಣ ತಜ್ಞ ಪಿ. ಜಯಚಂದ್ರ ರಾಜು ಅವರಿಗೆ ಥಾವರ್ ಚಂದ್ ಗೆಹ್ಲೋಟ್ ಅವರು ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು.

ತರುವಾಯ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿದ 30,966 ಅಭ್ಯರ್ಥಿಗಳಿಗೆ ವಿವಿಧ ಪದವಿ ನೀಡಿದರು. 452 ಅಭ್ಯರ್ಥಿಗಳಿಗೆ ಪಿ.ಹೆಚ್ ಡಿ, 5,796 ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿ, 24,721 ಅಭ್ಯರ್ಥಿಗಳಿಗೆ ಸ್ನಾತಕ ಪದವಿ ಪ್ರದಾನ ಮಾಡಿದರು.

ಇದೇ ವೇಳೆ ಥಾವರ್ ಚಂದ್ ಗೆಹ್ಲೋಟ್ ಅವರು, ಅತಿ ಹೆಚ್ಚು ಅಂಕ ಪಡೆದವರಿಗೆ 449 ಚಿನ್ನದ ಪದಕ, 197 ನಗದು ಬಹುಮಾನಗಳನ್ನು ಕೂಡ ನೀಡಿದರು.

ನಂತರ ಮಾತನಾಡಿದ ರಾಜ್ಯಪಾಲರು, ವಿದ್ಯಾರ್ಥಿಗಳು ಎಂದಿಗೂ ವೈಫಲ್ಯಗಳಿಂದ ಹಿಂಜರಿಯಬಾರದು, ಅದು ಕಲಿಕೆಯ ಒಂದು ಹಂತವಾಗಿರುವ ಹಿನ್ನೆಲೆಯಲ್ಲಿ ಕಲಿಯುವುದನ್ನು ಮುಂದುವರೆಸಬೇಕು. ಈ ಮೂಲಕ ಜ್ಞಾನವನ್ನು ಸಮಾಜದ ಕೊನೆಯ ವ್ಯಕ್ತಿಗೆ ರವಾನಿಸಲು ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಕೃತಕ ಬುದ್ಧಿಮತ್ತೆ, ಡಿಜಿಟಲ್ ಆರ್ಥಿಕತೆ, ವಿಜ್ಞಾನ, ತಂತ್ರಜ್ಞಾನ ಸೇರಿದಂತೆ ಹಲವು ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಯುವ ಪೀಳಿಗೆಯ ಪಾತ್ರ ನಿರ್ಣಾಯಕವಾಗಿದೆ. ಅಷ್ಟೇ ಅಲ್ಲದೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಮಾಡುವ ಗುರಿ ಕೂಡ ಯುವ ಶಕ್ತಿ ಮುಂದಿದೆ ಎಂದು ಅಭಿಪ್ರಾಯಪಟ್ಟರು.

ಪ್ರಾಚೀನ ಕಾಲದಿಂದಲೂ ಭಾರತ ಬೌದ್ಧಿಕ ಸಂಪತ್ತು ಹೊಂದಿದೆ. ಖಗೋಳ ಶಾಸ್ತ್ರ, ಭೂ ವಿಜ್ಞಾನ, ಗಣಿತ, ವೈದ್ಯಕೀಯ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಅಪ್ರತಿಮ ಜ್ಞಾನ ಸಂಗ್ರಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತೀಯರು ವಿಶ್ವಕ್ಕೆ ಮಾದರಿಯಾಗಿದ್ದಾರೆ ಎಂದು ತಿಳಿಸಿದರು.

ಕರ್ನಾಟಕವು ಐಟಿ–ಬಿಟಿ, ಬಾಹ್ಯಾಕಾಶ, ವಿಜ್ಞಾನ, ಉನ್ನತ ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಮುಂದಿದೆ. ಅಲ್ಲದೆ ಜ್ಞಾನ, ನಾವಿನ್ಯತೆ, ಉತ್ತಮ ಆಡಳಿತ ಕ್ಷೇತ್ರದಲ್ಲೂ ಪ್ರಮುಖ ಪಾತ್ರ ವಹಿಸಿದೆ ಎಂದು ಥಾವರ್ ಚಂದ್ ಗೆಹ್ಲೋಟ್ ತಿಳಿಸಿದರು.

ಇಸ್ರೋ ಮಾಜಿ ಅಧ್ಯಕ್ಷ ಡಾ.ಎಸ್.ಸೋಮನಾಥ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವರಾದ ಎಂ.ಕೆ.ಸವಿತಾ, ಪ್ರೊ.ಎನ್.ನಾಗರಾಜ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ವಿವಿ ಶೈಕ್ಷಣಿಕ ಗುಣಮಟ್ಟ ಕುಸಿದಿದೆ

ಉನ್ನತ ಶಿಕ್ಷಣ ಸಚಿವ ಡಾ. ಸುಧಾಕರ್ ವಿಷಾದ

ಹಲವು ಕಾರಣಗಳಿಂದ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಗುಣಮಟ್ಟ ಕುಸಿದಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅಸಮಾಧಾನ ವ್ಯಕ್ತಪಡಿಸಿದರು.

ಭಾರತದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಶತಮಾನೋತ್ಸವ ಆಚರಿಸುತ್ತಿರುವ ಮೈಸೂರು ವಿಶ್ವವಿದ್ಯಾನಿಲಯ ಕೂಡ ಒಂದಾಗಿದೆ. ಕರ್ನಾಟಕದ ಮೊದಲ ವಿಶ್ವವಿದ್ಯಾನಿಲಯವಾದ ಇದನ್ನು ಮೈಸೂರು ಮಹಾರಾಜರು ದೂರದೃಷ್ಟಿಯಿಂದ ಸ್ಥಾಪನೆ ಮಾಡಿದರು. ಆದರೆ ಈಗ ವಿಶ್ವವಿದ್ಯಾನಿಲಯದ ಸ್ಥಿತಿಗತಿ ಶೋಚನೀಯವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಒಂದು ಕಾಲದಲ್ಲಿ ದೇಶ ವಿದೇಶದ ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬರುತ್ತಿದ್ದರು. ಆದರೆ ಈಗ ಸ್ಥಳೀಯ ವಿದ್ಯಾರ್ಥಿಗಳೆ ಬೇರೆ ವಿಶ್ವವಿದ್ಯಾನಿಲಯಕ್ಕೆ ಹೋಗುವ ಪರಿಸ್ಥಿತಿ ಎದುರಾಗಿದೆ ಎಂದು ಡಾ.ಸುಧಾಕರ್ ಹೇಳಿದರು.

ಶುಲ್ಕ ವ್ಯವಸ್ಥೆ, ಪ್ರಚಾರದ ಭಾವನೆ, ಹೆಚ್ಚು ಕಾಲೇಜುಗಳ ಸಂಯೋಜನೆ ಸೇರಿದಂತೆ ಮೈಸೂರು ವಿಶ್ವವಿದ್ಯಾನಿಲಯ ಹಲವು ಸವಾಲುಗಳನ್ನು ಎದುರಿಸುತ್ತಿದೆ ಎಂದರು.

ಪ್ರಮುಖವಾಗಿ 157 ಕೋಟಿ ರೂಪಾಯಿಗಳ ಪಿಂಚಣಿ ಹೊರೆಯನ್ನು ಹೊರುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಶಿಸ್ತುಬದ್ಧ ಹಾಗೂ ವ್ಯವಸ್ಥಿತ ಆಡಳಿತ ಮಾಡಿದ್ದರೆ ಇಂದು ಈ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು.

ಈಗ ಮೈಸೂರು ವಿಶ್ವವಿದ್ಯಾನಿಲಯದ ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ರೂಪಿಸುವ ಅಗತ್ಯವಿದ್ದು, ನಮ್ಮ ಸರ್ಕಾರ ಇದರಲ್ಲಿ ಕಾರ್ಯೋನ್ಮುಖವಾಗಿದೆ ಎಂದು ಹೇಳಿದರು.

ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಉದ್ಯೋಗ ಆಧಾರಿತ ಶಿಕ್ಷಣ ನೀಡಲು ಸರ್ಕಾರ ಹೆಚ್ಚು ಒತ್ತು ನೀಡುತ್ತಿದೆ. ಈ ಸಂಬಂಧ ಕೌಶಲ್ಯಾಧಾರಿತ ತರಬೇತಿ ನೀಡಿ, ಉದ್ಯೋಗ ಪಡೆಯಲು ಇನ್ಫೋಸಿಸ್, ಮೈಕ್ರೋಸಾಫ್ಟ್ ಸೇರಿದಂತೆ ಇತರೆ ಸಂಸ್ಥೆಗಳ ಜೊತೆ ಒಡಂಬಡಿಕೆ ಮಾಡಿಕೊಂಡಿದೆ ಎಂದು ಡಾ.ಸುಧಾಕರ್ ಮಾಹಿತಿ ನೀಡಿದರು.

ಚಿನ್ನದ ಪದಕಕ್ಕೆ ಮುತ್ತಿಟ್ಟ ಕುರಿಗಾಯಿ ಮಗ..., ತಾಯಿ ಕೂಲಿ–ನಾಲಿ ಮಾಡಿ ಓದಿಸಿದರು..., ಪರಿಶ್ರಮಕ್ಕೆ ಪ್ರತಿಫಲ ಸಿಕ್ಕಿದೆ

ತಂದೆ ಹಳ್ಳಿಗಾಡಿನಲ್ಲಿ ಕುರಿ ಕಾಯುವ ವೃತ್ತಿ, ತಾಯಿ ಕೂಲಿ–ನಾಲಿ ಮಾಡಿ ಮನೆ ನಡೆಸುವ ಬದುಕು. ಇಂತಹ ಬಡ ಕುಟುಂಬದ ವಿದ್ಯಾರ್ಥಿಯೊಬ್ಬ ಮೈಸೂರು ವಿಶ್ವವಿದ್ಯಾನಿಲಯದಿಂದ 13 ಚಿನ್ನದ ಪದಕವನ್ನು ಪಡೆಯುವ ಭಾಗ್ಯಶಾಲಿ.

ಕೊಪ್ಪಳ ಜಿಲ್ಲೆ ಕನಕಗಿರಿ ಬಳಿಯ ಕನ್ನೇರುಮಡು ಗ್ರಾಮದ ಚಂದ್ರಶೇಖರ್ ಎಂಬಾತ ಬಡತನದ ಬೇಗೆಯಲ್ಲಿ ಉನ್ನತ ಶಿಕ್ಷಣದಲ್ಲಿ ಚಿನ್ನದ ಪದಕ ಪಡೆದುಕೊಂಡಿದ್ದಾನೆ.

ನನ್ನ ತಂದೆ ಸಣ್ಣಪ್ಪ ಕುರಿ ಕಾದರೂ, ತಾಯಿ ಶಾಂತಮ್ಮ ಕೂಲಿ ಮಾಡಿದರೂ ನನ್ನನ್ನು ಕಷ್ಟಪಟ್ಟು ಓದಿಸಿದರು. ಕಡು ಬಡತನದ ಕಾರಣ ನಾನು 1ನೇ ತರಗತಿಯಿಂದ ಓದು ಆರಂಭಿಸಲಿಲ್ಲ. ನೇರವಾಗಿ 5 ನೇ ತರಗತಿ ಸೇರಿದೆ. ಅಪ್ಪ, ಅಮ್ಮ ಪಡುತ್ತಿರುವ ಯಾತನೆ ಬದುಕು ನೋಡಿದ ನಾನು ಚೆನ್ನಾಗಿ ಓದಿ, ಒಳ್ಳೆಯ ಕೆಲಸಕ್ಕೆ ಸೇರಬೇಕು. ಈ ಮೂಲಕ ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂದು ಆಸಕ್ತಿಯಿಂದ ಓದಿದೆ ಎಂದು ಚಂದ್ರಶೇಖರ್ ಹೇಳಿದರು.

ಎಂ.ಎ. ಕನ್ನಡದಲ್ಲಿ 13 ಚಿನ್ನದ ಪದಕ ಹಾಗೂ 4 ನಗದು ಬಹುಮಾನ ಪಡೆದಿದ್ದೇನೆ. ಎಸ್.ಎಲ್. ಭೈರಪ್ಪ ಸೇರಿದಂತೆ ಹಲವು ಸಾಹಿತಿಗಳ ಕಾದಂಬರಿ, ಕಥೆ, ಕವನಗಳನ್ನು ಓದಿದ್ದೇನೆ. ಕಠಿಣ ಪರಿಶ್ರಮದಿಂದ ಓದಿದ ಕಾರಣ ನನಗೆ ಚಿನ್ನದ ಪದಕ ಬಂದಿದೆ. ಮುಂದೆ ಪಿ.ಹೆಚ್ ಡಿ ಮಾಡಲು ನಿರ್ಧರಿಸಿರುವೆ ಎಂದು ಚಂದ್ರಶೇಖರ್ ತಿಳಿಸಿದರು.

ನಮ್ಮದು ರೈತ ಕುಟುಂಬ, ತಂದೆ– ತಾಯಿ ಇಬ್ಬರು ಓದಿಲ್ಲ. ಆದರೂ ನನ್ನನ್ನು ಓದಿಸಲು ಅವರು ತಮ್ಮ ಬದುಕನ್ನೆ ಸವೆಸಿದರು. ಇದರಿಂದ ನನಗೆ 7 ಚಿನ್ನದ ಪದಕ ಹಾಗೂ 2 ನಗದು ಬಹುಮಾನ ಬಂದಿದೆ. ಪ್ರತಿ ದಿನ ಕನಿಷ್ಟ 8 ಗಂಟೆಗಳ ಕಾಲ ಓದುತ್ತಿದ್ದೆ. ಕಠಿಣ ಪರಶ್ರಮದ ಫಲವಾಗಿ ಇಂದು ನನಗೆ ಚಿನ್ನದ ಪದಕ ಬಂದಿದೆ ಎಂದು ಮೈಸೂರಿನ ಮಾರಶೆಟ್ಟಿಹಳ್ಳಿಯ ಎಂ.ಸುಮಲತಾ ಹೇಳಿದರು.

ವರ್ಣಿಕಾ ಸಾಧನೆ: ಇದೇ ವೇಳೆ ಅತೀ ಹೆಚ್ಚು ಅಂದರೆ 24 ಚಿನ್ನದ ಪದಕ ಹಾಗೂ 8 ನಗದು ಬಹುಮಾನ ಪಡೆದ ಮಂಗಳೂರಿನ ಮುಲ್ಕಿಯ ವರ್ಣಿಕಾ ಅವರು ಸಾಧನೆ ಮಾಡಲು ಕಾರಣವಾದ ಅಂಶವನ್ನು ವಿವರಿಸಿದರು. ನನ್ನ ತಂದೆ ನಿರಂಜನ್, ತಾಯಿ ಶುಭಲಕ್ಷ್ಮಿ ಇಬ್ಬರೂ ಶಿಕ್ಷಕರಾಗಿದ್ದಾರೆ. ಮುಂದೆ ಪಿ.ಹೆಚ್ ಡಿ ಮಾಡಬೇಕೆಂದು ಇಚ್ಚಿಸಿದ್ದೇನೆ. ಫೆಲೋಶಿಪ್ ಪಡೆದು ಗುರಿ ಸಾಧಿಸಲು ನಿರ್ಧರಿಸಿದ್ದೇನೆ ಎಂದು ತಿಳಿಸಿದರು.

ಅದಿತಿಗೆ 24 ಚಿನ್ನ: ವರ್ಣಿಕಾಳಂತೆ 24 ಚಿನ್ನದ ಪದಕ ಪಡೆದಿರುವ ಎನ್.ಅದಿತಿ ಕೂಡ ತನ್ನ ಪರಿಶ್ರಮವನ್ನು ವಿವರಿಸಿದರು. ರಸಾಯನ ಶಾಸ್ತ್ರ ವಿಷಯದಲ್ಲಿ ನನಗೆ ಚಿನ್ನದ ಪದಕ ಬಂದಿದೆ. ಪ್ರತಿ ದಿನ ಬೆಳಿಗ್ಗೆಯಿಂದ ರಾತ್ರಿವರೆಗೆ ಅಧ್ಯಯನ ಮಾಡುತ್ತಿದ್ದೆ. ಕಠಿಣ ಪರಿಶ್ರಮ ಪಟ್ಟಿದ್ದರಿಂದ ಇದನ್ನು ಸಾಧಿಸಲು ನನಗೆ ಸಾಧ್ಯವಾಯಿತು. ಮುಂದೆ ಪಿಹೆಚ್‌ಡಿ ಪಡೆಯಲು ತೀರ್ಮಾನ ಮಾಡಿರುವೆ ಎಂದರು.

ಎಂ.ಟೆಕ್‌ನಲ್ಲಿ ಪ್ರೇರಣಾ ಸಾಧನೆ: ಎಂ.ಟೆಕ್‌ನಲ್ಲಿ 16 ಚಿನ್ನದ ಪದಕ ಪಡೆದಿರುವ ಪ್ರೇರಣಾ, ಗುರಿ ಸಾಧಿಸಿದ ಪರಿಯನ್ನು ಹಂಚಿಕೊಂಡರು. ನನ್ನ ತಂದೆ ಲೋಕ ಪ್ರಕಾಶ್ ನಾರಾಯಣ್, ತಾಯಿ ಶಿಲ್ಪ ಇಬ್ಬರೂ ಶೈಕ್ಷಣಿಕ ಕ್ಷೇತ್ರದವರಾಗಿದ್ದಾರೆ. ಎನ್‌ಐಇ ಕಾಲೇಜಿನಲ್ಲಿ ಬಿಇ ವ್ಯಾಸಂಗ ಮಾಡಿದ ನಾನು, ಅರ್ಬನ್ ಅಂಡ್ ರೀಜನಲ್ ಪ್ಲಾನಿಂಗ್‌ನಲ್ಲಿ ಎಂ.ಟೆಕ್ ಮಾಡಿ ಈಗ ಚಿನ್ನದ ಪದಕ ಪಡೆದಿದ್ದೇನೆ.

ಇದು ನಾನು ತುಂಬಾ ಇಷ್ಟಪಟ್ಟು ಆಯ್ಕೆ ಮಾಡಿಕೊಂಡ ವಿಷಯವಾಗಿದೆ. ಹೆಚ್ಚಿನ ಅಂಕ ಪಡೆಯುವ ದೃಷ್ಟಿಯಿಂದ ಹೆಚ್ಚಿನ ಅಧ್ಯಯನ ಮಾಡಿದೆ. ಇದರಿಂದ ಗುರಿ ಮುಟ್ಟಲು ಸಾಧ್ಯವಾಯಿತು ಎಂದು ಪ್ರೇರಣಾ ಹೇಳಿದರು.

27ನೇ ವರ್ಷದ ಸವಿನೆನಪು



ನಿಧನ : 30.12.1999
ಟಿ.ಕೃಷ್ಣಪ್ಪ
(ಸೌದೆ ಡಿಪೋ ಮಾಲೀಕರು)

ನೀವು ನಮ್ಮನ್ನಗಲಿ 27 ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಸದಾ ನೆಲೆಸಿದೆ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಬಯಸುವ
ರೇವಣ್ಣ, ಎಸ್.ಕೆ.ಬಿ. ಆರ್ಕೇಡ್, ಮೈಸೂರು





ಇಸ್ರೋದ ಮುಂದಿನ ಗುರಿ ಗಗನಯಾನ್, ವೀನಸ್ ಮಿಷನ್, ಭಾರತೀಯ ಅಂತರಿಕ್ಷ ನಿಲ್ದಾಣ

ಇಸ್ರೋದ ಮುಂದಿನ ಪ್ರಯತ್ನಗಳೆಂದರೆ ಗಗನಯಾನ್, ವೀನಸ್ ಮಿಷನ್, ಭಾರತೀಯ ಅಂತರಿಕ್ಷ ನಿಲ್ದಾಣ ಎಂದು ಇಸ್ರೋ ಮಾಜಿ ಅಧ್ಯಕ್ಷ ಡಾ.ಎಸ್.ಸೋಮನಾಥ್ ಹೇಳಿದರು.

ಇಸ್ರೋ ಜನರಲ್ಲಿ ಹೊಸ ಚೈತನ್ಯ ಮೂಡಿಸಿದೆ. ಚಂದ್ರಯಾನ–3, ಚಂದ್ರನ ಮೇಲೆ ಇಳಿದದ್ದು, ಸೂರ್ಯನತ್ತ ಆದಿತ್ಯ ತನ್ನ ದೃಷ್ಟಿ ನೆಟ್ಟಿದ್ದು, ಈ ಮೂಲಕ ಇಸ್ರೋ ನಡೆ ವೈಜ್ಞಾನಿಕ ಮೈಲುಗಲ್ಲಾಗಿದೆ. ಇದ್ದುದ್ದರಲ್ಲೇ ಅಸಾಧ್ಯವಾದುದ್ದನ್ನು ಸಾಧಿಸುವ ತಂತ್ರಗಳು, ವ್ಯವಸ್ಥೆಯ ಆಲೋಚನೆಗಳು ಇಸ್ರೋದ ದ್ಯೋತಕವಾಗಿದೆ ಎಂದರು.

ಭವಿಷ್ಯತ್ತಿನಲ್ಲಿ ತಂತ್ರಜ್ಞಾನ ನಿಮ್ಮ ಬದುಕಿನ ಅವಿಭಾಜ್ಯ ಅಂಗವಾಗಿ ಪರಿಣಮಿಸಲಿದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ವಿನ್ಯಾಸಿಸಲು, ರಚಿಸಲು, ಪರೀಕ್ಷಿಸಲು, ಹಾರುವುದಕ್ಕೆ ಅಣಿ ಮಾಡಿಕೊಳ್ಳುವಾಗ ನಾವು ವಹಿಸುವ ಜವಾಬ್ದಾರಿ ಬಗ್ಗೆ ಕೂಡ ಜಾಗೃತರಾಗಬೇಕು ಎಂದು ಡಾ.ಸೋಮನಾಥ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಬಾಹ್ಯಾಕಾಶ ಎಂಬುದು ವಿಶಾಲ ಸತ್ಯದ ಕುರುಹಾಗಿದ್ದು, ಜಟಿಲ ಕಾರ್ಯಗಳನ್ನು ಮಾಡುತ್ತಲೇ ಭಾರತ ಮುಂದುವರೆಯಬೇಕಾಗಿದೆ. ಈ ಮೂಲಕ ವಿಶ್ವ ದರ್ಜೆಯನ್ನು ತಲುಪಬೇಕಾಗಿದೆ. ಅಂದರೆ ಉತ್ಪಾದನಾ ವ್ಯವಸ್ಥೆಯಲ್ಲಿ ಸಂಪೂರ್ಣ ಸ್ವಾಯತ್ತತೆಯನ್ನು ಹೊಂದುವುದರ ಜೊತೆಗೆ ಸರಬರಾಜುದಾರರನ್ನೂ ಪೋಷಿಸಬೇಕಾಗಿದೆ. ಪರೀಕ್ಷಾ ಮೂಲ ರಚನೆಯನ್ನು ನಿರ್ಮಿಸಬೇಕು, ತಂತ್ರಾಂಶದಲ್ಲಿ ಹಾಗೂ ಕೃತಕ ಬುದ್ಧಿಮತ್ತೆಯನ್ನು ಬೆಳೆಸಿಕೊಂಡು ಇರುವ ಶಕ್ತಿಯ ಜೊತೆ ಮುಂದುವರೆದ ತಂತ್ರಜ್ಞಾನವನ್ನು ಕೂಡ ಮಿಳಿತಗೊಳಿಸಬೇಕಾಗಿದೆ ಎಂದರು.

ಜಾಗತಿಕ ತಂತ್ರಜ್ಞಾನವನ್ನು ನಾವು ಬೆಳೆಸಬೇಕು, ಬಾಹ್ಯಾಕಾಶದಿಂದ ಸೆಮಿಕಂಡಕ್ಟರ್ ವರೆಗೆ, ಜೈವಿಕ ತಂತ್ರಜ್ಞಾನದಿಂದ ಶುದ್ಧ ಇಂಧನದವರೆಗೆ ನಾವು ಮಹತ್ತರ ಕೊಡುಗೆ ನೀಡಬೇಕು ಎಂದು ಡಾ.ಸೋಮನಾಥ್ ಹೇಳಿದರು.

ಈಗಿನ ತಲೆಮಾರಿನವರು ಕೆಲವು ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು. ಭಾರತದ ಸಾಮರ್ಥ್ಯವನ್ನು ಸಾಕ್ಷಾತ್ಕರಿಸಲು, ನಮ್ಮ ರಾಷ್ಟ್ರವನ್ನು ಸಶಕ್ತ ಹಾಗೂ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿಸಲು ವಿಕಸಿತ ಭಾರತವನ್ನಾಗಿಸಲು ಪರಂಪರೆಯ ಕೊಂಡಿಯನ್ನು ಬೆಸೆಯಬೇಕು ಎಂದು ಡಾ.ಸೋಮನಾಥ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇಂದಿನ ಜಾಗತೀಕರಣದ ಯುಗದಲ್ಲಿ ಸಾಕಷ್ಟು ಉದ್ಯೋಗಾವಕಾಶ ಉಂಟು

ಪದವೀಧರರು ತಮ್ಮ ಮುಂದಿರುವ ಉದ್ಯೋಗಾವಕಾಶಗಳ ಬಗ್ಗೆ ಗಮನಹರಿಸಿ

ಮೈಸೂರು ವಿವಿ ಘಟಿಕೋತ್ಸವದಲ್ಲಿ ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಲಿಮಿಟೆಡ್ ಅಧ್ಯಕ್ಷ ಸುಧನ್ವ ಧನಂಜಯ ಸಲಹೆ



ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ಸೋಮವಾರ ವಿವಿಯ 106ನೇ ವಾರ್ಷಿಕ ಘಟಿಕೋತ್ಸವದ ಮಧ್ಯಾಹ್ನದ ಅವಧಿಯ ಪದವಿ ಪ್ರದಾನ ಸಮಾರಂಭದಲ್ಲಿ ಸುಧನ್ವ ಧನಂಜಯ (ಎಡದಿಂದ 3ನೇಯವರು) ಅತಿಥಿಯಾಗಿ ಪಾಲ್ಗೊಂಡಿದ್ದರು.

ಮೈಸೂರು,ಜ.5(ಪಿಎಂ)– ಇಂದಿನ ಜಾಗತೀಕರಣದ ಯುಗದಲ್ಲಿ ಪದವೀಧರರಿಗೆ ಸಾಕಷ್ಟು ಉದ್ಯೋಗಾವಕಾಶಗಳಿವೆ ಎಂದು ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಲಿಮಿಟೆಡ್ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರೂ ಆದ ಸುಧನ್ವ ಧನಂಜಯ ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಸೋಮವಾರ ವಿವಿಯ 106ನೇ ವಾರ್ಷಿಕ ಘಟಿಕೋತ್ಸವದ ಮಧ್ಯಾಹ್ನದ ಅವಧಿಯಲ್ಲಿ ಹಮ್ಮಿಕೊಂಡಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಪದವಿ ಪಡೆದ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಅವರ ಕುಟುಂಬವು ಯೋಚಿಸುವುದನ್ನು ಹಲವು ಬಾರಿ ಕಂಡಿದ್ದೇನೆ. ಇಂದಿನ ಜಗತ್ತು ಸಾಕಷ್ಟು ಅವಕಾಶಗಳನ್ನು ಒದಗಿಸಲಿದೆ. ನಾನು ಪದವಿ ಪಡೆದ ಸಮಯಕ್ಕಿಂತ ಇಂದು ಅವಕಾಶ ಹೆಚ್ಚಾಗಿದೆ. ಪದವೀಧರರು ತಮ್ಮ ಮುಂದೆ ತೆರೆದಿರುವ ಅವಕಾಶಗಳ ಜಗತ್ತಿನ ಬಗ್ಗೆ ಗಮನ ನೀಡಬೇಕು. ಜಾಗತೀಕರಣ ಈ ಸಂದರ್ಭದಲ್ಲಿ ವಿವಿಧ ದೇಶ, ನಾನಾ ಕೈಗಾರಿಕೆ, ವಿಜ್ಞಾನ ತಂತ್ರಜ್ಞಾನದ ಹಲವು ಕ್ಷೇತ್ರಗಳು, ಸಂಶೋಧನೆ ವಲಯದಲ್ಲಿರುವ ಸಾಕಷ್ಟು ಉದ್ಯೋಗಾವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಉದ್ಯೋಗದ ಆಯ್ಕೆ ಕುರಿತಂತೆ ನೀವು ಇಂದು ಪದವಿ ಪಡೆದುಕೊಳ್ಳುತ್ತಿರುವಾಗ ಸ್ವಲ್ಪ ಸಮಯ ಕುಳಿತು ಆತ್ಮಾವಲೋಕನ ಮಾಡಿಕೊಳ್ಳಬೇಕು. ಮೈಸೂರು ವಿವಿಯಿಂದ ಎರಡು ಪದವಿಗಳನ್ನು ಪಡೆದಿದ್ದೇನೆ. ಹಾಗಾಗಿ ವಿವಿಯೊಂದಿಗೆ ನನಗೆ ಹಳೆ ನೆನಪುಗಳು ಸಾಕಷ್ಟಿವೆ. ಅಂದು ನಾನು ಬಹುಮಾನ ಹಾಗೂ ಪದಕ ಪಡೆದ ಕ್ಷಣಗಳು ನನೆಪಾಗುತ್ತಿವೆ ಎಂದರು. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವೆ (ಆಡಳಿತ) ಎಂ.ಕೆ.ಸವಿತಾ, ಕುಲಸಚಿವ (ಪರೀಕ್ಷಾಂಗ) ಡಾ.ಎನ್.ನಾಗರಾಜ ವೇದಿಕೆಯಲ್ಲಿದ್ದರು.



ಮೈಸೂರು ಮಿತ್ರ

ಮೂಗೂರು ಜಾತ್ರೆಯಲ್ಲಿ ವಿಜೃಂಭಣೆಯ ಮಹಾ ರಥೋತ್ಸವ

ಸಾವಿರಾರು ಭಕ್ತರು ಭಾಗಿ, ಮೊಳಗಿದ 'ತಿಬ್ಬಾದೇವಿಗೆ ಜೈ' ಘೋಷಣೆ



ರಥೋತ್ಸವದಲ್ಲಿ ಭಾಗವಹಿಸಿರುವ ಭಕ್ತ ಸಮೂಹ

ಮೂಗೂರು: ಪುರಾಣ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಮೂಗೂರಿನ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ದಿವ್ಯ ಮಹಾ ರಥೋತ್ಸವವು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಸೋಮವಾರ ವಿಜೃಂಭಣೆಯಿಂದ ನಡೆಯಿತು.

ತಡವಾಗಿ ಆಗಮಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹಾಗೂ ವಾಟಾಳು ಶ್ರೀ ಸಿದ್ಧಲಿಂಗ ಸ್ವಾಮೀಜಿ ಅವರು ಅಮ್ಮನವರ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಸಚಿವ ಎಚ್.ಸಿ.ಮಹದೇವಪ್ಪ ಹಾಗೂ ವಾಟಾಳು ಶ್ರೀಗಳು ಸಕಾಲದಲ್ಲಿ ಮಳೆ ಬೆಳೆಯಿಂದ ರೈತರು ಸಂತೃಪ್ತಿಗೊಂಡು ನಾಡಿನ ಗ್ರಾಮದ ಸಮಸ್ತ ಜನತೆಗೆ ಒಳಿತು ಮಾಡಲಿ ಎಂದು ಶುಭ ಹಾರೈಸಿದರು.

ರಥೋತ್ಸವದ ಅಂಗವಾಗಿ ದೇಗುಲವನ್ನು ತಳಿರು ತೋರಣ ಹಾಗೂ ವಿವಿಧ ಬಗೆಯ ಹೂಗಳಿಂದ ಅಲಂಕರಿಸಿ ಸಾಂಪ್ರದಾಯಿಕವಾಗಿ ಧಾರ್ಮಿಕ ಪೂಜಾ ಕೈಂಕರ್ಯಗಳನ್ನು ನಡೆಸಲಾಯಿತು. ಮಧ್ಯಾಹ್ನ 3 ಗಂಟೆಗೆ ಅಲಂಕೃತಗೊಂಡ ಅಮ್ಮನವರ ಉತ್ಸವ ಮೂರ್ತಿಯನ್ನು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿಸಿದ ನಂತರ ರಥದ ಮಂಟಪದಲ್ಲಿ ಅಮ್ಮನವರನ್ನು ಕೂರಿಸಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ರಥೋತ್ಸವಕ್ಕೆ ತಂದರು. ಗ್ರಾಮದ ವಿವಿಧ ಸಮುದಾಯದ ಮುಖಂಡರು ರಥದ ಬಳಿ ಜಮಾಯಿಸಿದ ನಂತರ ರಥವು ಮುಖ್ಯ ರಸ್ತೆ, ರಥದ ಬೀದಿಯಲ್ಲಿ ಸಾಗಲು ಸಜ್ಜಾಯಿತು. ನೆರೆದಿದ್ದ ಅಸಂಖ್ಯಾತ ಭಕ್ತ ಸಮೂಹ ತಿಬ್ಬಾದೇವಿಗೆ ಜೈ ಎಂದು ಜಯ ಘೋಷಣೆ ಕೂಗುತ್ತಾ ರಥ ಎಳೆದು ಧನ್ಯತೆ ಮೆರೆದರು.

ಬೆಳಿಗ್ಗೆಯಿಂದಲೇ ಸರದಿ ಸಾಲಿನಲ್ಲಿ ನಿಂತ ಭಕ್ತರು ಅಮ್ಮನವರ ದರ್ಶನ ಪಡೆದರು. ಪ್ರತಿ ವರ್ಷದಂತೆ ಈ ಬಾರಿಯೂ ಮೂಗೂರು ಗೆಳೆಯರ ಬಳಗ ವತಿಯಿಂದ ರಥಕ್ಕೆ ಬೃಹತ್ ಗಾತ್ರದ ಹೂವಿನ ಹಾರ ಅರ್ಪಿಸಿದರು. ಸ್ಥಳದಲ್ಲಿದ್ದ ಮುತ್ತೈದೆಯರು, ನವದಂಪತಿಗಳು, ಭಕ್ತರು ತಮ್ಮ ಇಷ್ಟಾರ್ಥಗಳು ನೆರವೇರಲೆಂದು ಪ್ರಾರ್ಥಿಸಿ ಹಣ್ಣು-ಜವನ ಅರ್ಪಿಸಿದರು. ಹರಕೆ ಹೊತ್ತ ಭಕ್ತರು ಎಲ್ಲೆಡೆ ಪ್ರಸಾದ ತಯಾರಿಸಿ ವಿತರಿಸಿದರು. ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು ಅವರು ರಥೋತ್ಸವ ದಿನದ ಅನ್ನಸಂತರ್ಪಣೆ ಸೇವಾರ್ಥರಾಗಿ ಸರ್ಕಾರಿ ಶಾಲಾ ಆವರಣದಲ್ಲಿ ಭಕ್ತರಿಗೆ ಸಿಹಿ ಊಟದ ವ್ಯವಸ್ಥೆ ಮಾಡಿದ್ದರು.

ಹೈನುಗಾರಿಕೆಯಿಂದ ಉತ್ತಮ ಆದಾಯ

ತಿ.ನರಸೀಪುರ, ಜ.5– ಜಾನುವಾರುಗಳ ಆರೋಗ್ಯವನ್ನು ಕಾಪಾಡಿಕೊಳ್ಳಲು ಕಾಲ ಕಾಲಕ್ಕೆ ಲಸಿಕೆ ಹಾಕಿಸಿ, ಲವಣಾಂಶದ ಮೇವನ್ನು ನಿಯಮಿತವಾಗಿ ನೀಡುವುದರಿಂದ ರೈತರು ಹೈನುಗಾರಿಕೆಯಲ್ಲಿ ಅಧಿಕ ಪ್ರಮಾಣದಲ್ಲಿ ಗುಣಮಟ್ಟದ ಹಾಲನ್ನು ಪಡೆಯಲು ಸಾಧ್ಯ ಎಂದು ತಿಳಿಸಿದ ಪಶುಪಾಲನೆ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಸಿ.ಮಲ್ಲಿಕಾರ್ಜುನಸ್ವಾಮಿ ಹೈನುಗಾರಿಕೆಯಿಂದ ಉತ್ತಮ ಆದಾಯ ಬರಲಿದೆ ಎಂದರು.

ತಾಲೂಕಿನ ಡಣಾಯಕನಪುರ ಗ್ರಾಮದಲ್ಲಿ ಶುಕ್ರವಾರ ರೈತರ ಹೈನುಗಾರಿಕೆಗೆ ಉತ್ತೇಜನ ನೀಡಲು ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಅಧಿಕ ಹಾಲು ಕರೆಯುವ ಸ್ಪರ್ಧೆಯಲ್ಲಿ ಮಾತನಾಡಿದ ಅವರು ಆರೋಗ್ಯವಂತ ಜಾನುವಾರು ಸಾಕಾಣಿಕೆ ನಿರ್ವಹಣೆ ಸಮರ್ಪಕವಾಗಿದ್ದಲ್ಲಿ ಹೈನುಗಾರಿಕೆ ಉತ್ತಮ ಆದಾಯವನ್ನು ತಂದು ಕೊಡಲಿದೆ ಎಂದರು.



ಅಧಿಕ ಹಾಲು ಕರೆಯುವ ಸ್ಪರ್ಧೆಯನ್ನು ಗಣ್ಯರು ಉದ್ಘಾಟಿಸಿದರು.

ಅಧಿಕ ಹಾಲು ಕರೆಯುವ ಸ್ಪರ್ಧೆಯನ್ನು ಉದ್ಘಾಟಿಸಿದ ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಮಲ್ಲಣ್ಣ ಮಾತನಾಡಿ, ಕೃಷಿಯ ಜೊತೆಗೆ ಹೈನುಗಾರಿಕೆ ರೈತ ಕುಟುಂಬಗಳಿಗೆ ವರದಾನವಾಗಿರುವುದರಿಂದ ಜಾನುವಾರುಗಳ ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಪಶುಪಾಲನೆ ಹಾಗೂ ಒಕ್ಕೂಟದ ಅಧಿಕಾರಿಗಳು ನೀಡುವ ಸೂಚನೆಗಳನ್ನು ಪಾಲಿಸಿ, ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂಘಕ್ಕೆ ಹಾಲು ಸರಬರಾಜು ಮಾಡುವ 12 ಮಂದಿ ರೈತರು ಹಾಲು ಕರೆಯುವ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಕೆಂಪರಾಜು ಪ್ರಥಮ, ಮಹೇಶ ದ್ವಿತೀಯ ಹಾಗೂ ಪ್ರತಿಮಾ ಮೂರನೇ ಬಹುಮಾನಗಳನ್ನು ಗೆದ್ದರು. ಇನ್ನುಳಿದ 9 ಮಂದಿಗೂ ಸಮಾಧಾನಕರ ಬಹುಮಾನಗಳನ್ನು ವಿತರಿಸಲಾಯಿತು. ರೈತರನ್ನು ಹೈನುಗಾರಿಕೆಗೆ ಆಕರ್ಷಿಸಬೇಕು ಹಾಗೂ ಗುಣಮಟ್ಟದ ಹಾಲು ಉತ್ಪಾದನೆಗೆ ಉತ್ತೇಜನ ನೀಡಲು ಈ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಕಿರಗಸೂರು ಗ್ರಾ.ಪಂ ಅಧ್ಯಕ್ಷೆ ನಾಗರತ್ನಮ್ಮ, ಸದಸ್ಯರಾದ ಕಾಮಿನಿ, ಆರ್.ಗಿರೀಶ್, ಹಿರಿಯೂರು ಬಿಎಂಸಿ ಡೇರಿ ಅಧ್ಯಕ್ಷ ಬಸವರಾಜಪ್ಪ, ಕಾರ್ಯನಿರ್ವಾಹಕ ಶಿವಕುಮಾರ್(ಸತ್ಯರಾಜ್), ಸಂಘದ ಅಧ್ಯಕ್ಷ ಡಿ.ಎಲ್.ಮಹದೇವಪ್ಪ, ಉಪಾಧ್ಯಕ್ಷೆ ಶಿವರುದ್ರಮ್ಮ, ಹಿರಿಯ ಮುಖಂಡ ಡಿ.ಸೋಮಣ್ಣ, ನಿರ್ದೇಶಕರಾದ ಪಿ.ಚಿನ್ನಬುದ್ಧಿ, ನಾಗರಾಜು, ನಂಜುಂಡಸ್ವಾಮಿ, ಸಿದ್ಧಪ್ಪ, ನಾಗಮ್ಮ, ನೀಲಕಂಠಸ್ವಾಮಿ, ಸುಶೀಲ, ಪಿ.ಸರೋಜ, ಲಕ್ಷ್ಮಮ್ಮ, ಪಶು ವೈದ್ಯಾಧಿಕಾರಿ ಡಾ.ಮೋಹನ ಶಂಕರ, ಜಾನುವಾರು ಅಭಿವೃದ್ಧಿ ಅಧಿಕಾರಿ ಡಿ.ಶಿವಣ್ಣ, ಜಾನುವಾರು ಅಧಿಕಾರಿಗಳಾದ ಡಿ. ಪ್ರಕಾಶ್, ಪಾಪಣ್ಣ, ಪರೀಕ್ಷಕರಾದ ಟಿ.ಪಿ.ಪಾಪಣ್ಣ, ಹೆಚ್.ಬಸವರಾಜು, ಎಂ.ಶಿವಸ್ವಾಮಿ, ಸುಬ್ರಹ್ಮಣ್ಯ, ಬಸವಣ್ಣ, ಹೆಚ್.ಕುಮಾರಸ್ವಾಮಿ, ಯೋಗೇಶ್, ರಾಜೇಶ್, ಪ್ರಶಾಂತ್ ಕುಮಾರ್, ಮಹದೇವಸ್ವಾಮಿ, ಶಾಲಿನಿ ಇದ್ದರು.

ಹೊಸ ಅಗ್ರಹಾರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷರ ಆಯ್ಕೆ



ಭೇರ್ಯ,ಜ.5– ಹೊಸ ಅಗ್ರಹಾರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಹವಾಲ್ದಾರ್ ರಾಜೇಗೌಡ ಅವಿರೋಧವಾಗಿ ಆಯ್ಕೆಯಾದರು.

ಈವರೆಗೆ ಅಧ್ಯಕ್ಷರಾಗಿದ್ದ ಹೆಚ್.ಕೆ.ಕೃಷ್ಣೇಗೌಡ, ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಹವಾಲ್ದಾರ್ ರಾಜೇಗೌಡ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು ಎಂದು ಚುನಾವಣಾಧಿಕಾರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಿಇಓ ಮನೋಜ್ ಪ್ರಕಟಿಸಿದರು. ಸಿಬ್ಬಂದಿಗಳಾದ ಹರ್ಷಿತ, ಡಿ.ಆರ್. ಮಹೇಶ್ ಸಹಕಾರ ನೀಡಿದರು.

ಚುನಾವಣೆ ಸಭೆಯಲ್ಲಿ ಉಪಾಧ್ಯಕ್ಷೆ ಇ.ಆರ್. ಕವಿತಾ, ನಿರ್ದೇಶಕರಾದ ರಾಮೇಗೌಡ, ಡಿ.ಎಸ್. ಯೋಗೇಶ್, ಚಂದ್ರಶೇಖರ್, ಗೋಪಾಲ್, ಕೃಷ್ಣೇಗೌಡ, ಜವರೇಗೌಡ, ನಾರಾಯಣನಾಯಕ, ಹೆಚ್.ಆರ್. ಪ್ರಶಾಂತ್, ಗೌರಮ್ಮ, ಜಯಮ್ಮ, ಎಂಸಿಡಿಸಿಸಿ ಬ್ಯಾಂಕ್ ಪ್ರತಿನಿಧಿ ಬಸವರಾಜ್, ಸಂಘದ ಸಿಇಓ ಮನೋಜ್ ಇದ್ದರು.

ಬಳಿಕ ನೂತನ ಅಧ್ಯಕ್ಷ ಹವಲ್ದಾರ್ ರಾಜೇಗೌಡ ಮಾತನಾಡಿ ನಿರ್ದೇಶಕರು ನನ್ನ ಮೇಲೆ ವಿಶ್ವಾಸವಿಟ್ಟು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದ್ದಾರೆ. ಸಹಕಾರ ಸಂಘದ ಅಭಿವೃದ್ಧಿಗೆ ಎಲ್ಲರೂ ಸಹಕಾರ, ಸಲಹೆ ನೀಡಬೇಕು. ಐದು ಲಕ್ಷ ರೂ.ವರೆಗೆ ಶೂನ್ಯ ಬಡ್ಡಿದರಲ್ಲಿ ಸಾಲವನ್ನು ಬ್ಯಾಂಕ್ ನೀಡುವಂತೆ ಎಂಸಿಡಿಸಿಸಿ ಅಧ್ಯಕ್ಷರಿಗೆ ಮನವಿ ಮಾಡಲಾಗುವುದು ಎಂದರು.

ಬಳಿಕ ಸಹಕಾರ ಸಂಘದ ನೂತನ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಾಯಿತು.

ಮೃತರ ನಿವಾಸಕ್ಕೆ ಸಚಿವ ಮಹದೇವಪ್ಪ ಭೇಟಿ



ತಿ.ನರಸೀಪುರದಲ್ಲಿ ನಿಧನರಾದ ಪಟ್ಟಣ ಪಂಚಾಯತ್ ಮಾಜಿ ಅಧ್ಯಕ್ಷ ಬಸವಣ್ಣ ಅವರ ನಿವಾಸಕ್ಕೆ ಸೋಮವಾರ ಸಂಜೆ ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವಾನ ಹೇಳಿದರು. ಈ ವೇಳೆ ಕಾಂಗ್ರೆಸ್ ಮುಖಂಡರು ಮತ್ತು ಮೃತರ ಸಂಬಂಧಿಕರು ಉಪಸ್ಥಿತರಿದ್ದರು.

ಸಂಗೀತ ಹೃದಯಕ್ಕೆ ಹತ್ತಿರವಾದ ಭಾಷೆ, ಎಲ್ಲರನ್ನು ಆಕರ್ಷಿಸುತ್ತದೆ

ನಂಜನಗೂಡು: ಸಂಗೀತ ಹೃದಯಕ್ಕೆ ಹತ್ತಿರವಾದ ಭಾಷೆಯಾಗಿದೆ, ಆದ್ದರಿಂದ ಯಾವುದೇ ದೇಶ ಭಾಷೆಯ ಅಡೆತಡೆ ಇಲ್ಲದೆ ಎಲ್ಲಾ ಭಾಷೆಯ ಜನರನ್ನು ಆಕರ್ಷಿಸುವ ಶಕ್ತಿ ಸಂಗೀತಕ್ಕೆ ಇದೆ ಎಂದು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ತಿಳಿಸಿದರು.

ನಗರದ ನಂದಿ ಕನ್ವೆನ್ಷನ್ ಕಲ್ಯಾಣ ಮಂಟಪದಲ್ಲಿ ನಂಜನಗೂಡಿನ ಹವ್ಯಾಸಿ ಕಲಾವಿದರ ಬಳಗದ ವತಿಯಿಂದ ಏರ್ಪಡಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಸಂಭ್ರಮ ಕನ್ನಡ ಗೀತೆಗಳ ಗಾಯನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡದ ಉತ್ತಮ ಗೀತೆಗಳು ನಮ್ಮ ಜೀವನದ ಜಂಜಾಟವನ್ನು ಮರೆಸಿ ನಮ್ಮಲ್ಲಿ ನವೋಲ್ಲಾಸ ತುಂಬುತ್ತದೆ, ಅಲ್ಲದೆ ಯಾವುದೇ ಭಾಷೆಯ ಗಡಿಗಳಿಲ್ಲದೆ ಜನರ ಭಾವನೆಯನ್ನು ಬೆಸೆಯುವ ಶಕ್ತಿ ಸಂಗೀತಕ್ಕೆ ಇದೆ, ಕನ್ನಡ ಗೀತೆಗಳು ಗಾಯನವು ಮನುಷ್ಯನ ಒತ್ತಡವನ್ನು ನಿವಾರಿಸಿ ಮಾನಸಿಕ ಆರೋಗ್ಯವನ್ನು ಸುಧಾರಿಸಲಿದೆ. ಈ ನಿಟ್ಟಿನಲ್ಲಿ ನಂಜನಗೂಡಿನ ಹವ್ಯಾಸಿ ಕಲಾವಿದರ ಬಳಗ ಕನ್ನಡ ಸಾಹಿತ್ಯ, ಸಂಗೀತವನ್ನು ಬೆಳೆಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು.



ಕನ್ನಡ ಗೀತೆಗಳ ಗಾಯನ ಕಾರ್ಯಕ್ರಮವನ್ನು ಮಡ್ಡೀಕೆರೆ ಗೋಪಾಲ್ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ.ವೈದ್ಯ ಮಾತನಾಡಿ ಜಾತಿ, ಲಿಂಗ ಯಾವುದೇ ಬೇಧವಿಲ್ಲದ ಹೃದಯಕ್ಕೆ ಹಿತವಾದ ಇಂತಹ ಕಾರ್ಯಕ್ರಮಗಳನ್ನು ಹೆಚ್ಚಾಗಿ ಆಯೋಜಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿದ್ದ ಚಲನಚಿತ್ರ ನಿರ್ಮಾಪಕರಾದ ಶ್ರೀ ಗುರುಪ್ರಸಾದ್ ಈ ಕಾರ್ಯಕ್ರಮದಲ್ಲಿ ಹಾಡಿ ಕುಣಿದು ಎಲ್ಲರನ್ನೂ ರಂಜಿಸಿದರು. ಸಮಾರಂಭದಲ್ಲಿ ಹವ್ಯಾಸಿ ಕಲಾವಿದರ ಗೀತೆ ಗಾಯನವು ಪ್ರೇಕ್ಷಕರ ಮನಸೂರೆ ಗೊಂಡಿತು.

ಸಮಾರಂಭದಲ್ಲಿ ವಕೀಲರಾದ ಸುರೇಶ್, ಗೋವರ್ಧನ್, ಸತೀಶ್ ಗಾಣಿಗ, ಹವ್ಯಾಸಿ ಕಲಾವಿದರ ಸಂಸ್ಥಾಪಕ ಗೋಪಿನಾಥ್, ಶಿಶಿರ್ ಆತ್ರೇಯಾಸ್, ಇಂದಿರೇಶ್, ಸೌಮ್ಯ ಇಂದಿರೇಶ್, ಶಿಕ್ಷಕಿ ಬಿ.ಜಯಾ, ಹಾಗೂ ಶಿಕ್ಷಕ, ಶಿಕ್ಷಕಿಯರು ಮತ್ತು ಸಾಹಿತಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

ಕ್ಯಾಲೆಂಡರ್ ಬಿಡುಗಡೆ



ನಂಜನಗೂಡು ತಾಲೂಕು ಕಳಲೆ ಕಡೆಮಾಲಮ್ಮ ದೇವಸ್ಥಾನ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಟ್ರಸ್ಟ್‌ನ ಅಧ್ಯಕ್ಷ ಹರತಲೆ ಕೆ.ತಮ್ಮಣ್ಣೇಗೌಡ ಬಿಡುಗಡೆ ಮಾಡಿದರು. ಟ್ರಸ್ಟ್ ನಿರ್ದೇಶಕರಾದ ಶಂಕರ್.ಬಿ, ಶಿವಮಲ್ಲಪ್ಪ ಮೊತ್ತ ದೊಡ್ಡ ಹುಂಡಿ ಸೋಮಣ್ಣ, ಕಾರ್ಯದರ್ಶಿ ಕಳಲೆ ಬಸವರಾಜ್, ಖಜಾಂಚಿ ದೊಡ್ಡಹುಂಡಿ ಸಿ.ಚಿಕ್ಕಣ್ಣ ರಾಮಲಿಂಗೌಡ ಕಂದೇಗಾಲ, ಸಂಘಟನಾ ಕಾರ್ಯದರ್ಶಿ ಬಸವಣ್ಣ, ಡಿ.ಸಿ.ಬಸವೇಗೌಡ, ಅಂಗಡಿ ನಾಗರಾಜು, ಕೆ.ಬಸವೇಗೌಡ ಅವರುಗಳು ಉಪಸ್ಥಿತರಿದ್ದರು.

ಐದನೇ ಪುಟದಿಂದ

ಸಿದ್ದರಾಮಯ್ಯ ರಾಜ್ಯದ ಅತೀ ದೀರ್ಘಾವಧಿಯ ಮುಖ್ಯಮಂತ್ರಿ

ದಾಖಲೆ ದೇವರಾಜ ಅರಸು ಹಾಗೂ ಸಿದ್ದರಾಮಯ್ಯ ಅವರ ಹೆಸರಲ್ಲಿದೆ.

ನೇರ ಮಾಧ್ಯಮಿಕ ಶಾಲೆಗೆ: ಸಿದ್ದರಾಮನಹುಂಡಿ ಗ್ರಾಮದ ಸಿದ್ದರಾಮೇಗೌಡ ಹಾಗೂ ಬೋರಮ್ಮ ದಂಪತಿಯ ಆರು ಮಕ್ಕಳಲ್ಲಿ ಸಿದ್ದರಾಮಯ್ಯನವರು ನಾಲ್ಕನೆಯವರು. 1948ರ ಆಗಸ್ಟ್ 12ರಂದು ಜನಿಸಿದ ಇವರು, ತುಂಬು ಕುಟುಂಬದಲ್ಲಿ ಬೆಳೆದವರು. ಆದರೆ 10 ವರ್ಷವಾದರೂ ಅವರನ್ನು ಶಾಲೆಗೆ ಸೇರಿಸಿರಲಿಲ್ಲ. ಆ ವೇಳೆ ಗ್ರಾಮದ ಶಾಲೆಗೆ ವರ್ಗವಾಗಿ ಬಂದಿದ್ದ ರಾಜಪ್ಪ ಮೇಷ್ಟ್ರು ಸಿದ್ದರಾಮಯ್ಯ ಅವರನ್ನು ಶಾಲೆಗೆ ಕರೆದೊಯ್ದು ನೇರವಾಗಿ ಐದನೇ ತರಗತಿಗೆ ದಾಖಲಿಸಿಕೊಂಡು, ಕಲಿಸಿದರು. ಮಾಧ್ಯಮಿಕ, ಪ್ರೌಢಶಾಲೆ ವಿದ್ಯಾಭ್ಯಾಸವನ್ನು ತಮ್ಮ ಹುಟ್ಟೂರಿನಲ್ಲೇ ಮುಗಿಸಿದ ಸಿದ್ದರಾಮಯ್ಯ, ಮೈಸೂರಿನಲ್ಲಿ ಪಿಯುಸಿ, ಬಿ.ಎಸ್ಸಿ ನಂತರ ಕಾನೂನು ಪದವಿ ಪಡೆದು ವಕೀಲರಾದ ಚಿಕ್ಕಬೋರಯ್ಯ ಅವರ ಬಳಿ ಜೂನಿಯರ್ ಆಗಿ, ವೃತ್ತಿ ಜೀವನ ಆರಂಭಿಸಿದರು. ಜೊತೆಗೆ ಕೆಲಕಾಲ ಕಾನೂನು ಕಾಲೇಜಿನಲ್ಲಿ ತಾತ್ಕಾಲಿಕ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸಿದರು.

ರಾಜಕೀಯ ಪ್ರವೇಶ: ವಕೀಲ ವೃತ್ತಿ ಮಾಡುತ್ತಿದ್ದ ಸಿದ್ದರಾಮಯ್ಯ ಅವರು ರೈತ ಚಳವಳಿ ನೇತಾರ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರ ಒಡನಾಟದೊಂದಿಗೆ ರಾಜಕೀಯ ಪ್ರವೇಶ ಮಾಡಿದರು. ಡಾ.ರಾಮಮನೋಹರ ಲೋಹಿಯಾ ಅವರಿಂದ ಪ್ರಭಾವಿತರಾಗಿದ್ದ ಇವರು, ಮೊದಲಿಗೆ 1978ರಲ್ಲಿ ನಡೆದ ತಾಲೂಕು ಬೋರ್ಡ್ ಚುನಾವಣೆಯಲ್ಲಿ ಸ್ಪರ್ಧಿಸಿ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ಯಶಸ್ವಿ ಹೆಜ್ಜೆ ಇಟ್ಟರು. 1980ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿದು ಸೋಲು ಅನುಭವಿಸಿದರು. ಬಳಿಕ 1983ರ ವಿಧಾನಸಭಾ ಚುನಾವಣೆಯಲ್ಲಿ ಭಾರತೀಯ ಲೋಕದಳದಿಂದ ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಿ, ಪ್ರತಿಸ್ಪರ್ಧಿಯಾಗಿದ್ದ ಇಂದಿರಾ ಕಾಂಗ್ರೆಸ್ ಅಭ್ಯರ್ಥಿ ಡಿ.ಜಯದೇವರಾಜ ಅರಸ್ ಅವರನ್ನು ಮಣಿಸಿದರು. ಆಗಿನ ರಾಮಕೃಷ್ಣ ಹೆಗಡೆಯವರ ಸರ್ಕಾರಕ್ಕೆ ಬೆಂಬಲ ನೀಡಿದ ಸಿದ್ದರಾಮಯ್ಯ ಅವರನ್ನು ಕನ್ನಡ ಕಾವಲು ಸಮಿತಿ ಅಧ್ಯಕ್ಷರನ್ನಾಗಿ ಮಾಡಲಾಯಿತು. ಗಡಿಭಾಗಗಳಾದ ಕಾಸರಗೋಡು, ಬೆಳಗಾವಿ, ಕೋಲಾರ ಮತ್ತಿತರ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡು, ವರದಿ ಸಲ್ಲಿಸಿದರು.

ಬಳಿಕ 1985ರಲ್ಲಿ ನಡೆದ ಮಧ್ಯಂತರ ಚುನಾವಣೆಯಲ್ಲಿ ಜನತಾಪಕ್ಷದಿಂದ ಸ್ಪರ್ಧಿಸಿ ಎರಡನೇ ಬಾರಿ ಚುನಾಯಿತರಾದ ಸಿದ್ದರಾಮಯ್ಯ ಅವರು ಪಶು ಸಂಗೋಪನೆ, ರೇಷ್ಮೆ ಇಲಾಖೆ ಸಚಿವ ಸ್ಥಾನ ನಿಭಾಯಿಸಿದರು. ನಂತರ ಎಸ್.ಆರ್.ಬೊಮ್ಮಾಯಿ ಸಂಪುಟದಲ್ಲಿ ಸಾರಿಗೆ ಸಚಿವರಾಗಿ ಜವಾಬ್ದಾರಿ ನಿರ್ವಹಿಸಿದರು. 1989ರಲ್ಲಿ ಜನತಾಪಕ್ಷ ಇಬ್ಭಾಗವಾದಾಗ ಸಿದ್ದರಾಮಯ್ಯನವರು ಜನತಾದಳದೊಂದಿಗೆ ಗುರುತಿಸಿಕೊಂಡರು. ಆ ವರ್ಷ ನಡೆದ ಚುನಾವಣೆಯಲ್ಲಿ ಹಿರಿಯ ನಾಯಕ ಎಂ.ರಾಜಶೇಖರಮೂರ್ತಿ ಅವರ ವಿರುದ್ಧ ಸಿದ್ದರಾಮಯ್ಯ ಸೋತರು. ಜನತಾದಳ ಪ್ರಧಾನ ಕಾರ್ಯದರ್ಶಿಯಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದ ಅವರು, 1991ರಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ, ಮತ್ತೆ ಸೋಲು ಕಂಡರು.

ನಿರಂತರ ಎರಡು ಸೋಲುಗಳಿಂದ ದೃತಿಗೆಡದ ಸಿದ್ದರಾಮಯ್ಯ, 1994ರಲ್ಲಿ ಮತ್ತೆ ವಿಧಾನಸಭೆ ಚುನಾವಣೆಯಲ್ಲಿ ಗೆಲುವಿನ ನಗೆ ಬೀರಿದರು. ಹೆಚ್.ಡಿ.ದೇವೇಗೌಡರ ಸಂಪುಟದಲ್ಲಿ ಹಣಕಾಸು ಮಂತ್ರಿಯಾಗಿ, ತಮ್ಮ ಚೊಚ್ಚಲ ಬಜೆಟ್ ಮಂಡಿಸಿದರು. ಆ ನಂತರ 1996ರಲ್ಲಿ ಜೆ.ಹೆಚ್. ಪಟೇಲ್‌ರ ಮಂತ್ರಿಮಂಡಲದಲ್ಲಿ ಉಪಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ಆದರೆ 1999ರ ಜುಲೈನಲ್ಲಿ ಸಿದ್ದರಾಮಯ್ಯ ಅವರನ್ನು ಸಂಪುಟದಿಂದ ಕೈಬಿಡಲಾಯಿತು. ಬಳಿಕ ಜನತಾದಳ ವಿಭಜನೆಯಾದಾಗ ಹೆಚ್.ಡಿ.ದೇವೇಗೌಡರ ಜನತಾದಳ(ಜಾತ್ಯಾತೀತ) ಬಣವನ್ನು ಸೇರಿ, ಅದರ ರಾಜ್ಯ ಘಟಕದ ಅಧ್ಯಕ್ಷರಾದರು. 1999ರ ಚುನಾವಣೆಯಲ್ಲಿ ಸೋತರು. 2004ರಲ್ಲಿ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಧರ್ಮಸಿಂಗ್ ಮುಖ್ಯಮಂತ್ರಿ ಹಾಗೂ ಸಿದ್ದರಾಮಯ್ಯ ಎರಡನೇ ಬಾರಿ ಉಪಮುಖ್ಯಮಂತ್ರಿಯಾದರು.

ಬದಲಾದ ರಾಜಕೀಯ ಸನ್ನಿವೇಶದಲ್ಲಿ ಸಿದ್ದರಾಮಯ್ಯನವರು ಶಾಸಕ ಸ್ಥಾನಕ್ಕೆ ರಾಜಿನಾಮೆ ನೀಡಿ, 2006ರಲ್ಲಿ ಜೆಡಿಎಸ್‌ನಿಂದ ಹೊರನಡೆದರು. ಆ ನಂತರ ಅವರ ರಾಜಕೀಯ ಜೀವನ ಹೊಸ ತಿರುವು ಪಡೆಯಿತು. 2006ರ ಜುಲೈ 22ರಂದು ಸೋನಿಯಾಗಾಂಧಿ ಸಮ್ಮುಖದಲ್ಲಿ ಸಿದ್ದರಾಮಯ್ಯ ಕಾಂಗ್ರೆಸ್ ಸೇರಿದರು. ರಾಜೀನಾಮೆಯಿಂದ ತೆರವಾದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಕ್ಕೆ ನಡೆದ ಮರುಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿ ಶಿವಬಸಪ್ಪ ಅವರ ವಿರುದ್ಧ 257 ಮತಗಳಿಂದ ರೋಚಕ ಗೆಲುವು ಸಾಧಿಸಿದರು. ಹೀಗೆ ಕಾಂಗ್ರೆಸ್‌ನಲ್ಲಿ ಯಶಸ್ವಿ ಪಯಣ ಪ್ರಾರಂಭಿಸಿದ ಸಿದ್ದರಾಮಯ್ಯ, ಆ ನಂತರ ವರುಣಾ ಕ್ಷೇತ್ರದಿಂದ 2008ರಲ್ಲಿ ಗೆದ್ದು ಐದನೇ ಬಾರಿ ಶಾಸಕರಾಗುವುದರೊಂದಿಗೆ ಪ್ರತಿಪಕ್ಷದ ನಾಯಕ ಸ್ಥಾನ ಅಲಂಕರಿಸಿದರು. ಆ ವೇಳೆ ಬಳ್ಳಾರಿ ಗಣಿಧಣಿಗಳ ವಿರುದ್ಧ ಬೆಂಗಳೂರಿನಿಂದ ಬಳ್ಳಾರಿಯವರೆಗೆ ಪಾದಯಾತ್ರೆ ಮಾಡಿ, ರಾಜ್ಯ ರಾಜಕೀಯದಲ್ಲಿ ಸಂಚಲನ ಮೂಡಿಸಿದರು.

ನಂತರ 2013ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ವರುಣಾ ಕ್ಷೇತ್ರದಿಂದಲೇ ಸ್ಪರ್ಧಿಸಿ, ಗೆಲುವು ದಾಖಲಿಸಿದರು. ಮೇ 10ರಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ, ಮೇ 13ರಂದು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅದೇ ವೇಳೆ ಅನ್ನಭಾಗ್ಯ, ಕ್ಷೀರಭಾಗ್ಯಗಳಂತಹ ಹಲವು ಯೋಜನೆಗಳನ್ನು ಘೋಷಿಸಿದರು. 2018ರ ವಿಧಾನಸಭಾ ಚುನಾವಣೆಯಲ್ಲಿ ವರುಣ ಕ್ಷೇತ್ರವನ್ನು ಪುತ್ರ ಡಾ.ಯತೀಂದ್ರಗೆ ಬಿಟ್ಟುಕೊಟ್ಟು ತಾವು ಚಾಮುಂಡೇಶ್ವರಿ ಮತ್ತು ಬಾದಾಮಿ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರು. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜೆಡಿಎಸ್‌ನ ಜಿ.ಟಿ.ದೇವೇಗೌಡರ ವಿರುದ್ಧ ಸೋಲುಂಡ ಸಿದ್ದರಾಮಯ್ಯ, ಬಾದಾಮಿಯಲ್ಲಿ ಬಿಜೆಪಿಯ ರಾಮುಲು ವಿರುದ್ಧ ಗೆದ್ದರು. ಅತಂತ್ರ ಫಲಿತಾಂಶದ ಹಿನ್ನೆಲೆಯಲ್ಲಿ ಜೆಡಿಎಸ್‌ನೊಂದಿಗೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಬೇಕಾಯಿತು. ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾದರೆ, ಸಿದ್ದರಾಮಯ್ಯ ಉಭಯ ಪಕ್ಷಗಳ ಸಮನ್ವಯ ಸಮಿತಿ (ಸಿಎಲ್‌ಪಿ) ನಾಯಕರಾದರು. ಭಿನ್ನಾಭಿಪ್ರಾಯದಿಂದಾಗಿ 17 ಶಾಸಕರು ರಾಜೀನಾಮೆ ನೀಡಿದ್ದರಿಂದ ಸಮ್ಮಿಶ್ರ ಸರ್ಕಾರ ಪತನಗೊಂಡು ಬಿಜೆಪಿ ಅಧಿಕಾರ ಹಿಡಿಯಿತು. ಬಳಿಕ ವಿಪಕ್ಷ ನಾಯಕರಾದ ಸಿದ್ದರಾಮಯ್ಯ, 2023ರಲ್ಲಿ ತವರು ಕ್ಷೇತ್ರ ವರುಣದಿಂದ ಸ್ಪರ್ಧಿಸಿ, ಗೆದ್ದರು. ತಮ್ಮ ರಾಜಕೀಯ ಪಯಣದ 9ನೇ ಗೆಲುವಿನೊಂದಿಗೆ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಈಗ ಆಡಳಿತ ನಡೆಸುತ್ತಿದ್ದಾರೆ.

ಆಶೀರ್ವಾದದಿಂದ ದಾಖಲೆ ನಿರ್ಮಾಣ

ಸುದೀರ್ಘ ಅವಧಿಯ ಮುಖ್ಯಮಂತ್ರಿ ದಾಖಲೆ ಮುರಿಯಲು ರಾಜ್ಯದ ಜನರ ಆಶೀರ್ವಾದದಿಂದ ಸಾಧ್ಯವಾಗಿದೆ. ದೇವರಾಜ ಅರಸು ಅವರು ಮೈಸೂರಿನವರೇ ಆಗಿರುವುದು ಸಂತೋಷದ ಸಂಗತಿ. ನಾನು ತಾಲೂಕು ಬೋರ್ಡ್ ಸದಸ್ಯನಾದ ನಂತರ ನನ್ನ ರಾಜಕೀಯ ಜೀವನದಲ್ಲಿ ಸಚಿವನಾಗುವ ಮತ್ತು ಮುಖ್ಯಮಂತ್ರಿಯಾಗುವ ನಿರೀಕ್ಷೆಯಿರಲಿಲ್ಲ. ಇದುವರೆಗೂ 13 ಚುನಾವಣೆಗಳನ್ನೂ ಎದುರಿಸಿ 8ಕ್ಕೂ ಅಧಿಕ ಬಾರಿ ಗೆಲುವು ಸಾಧಿಸಿದ್ದೇನೆ ಎಂದು ಸ್ಮರಿಸಿದರು.

ದಾಖಲೆಗಳು ಮುರಿಯಬಹುದು: ರಾಜ್ಯದಲ್ಲಿ ಅರಸು ಜನಾಂಗದವರು ಕಡಿಮೆ ಸಂಖ್ಯೆಯಲ್ಲಿದ್ದರೂ ದೇವರಾಜ ಅರಸು ಅವರು ಜನಪ್ರಿಯ ನಾಯಕರಾಗಿ ಹೊರಹೊಮ್ಮಿದ್ದರು. ಅಂತಹ ಮಹಾನ್ ನಾಯಕನಿಗೂ ಮತ್ತು ನನಗೂ ಹೋಲಿಕೆ ಸರಿಯಲ್ಲ. ಅರಸು ಅವರ ಅವಧಿಯಲ್ಲಿ ರಾಜ್ಯದ ಪರಿಸ್ಥಿತಿ ವಿಭಿನ್ನವಾ ಗಿತ್ತು. ದಾಖಲೆಗಳು ಮುರಿಯಲೆಂದೇ ನಿರ್ಮಾಣವಾಗುತ್ತವೆ. ಪ್ರಸ್ತುತ ನಾನು ಪೂರೈಸಲಿರುವ ಅವಧಿಯನ್ನು ಮೀರಲಿರುವ ಮತ್ತೊಬ್ಬ ನಾಯಕನೂ ಬರಬಹುದು. ನನಗಿಂತ ಹೆಚ್ಚಿನ ಬಾರಿ ಬಜೆಟ್ ಮಂಡಿಸುವ ನಾಯಕರೂ ಮುಂದೆ ಬರಬಹುದು. ಈ ಹಿಂದೆ ಕ್ರಿಕೆಟ್‌ನಲ್ಲಿ ಸಚಿನ್ ತೆಂಡೂಲ್ಕರ್ ನಿರ್ಮಿಸಿದ್ದ ದಾಖಲೆಯನ್ನು ಯಾರು ಮುರಿಯಲು ಆಗುವುದಿಲ್ಲ ಎನ್ನುತ್ತಿದ್ದರು. ಆದರೆ, ವಿರಾಟ್ ಕೊಹ್ಲಿ ಸಚಿನ್ ತೆಂಡೂಲ್ಕರ್ ಅವರ ದಾಖಲೆ ಮುರಿಯಲಿಲ್ಲವೇ?

ವರಿಷ್ಠರೊಂದಿಗೆ ಚರ್ಚಿಸಿ ಕ್ರಮ: ಸಂಕ್ರಾಂತಿ ನಂತರ ರಾಜ್ಯ ಬಜೆಟ್ ಸಿದ್ಧತಾ ಕಾರ್ಯ ಆರಂಭಿಸಲಾಗುತ್ತದೆ ಬಜೆಟ್ ಸಿದ್ಧತೆಯೊಂದಿಗೆ ಸಂಪುಟ ಪುನರ್ರಚನೆಯ ಬಗ್ಗೆ ಕಾಂಗ್ರೆಸ್ ವರಿಷ್ಠರಾದ ರಾಹುಲ್ ಗಾಂಧಿಯವರೊಂದಿಗೆ ಚರ್ಚಿಸಲು ಉದ್ದೇಶಿಸಲಾಗಿದೆ. ರಾಹುಲ್ ಗಾಂಧಿ ಅವರು ಸಮಯ ನೀಡಿದಾಗ ದೆಹಲಿಗೆ ಹೋಗಿ ಚರ್ಚೆ ನಡೆಸುವುದಾಗಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಹುಲಿ ಸೆರೆಗೆ ಅರಣ್ಯ ಇಲಾಖೆಗೆ ಸೂಚನೆ: ಮೈಸೂರಿನ ವಿಮಾನ ನಿಲ್ದಾಣದಲ್ಲಿ ಹುಲಿ ಕಾಣಿಸಿಕೊಂಡಿರುವುದಕ್ಕೆ ಪ್ರತಿಕ್ರಿಯೆ ನೀಡಿದ ಅವರು, ನಾಳೆ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸಭೆ ಕರೆದಿದ್ದೇನೆ. ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದ್ದು, ಜನ ವಸತಿ ಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತಿವೆ. ಹುಲಿಯನ್ನು ಸೆರೆಹಿಡಿಯಲು ಸಿಬ್ಬಂದಿ ಕ್ರಮಕೈಗೊಳ್ಳಲು ಸೂಚನೆ ನೀಡಲಾಗಿದ್ದು, ಸೆರೆಹಿಡಿದ ಹುಲಿಗಳನ್ನು ಮತ್ತೊಂದು ಅರಣ್ಯ ಪ್ರದೇಶಕ್ಕೆ ವರ್ಗಾಯಿಸಲು ಸೂಚಿಸಲಾಗಿದೆ ಎಂದರು.

ವಿಮಾನ ನಿಲ್ದಾಣದಲ್ಲಿ ಹುಲಿ ಪ್ರತ್ಯಕ್ಷ

ಇತ್ತಿಂದತ್ತ ಓಡಾಡಿ ನಂತರ ಓಡಿ ಹೋಗುತ್ತಿರುವ ದೃಶ್ಯ ಸೆರೆ ಸಿಕ್ಕಿದೆ. ಹುಲಿ ಪ್ರತ್ಯಕ್ಷವಾಗಿರುವ ಮಾಹಿತಿಯನ್ನು ಭದ್ರತಾ ಸಿಬ್ಬಂದಿ ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ.

ದೌಡಾಯಿಸಿದ ಅರಣ್ಯ ಸಿಬ್ಬಂದಿ: ಹುಲಿ ಪ್ರತ್ಯಕ್ಷವಾಗಿರುವ ಮಾಹಿತಿ ತಿಳಿದು ತಕ್ಷಣ ಸ್ಥಳಕ್ಕೆ ಆಗಮಿಸಿದ ಅರಣ್ಯ ಸಿಬ್ಬಂದಿ, ಭದ್ರತಾ ಸಿಬ್ಬಂದಿಗಳ ಮೊಬೈಲ್‌ನಲ್ಲಿ ಚಿತ್ರೀಕರಿಸಿರುವ ಹುಲಿ ವಿಡಿಯೋ ಹಾಗೂ ಸ್ಥಳ ಪರಿಶೀಲಿಸಿದರು. ಈ ವೇಳೆ ಹುಲಿ ಪ್ರತ್ಯಕ್ಷವಾಗಿರುವುದು ಖಚಿತವಾದ ಹಿನ್ನೆಲೆಯಲ್ಲಿ ವಿಮಾನ ನಿಲ್ದಾಣದ ಸಿಬ್ಬಂದಿಗಳಿಗೆ ಸುರಕ್ಷತೆಗಾಗಿ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ತಿಳುವಳಿಕೆ ನೀಡಲಾಯಿತು.

ಕೂಂಬಿಂಗ್ ಆಪರೇಷನ್: ಹುಲಿ ಪತ್ತೆಗಾಗಿ ಕೂಂಬಿಂಗ್ ಕಾರ್ಯಾಚರಣೆ ನಡೆಸಲು ನಿರ್ಧರಿಸಿದ ಅರಣ್ಯ ಇಲಾಖೆ ಸಿಎಫ್ ರವಿಶಂಕರ್, ಡಿಸಿಎಫ್ ಪರಮೇಶ್ ನೇತೃತ್ವದಲ್ಲಿ ವಿಮಾನ ನಿಲ್ದಾಣದಲ್ಲಿ ಚಿರತೆ ಕಾರ್ಯಪಡೆ, ಆನೆ ಕಾರ್ಯಪಡೆ, ಮೈಸೂರು ವಿಭಾಗದ ಸಿಬ್ಬಂದಿಗಳು, ಪಶುವೈದ್ಯರಾದ ಡಾ. ವಾಸಿಂ ಮಿರ್ಜಾ, ಡಾ.ಆದರ್ಶ್ ಒಳಗೊಂಡಂತೆ 100ಕ್ಕೂ ಹೆಚ್ಚು ಸಿಬ್ಬಂದಿಗಳು ವಿಮಾನ ನಿಲ್ದಾಣದ ಆವರಣದಲ್ಲಿ ಕೂಂಬಿಂಗ್ ಕಾರ್ಯಾಚರಣೆ ನಡೆಸಿದರು. ಕೂಂಬಿಂಗ್ ಕಾರ್ಯಾಚರಣೆ ಯಲ್ಲಿ ಮುಂಚೂಣಿಯಲ್ಲಿದ್ದ ಇಟಿಎಫ್ ಸಿಬ್ಬಂದಿಗಳು ರಕ್ಷ ಕವಚ ಧರಿಸಿ ಕೂಂಬಿಂಗ್‌ನಲ್ಲಿ ತೊಡಗಿದ್ದರು. ಬೆಳಗ್ಗಿನಿಂದ ಸಂಜೆವರೆಗೂ ಕೂಂಬಿಂಗ್ ನಡೆಸಿದರೂ ಹುಲಿ ಸುಳಿವು ಸಿಗಲಿಲ್ಲ.

ಡ್ರೋನ್ ಕಣ್ಣಿಗೆ ಬಿದ್ದ ಕಾಡಂದಿ ಹಿಂಡು: ಹುಲಿ ಪತ್ತೆ ಮಾಡಲು ಥರ್ಮಲ್ ಡ್ರೋನ್‌ನಲ್ಲಿ ವಿಮಾನ ನಿಲ್ದಾಣದ ಆವರಣವನ್ನು ಪರಿಶೀಲಿಸಲಾಯಿತು. ಆದರೆ, ಡ್ರೋನ್ ಕಣ್ಣಿಗೂ ಹುಲಿ ಕಾಣಿಸಲಿಲ್ಲ. ಆದರೆ, ಐದಾರು ಸ್ಥಳದಲ್ಲಿ ಕಾಡಂದಿ, ಮೊಲ ಇರುವುದು ಡ್ರೋನ್‌ನಲ್ಲಿ ಸೆರೆಯಾಗಿದೆ. ಹುಲಿಗೆ ಬಲಿ ಪ್ರಾಣಿಯಾಗಿರುವ ಕಾಡಂದಿಗಳ ಹಿಂಡು ವಿಮಾನ ನಿಲ್ದಾಣದಲ್ಲಿರುವುದರಿಂದ ಹುಲಿ ಅಲ್ಲಿ ನೆಲೆಯೂರಿರುವ ಸಾಧ್ಯತೆ ಇದೆ.

ಎರಡು ವರ್ಷದ ಹಿಂದೆ...

ಕಳೆದ ಎರಡು ವರ್ಷದ ಹಿಂದೆ ಮಂಡಕಳ್ಳಿ ವಿಮಾನ ನಿಲ್ದಾಣದ ಸುತ್ತಮುತ್ತ ಹುಲಿ ಸಂಚಾರವಿರುವುದು ಪತ್ತೆಯಾಗಿತ್ತು. ದೊಡ್ಡಕಾನ್ಯ-ಚಿಕ್ಕಕಾನ್ಯ, ಮಾದಳ್ಳಿ, ಟಿವಿಎಸ್ ಫ್ಯಾಕ್ಟರಿ ಬಳಿ ಹುಲಿ ಓಡಾಡಿತ್ತು. ಮೂರು ಮರಿಗಳೊಂದಿಗೆ ತಾಯಿ ಹುಲಿ ಆ ಭಾಗದಲ್ಲಿ ನೆಲೆಸಿತ್ತು. ಆದರೆ, ಜನರಿಗೆ ಯಾವುದೇ ತೊಂದರೆ ನೀಡಿರಲಿಲ್ಲ. ಕೂಂಬಿಂಗ್ ಕಾರ್ಯಾಚರಣೆ ನಡೆಸಿದ್ದರಿಂದ ತಾಯಿಯಿಂದ ಬೇರ್ಪಟ್ಟಿದ್ದ ಮೂರು ಮರಿಗಳು ಮೂರು ದಿಕ್ಕಿಗೆ ತೆರಳಿದ್ದವು. ಒಂದು ಮರಿ ಶ್ರೀರಂಗಪಟ್ಟಣ ತಾಲೂಕಿನ ಮಾದಾಪುರ ಬಳಿ ಪ್ರತ್ಯಕ್ಷವಾಗಿದ್ದರೆ, ಮತ್ತೊಂದು ಹುಲಿ ಮೈಸೂರು ತಾಲೂಕಿನ ಮೂಡಲಹುಂಡಿ-ವರಕೋಡು ಭಾಗದ ದೊಣ್ಣೆಕಲ್ಲು ಬೆಟ್ಟದ ಕಾಲುವೆ ಏರಿ ಮೇಲೆ ಪ್ರತ್ಯಕ್ಷವಾಗಿತ್ತು. ಮತ್ತೊಂದು ಹುಲಿ 2024ರ ಜ.28ರಂದು ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿಯೇ ಮೈಸೂರು-ನೀಲಗಿರಿ ಮುಖ್ಯರಸ್ತೆ ದಾಟುವಾಗ ಕಾರಿಗೆ ಸಿಲುಕಿ ಮೃತಪಟ್ಟಿದ್ದನ್ನು ಸ್ಮರಿಸಬಹುದು.

ನಾನು ಚಾಮರಾಜ ಕ್ಷೇತ್ರದಿಂದ ಸ್ಪರ್ಧೆ ಬಯಸಿದ್ದೇನೆ

ಮೈಸೂರು-ಕೊಡಗು ಲೋಕಸಭಾ ಸದಸ್ಯನಾಗಿದ್ದ ವೇಳೆ ಚಾಮರಾಜ ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕುರಿತು ಮಾತನಾಡಿದ ಪ್ರತಾಪ್ ಸಿಂಹ, ಕೆ.ಆರ್. ಆಸ್ಪತ್ರೆಯಲ್ಲಿ ಆಮ್ಲಜನಕ ಸ್ಥಾವರಗಳು ಮತ್ತು ಪ್ರಿನ್ಸೆಸ್ ಕೃಷ್ಣಾಜಮ್ಮಣ್ಣಿ ಆಸ್ಪತ್ರೆ, ಮೇಟಗಳ್ಳಿ ಪೋಸ್ಟ್ ಆಫೀಸ್‌ನಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರ ಕಚೇರಿ, ಜಲದರ್ಶಿನಿ ಅತಿಥಿ ಗೃಹದ ಬಳಿ ರಸ್ತೆ ಅಗಲೀಕರಣ, ಹೆಬ್ಬಾಳದಿಂದ ಎಲ್‌ಪಿಜಿ ಪೈಪ್ ಲೈನ್ ಅಳವಡಿಕೆ, ಕಿದ್ವಾಯಿ ಆಸ್ಪತ್ರೆ ಸ್ಥಾಪನೆ, ಆರೋಗ್ಯ ಕೇಂದ್ರಗಳಿಗೆ 356 ಕೋಟಿ ಅನುದಾನ, ಮೈಸೂರು ಮೆಡಿಕಲ್ ಕಾಲೇಜು ವ್ಯಾಪ್ತಿಯ ಕಟ್ಟಡಗಳ ನವೀಕರಣ ಕ್ಕಾಗಿ 89 ಕೋಟಿ ಅನುದಾನ ಸೇರಿದಂತೆ ಇತರೆ ಆರೋಗ್ಯ ಕೇಂದ್ರ ಸ್ಥಾಪನೆಗೆ ಶ್ರಮಿಸಿದ್ದೇನೆ ಎಂದರು.

ಚಾಮರಾಜ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ದೂರದೃಷ್ಟಿ ಹೊಂದಿದ್ದು, ಇಡೀ ರಾಜ್ಯದಲ್ಲಿ ಅತ್ಯಂತ ಅಭಿವೃದ್ಧಿ ಹೊಂದಿದ ಮಾದರಿ ಕ್ಷೇತ್ರವಾಗಿ ಹೊರ ಹೊಮ್ಮುವಂತೆ ನೋಡಿಕೊಳ್ಳುತ್ತೇನೆ ಎಂದು ಪ್ರತಾಪ್ ಸಿಂಹ ಭರವಸೆ ನೀಡಿದರು.

ಜೀವ ತೆಗೆಯುವವರನ್ನು ಸಿದ್ದರಾಮಯ್ಯ ಸಾಕಿಕೊಂಡಿದ್ದಾರೆ

ಬಳ್ಳಾರಿ ರೆಡ್ಡಿಗಳ ವಾರ್ ಬಗ್ಗೆ ಪತಿಕ್ರಿಯೆ ನೀಡಿದ ಪ್ರತಾಪ್‌ಸಿಂಹ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜೀವ ತೆಗೆಯುವವರನ್ನು ಸಾಕಿಕೊಂಡಿದ್ದಾರೆ. ಅವರು ಕೊಟ್ಟ ಸ್ವಾತಂತ್ರ್ಯದಿಂದ ಶಾಸಕ ಭರತ್ ರೆಡ್ಡಿಯಂತಹವರು ಈ ರೀತಿಯ ವರ್ತನೆ ತೋರಿದ್ದಾರೆ ಎಂದು ಆರೋಪಿಸಿದರು. ಭರತ್ ರೆಡ್ಡಿಯ ಆ ವರ್ತನೆಗೆ ಆತನೆ ಕಾರಣ, ತಪ್ಪು ಅವನ್ನದು ಮಾತ್ರವಲ್ಲದೆ ಅವನನ್ನು ಸಾಕಿಕೊಂಡ ವರ ತಪ್ಪು ಕೂಡ ಇದೆ. ಭರತ್ ರೆಡ್ಡಿ ವರ್ತನೆಯನ್ನು ನಾಗರಿಕ ಸಮಾಜ ಸಹಿಸಿಕೊಳ್ಳುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಳ್ಳಾರಿ ಘಟನೆಯಿಂದ ಇಡೀ ರಾಜ್ಯವೇ ತಲೆ ತಗ್ಗಿಸುವ ಸ್ಥಿತಿ ಬಂದಿದೆ. ಉತ್ತರ ಪ್ರದೇಶ ಹಾಗೂ ಬಿಹಾರದಲ್ಲಿ ಇಂತಹ ಘಟನೆಗಳು ನಡೆಯುತ್ತಿತ್ತು. ಆದರೆ ಈಗ ಕರ್ನಾಟಕದಲ್ಲಿಯೂ ನಡೆಯುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ವಿಧಾನಸಭಾ ಅಧಿವೇಶನದಲ್ಲಿ ಭರತ್ ರೆಡ್ಡಿ ಉನ್ಮಾದ (ಎಕ್ಸೈಟ್ ಮೆಂಟ್) ದಿಂದ ಮಾತನಾಡುವಾಗಲೇ ಸ್ಪೀಕರ್ ಆತನ ವಿರುದ್ಧ ಕ್ರಮ ಕೈಗೊಳ್ಳಬೇಕಿತ್ತು. ಆದರೆ ಅಂದು ಆತನ ಅಟ್ಟಹಾಸ ಸಹಿಸಿದ ಕಾರಣ ಇಂದು ಭರತ್ ರೆಡ್ಡಿ ಈ ಲೆವೆಲ್‌ಗೆ ಬಂದಿದ್ದಾನೆ ಎಂದು ಕಿಡಿಕಾರಿದರು.

ನಮ್ಮ ಬಳಿಯೂ ವೆಪನ್ ಇದೆ, ನಮ್ಮ ಬಳಿಯೂ ಗನ್ ಮ್ಯಾನ್‌ಗಳಿದ್ದಾರೆ, ಹಾಗೆಂದು ಯಾರಾದರೂ ಇವರಂತಹ ಕೆಲಸ ಮಾಡಿದ್ದಾರೆಯೇ ಎಂದು ಪ್ರಶ್ನಿಸಿದರು.

ಬಳ್ಳಾರಿಯಲ್ಲಿ ಜೀವ ಹೋಗಿರುವುದು ಕಾಂಗ್ರೆಸ್ ಕಾರ್ಯಕರ್ತನದ್ದಲ್ಲ, ಅದು ಒಬ್ಬ ಕನ್ನಡಿಗನ ಜೀವ. ಇದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜನಾರ್ಧನ ರೆಡ್ಡಿಯನ್ನು ಈ ಪ್ರಕರಣದಲ್ಲಿ ಎ 1 ಆರೋಪಿಯಾಗಿ ಪರಿಗಣಿಸಲಾಗಿದೆ. ಸಿದ್ದರಾಮಯ್ಯ ಯಾವ ರೀತಿಯ ಮೇಲ್ಪಂಕ್ತಿ ಹಾಕುತ್ತಿದ್ದಾರೋ ತಿಳಿಯದು, ದೇವರಾಜ ಅರಸ್ ರೆಕಾರ್ಡ್ ಮುರಿಯುತ್ತೇನೆ ಎನ್ನುತ್ತಾರೆ. ಆದರೆ ದೇವರಾಜ ಅರಸ್ ಅವರ ಆಡಳಿತ ವೈಖರಿಯನ್ನು ಪಾಲಿಸಲು ಸಿದ್ದರಾಮಯ್ಯ ಅವರಿಗೆ ಆಗದು ಎಂದರು.

ಕಾಂಗ್ರೆಸ್‌ನ ಕೊನೆ ಮುಖ್ಯಮಂತ್ರಿ ಸಿದ್ದರಾಮಯ್ಯ

ರಾಜ್ಯದ ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಮತ್ತು ಗೃಹ ಸಚಿವರು ನಕಲಿ ಶ್ಯಾಮರಂತೆ ವರ್ತಿಸುತ್ತಿದ್ದಾರೆ. ಗೃಹ ಸಚಿವರಿಗೆ ಅಧಿಕಾರದ ಗತ್ತು ಎಂಬುದೇ ಗೊತ್ತಿಲ್ಲ. ಯಾವುದೇ ಪ್ರಕರಣ ನಡೆದರೂ ಎಸ್‌ಐಟಿ ರಚಿಸಿ ಕೈತೊಳೆದುಕೊಳ್ಳುವುದು. ನಾಜೂಕಯ್ಯನ ರೀತಿ ಮಾತನಾಡುವುದೊಂದೇ ತಿಳಿದಿರುವುದು.

ಬಳ್ಳಾರಿ ಘಟನೆ ಮುಚ್ಚಿ ಹಾಕುವ ಯತ್ನಕ್ಕೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವರ ಹೇಳಿಕೆಗಳೇ ಸಾಕ್ಷಿಯಾಗಿವೆ. ಬಹಿರಂಗವಾಗಿ ಅಧಿಕಾರದ ಮುಖ್ಯಸ್ಥಾನದಲ್ಲಿ ಇರುವವರೇ ಇಂತಹ ಹೇಳಿಕೆಗಳನ್ನು ನೀಡಿದರೆ, ಇನ್ನು ತನಿಖೆಯ ಸ್ವರೂಪ ಹೇಗಿರುತ್ತದೆ ಎಂದು ಪ್ರಶ್ನಿಸಿದರು. ಸ್ಥಳೀಯ ಶಾಸಕ ಭರತ್ ರೆಡ್ಡಿ ಬೆಂಬಲಿಗ ಸತೀಶ್ ರೆಡ್ಡಿ ಅವರ ಖಾಸಗಿ ಭದ್ರತಾ ಸಿಬ್ಬಂದಿ ಹಾರಿಸಿದ ಗುಂಡಿನಿಂದ ಕಾಂಗ್ರೆಸ್ ಕಾರ್ಯಕರ್ತ ಮೃತಪಟ್ಟಿದ್ದಾನೆ. ಕೊಲೆ ಮುಚ್ಚಿ ಹಾಕಲು ಆತನ ಕುಟುಂಬಕ್ಕೆ 25 ಲಕ್ಷ ರೂ.ಗಳನ್ನು ಮೂಟೆಯಲ್ಲಿ ಕದ್ದುಮುಚ್ಚಿ ಕೊಟ್ಟಿದ್ದಾರೆ. ಇದು ಯಾರ ಹಣ, ಆದಾಯ ತೆರಿಗೆ ವ್ಯಾಪ್ತಿಗೆ ಬಂದಿದೆಯೋ ಎಂದು ಪ್ರಶ್ನಿಸಿದರು. ಕಾಂಗ್ರೆಸ್ ಕಾರ್ಯಕರ್ತರಿಗೆ ಭದ್ರತೆ ಇಲ್ಲವಾಗಿದೆ. ಅವರು ಈ ಸರ್ಕಾರವನ್ನು ಧಿಕ್ಕರಿಸಿ ಹೊರಬರ ಬೇಕು ಎಂದು ಮನವಿ ಮಾಡಿದರು. ತಮ್ಮ ಅಧಿಕಾರದ ಆಸೆ ಮತ್ತು ತೆವಲಿಗೆ ಯಾರನ್ನು ಬೇಕಾದರೂ ಬಲಿ ಕೊಡುತ್ತಾರೆ. ಪಕ್ಷದ ಕಾರ್ಯಕರ್ತನ ಕೊಲೆಯನ್ನು ಮುಚ್ಚಿಹಾಕಲು ಸರ್ಕಾರವೇ ಮುಂದಾಗಿದ್ದು, ಈಗಲಾದರೂ ಎಚ್ಚೆತ್ತುಕೊಳ್ಳಿ ಎಂದರು.

ಕುಂಬಾರರು ಕಾಯಕ ಯೋಗಿಗಳು; ಈ ಸಮುದಾಯದ ಅಭಿವೃದ್ಧಿಗೆ ಸರ್ಕಾರ ಬದ್ಧ

● ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ● ಕುಂಬಾರ ಸಂಘದ ಅಮೃತ ಮಹೋತ್ಸವ; ಮಹಾ ಸಮ್ಮೇಳನ ಉದ್ಘಾಟನೆ ● ಕುಂಬಾರರ ಅಭಿವೃದ್ಧಿ ನಿಗಮ ನೋಂದಣಿ ಆದ ಕೂಡಲೇ ಅನುದಾನ ಬಿಡುಗಡೆ ಭರವಸೆ

ಮೈಸೂರು, ಜ.5(ಎಂಕೆ)– ನೆಲದ ಮೂಲ ಇತಿಹಾಸವುಳ್ಳ ಕುಂಬಾರರು ಕಾಯಕ ಯೋಗಿಗಳಾಗಿದ್ದು, ಕುಂಬಾರ ಸಮುದಾಯದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಮೈಸೂರು ಜಿಲ್ಲಾ ಕುಂಬಾರರ ಸಂಘದ ಅಮೃತ ಮಹೋತ್ಸವ ಹಾಗೂ ರಾಜ್ಯ ಕುಂಬಾರರ ಮಹಾ ಸಮ್ಮೇಳನವನ್ನು ಮಡಿಕೆ ತಯಾರಿಸುವ ಚಕ್ರವನ್ನು ತಿರುಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಕುಂಬಾರ ಸಮುದಾಯ ಅತ್ಯಂತ ಹಿಂದುಳಿದ ಸಮುದಾಯವಾದರೂ, ಇತಿಹಾಸದ ಮೂಲ ಪುರುಷರನ್ನು ಮರೆಯಲು ಸಾಧ್ಯವಿಲ್ಲ. ಕುಂಬಾರರು ಕಾಯಕ ಯೋಗಿಗಳು ಎಂದರು.

ಮಡಿಕೆ ಮಾಡುವುದು ಒಂದು ಕಲೆಯಾಗಿದ್ದು, ಎಲ್ಲರಿಂದಲೂ ಮಡಿಕೆ ಮಾಡಲು ಸಾಧ್ಯವಿಲ್ಲ. ಅದರಲ್ಲಿ ಪರಿಣಿತಿ ಇದ್ದರೆ ಮಾತ್ರ ಸಾಧ್ಯವಾಗುತ್ತದೆ. ಲೋಹದ ಪಾತ್ರೆಗಳು ಬರುವುದಕ್ಕೂ ಮೊದಲು ಮಡಿಕೆಗಳನ್ನು ಬಳಕೆ ಮಾಡಲಾಗುತ್ತಿತ್ತು. ಈಗ ಮಣ್ಣಿನ ಮಡಿಕೆಗಳಿಗಿಂತ ಮಣ್ಣಿನ ಕಲಾಕೃತಿಗಳನ್ನು ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಕುಂಬಾರ ಸಮುದಾಯದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಬದ್ಧವಾಗಿದ್ದು, ಅಭಿವೃದ್ಧಿಗೆ ನಿಗಮ ರಿಜಿಸ್ಟರ್ ಆದ ಬಳಿಕ ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು.

ಸ್ವಾರ್ಥಕ್ಕಾಗಿ ಜಾತಿ ವ್ಯವಸ್ಥೆ: ದೇವರು ಜಾತಿ ವ್ಯವಸ್ಥೆ ಮಾಡಲಿಲ್ಲ. ಕೆಲ ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಸ್ವಾರ್ಥಕ್ಕಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ಚಾತುರ್ವರ್ಣ ವ್ಯವಸ್ಥೆ ಮಾಡಿ, ಶೂದ್ರರ ಕೈಯ್ಯಲ್ಲಿ ದುಡ್ಡಿರಬಾರದು, ಅವರು ಯಾವಾಗಲೂ ದುಡಿಯುತ್ತಿರಬೇಕೆಂದು ಶೂದ್ರರನ್ನು ಅಕ್ಷರ ಸಂಸ್ಕೃತಿಯಿಂದ ವಂಚಿತರನ್ನಾಗಿಸಿದರು. ಆದ್ದರಿಂದಲೇ ಸಮಾಜದಲ್ಲಿ ಅಸಮಾನತೆ ಉಂಟಾಯಿತು. ಶಿಕ್ಷಣದಿಂದ ವಂಚಿತರಾಗಿದ್ದರಿಂದಲೇ ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿದ್ದು. ಅಂಬೇಡ್ಕರ್ ದೇಶಕ್ಕೆ ಸಂವಿಧಾನ ಕೊಟ್ಟ ನಂತರ ಸಮಾನ ಅವಕಾಶ ದೊರೆತವು ಎಂದು ತಿಳಿಸಿದರು.

ವಿದ್ಯಾವಂತರಾಗಿ: ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಅವಕಾಶಗಳು ಸಿಗಬೇಕು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಆದ್ದರಿಂದ ಎಲ್ಲರೂ ವಿದ್ಯಾವಂತರಾಗಲೇಬೇಕು. ಕುಂಬಾರಿಕೆ ಮಾಡಿ, ಜೊತೆಗೆ ವಿದ್ಯಾವಂತರಾಗಿ. ರಾಜಕೀಯ ಸ್ವಾತಂತ್ರ್ಯ ಸಿಗಬೇಕಾದರೆ, ಅದರ ತಳಹದಿಯಾದ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಮೊದಲು ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಣ್ಣಿನೊಂದಿಗೆ ಕುಂಬಾರರ ಬದುಕು: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಕುಂಬಾರರ ಬದುಕು ಮಣ್ಣಿನೊಂದಿಗೆ ಸೇರಿದ್ದು, ಸ್ವಾತಂತ್ರ್ಯದ ಉದ್ದೇಶವೂ ಕೂಡ ಭಾರತದ ಮೂಲ ಕಸುಬುಗಳ ಆಧಾರದ ಮೇಲೆ ದೇಶವನ್ನು ಕಟ್ಟುವುದಾಗಿದೆ. ಮಡಿಕೆ ತಯಾರಿಕೆ ಮಾಡುವ ಕುಂಬಾರರ ಬದುಕು ಕಷ್ಟದಲ್ಲಿದ್ದು, ಹಕ್ಕು-ಅಧಿಕಾರ ಪಡೆದುಕೊಳ್ಳುವುದಕ್ಕಾಗಿ ಸಂಘಟನಾತ್ಮಕ ಹೋರಾಟ ಮಾಡಬೇಕು ಎಂದು ಕಿವಿಮಾತು ಹೇಳಿದರು.

ನಿಜವಾದ ಮಣ್ಣಿನ ಮಕ್ಕಳು ಕುಂಬಾರರು: ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾತನಾಡಿ, ಕುಂಬಾರಿಕೆ ಕಸುಬು ಪುರಾತನವಾದದ್ದು. ಕುಂಬಾರಿಕೆಯನ್ನೇ ನಂಬಿರುವ ಕುಂಬಾರ ಸಮುದಾಯ ಶಿಕ್ಷಣದ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರಬೇಕಿದೆ. ನಾವೆಲ್ಲರೂ ಮಣ್ಣಿನ ಮಕ್ಕಳೇ ಆದರೂ ನಿಜವಾದ ಮಣ್ಣಿನ ಮಕ್ಕಳು ಕುಂಬಾರರು ಎಂದು ಮೆಚ್ಚುಗೆ ಮಾತುಗಳನ್ನಾಡಿದರು.

ಶ್ರೀ ಕ್ಷೇತ್ರ ಮಾಣೀಲ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ, ಬಿಜಾಪುರ ತೆಲಸಂಗದ ಶ್ರೀ ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ, ಚಿತ್ರದುರ್ಗ ಕುಂಬಾರ ಗುಂಡಯ್ಯ ಮಹಾಸಂಸ್ಥಾನದ ಶ್ರೀ ಬಸವಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಉತ್ತರ ಪ್ರದೇಶದ ಸಚಿವ ಧರ್ಮವೀರ್ ಪ್ರಜಾಪತಿ, ಶಾಸಕರಾದ ಕೆ.ಹರೀಶ್ ಗೌಡ, ಡಿ.ರವಿಶಂಕರ್, ದರ್ಶನ್ ಧ್ರುವನಾರಾಯಣ್, ವಿಧಾನಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮಾಜಿ ಎಂಎಲ್‌ಸಿ ವೇಣುಗೋಪಾಲ್, ಗ್ಯಾರಂಟಿ ಯೋಜನೆ ರಾಜ್ಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಮೈಲಾಕ್ ಅಧ್ಯಕ್ಷ ಗಣೇಶ್, ಲೋಕೋಪಯೋಗಿ ಇಲಾಖೆ ನಿವೃತ್ತ ಮುಖ್ಯ ಇಂಜಿನಿಯರ್ ಆರ್.ಶ್ರೀನಿವಾಸ್, ಕರ್ನಾಟಕ ರಾಜ್ಯ ಸಮಸ್ತ ಕುಂಬಾರರ ಅಭಿವೃದ್ಧಿ ವೇದಿಕೆ ರಾಜ್ಯ ಸಂಚಾಲಕ ಡಾ.ಎಂ.ಪಿ.ವರ್ಷ, ಕರ್ನಾಟಕ ರಾಜ್ಯ ಕುಂಬಾರ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಾಬು ಕುಂಬಾರ್, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾವ್, ಮೈಸೂರು ಜಿಲ್ಲಾ ಕುಂಬಾರರ ಸಂಘದ ಅಧ್ಯಕ್ಷ ಹೆಚ್.ಎಸ್.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕೆ.ಆರ್.ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಸೋಮವಾರ ನಡೆದ ಮೈಸೂರು ಜಿಲ್ಲಾ ಕುಂಬಾರರ ಸಂಘದ ಅಮೃತ ಮಹೋತ್ಸವ ಹಾಗೂ ರಾಜ್ಯ ಕುಂಬಾರರ ಮಹಾ ಸಮ್ಮೇಳನವನ್ನು ಮಡಿಕೆ ತಯಾರಿಸುವ ಚಕ್ರವನ್ನು ತಿರುಗಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಶ್ರೀ ಕ್ಷೇತ್ರ ಮಾಣೀಲ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ, ಬಿಜಾಪುರ ತೆಲಸಂಗದ ಶ್ರೀ ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ, ಚಿತ್ರದುರ್ಗ ಕುಂಬಾರ ಗುಂಡಯ್ಯ ಮಹಾಸಂಸ್ಥಾನದ ಶ್ರೀ ಬಸವಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ, ಕೆ.ವೆಂಕಟೇಶ್, ಉತ್ತರ ಪ್ರದೇಶದ ಸಚಿವ ಧರ್ಮವೀರ್ ಪ್ರಜಾಪತಿ ಮತ್ತಿತರರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಮನವಿ...

ರಾಜ್ಯ ಕುಂಬಾರರ ಮಹಾ ಸಮ್ಮೇಳನದಲ್ಲಿ ಕುಂಬಾರರ ಅಭಿವೃದ್ಧಿ ನಿಗಮಕ್ಕೆ ಚಾಲನೆ ನೀಡಿ, ನೂರು ಕೋಟಿ ರೂ.ಅನುದಾನ ಬಿಡುಗಡೆ ಮಾಡಬೇಕು. ಸರ್ವಜ್ಞ ಅಭಿವೃದ್ಧಿ ಪ್ರಾಧಿಕಾರವನ್ನು ರಾಜ್ಯಮಟ್ಟಕ್ಕೆ ವ್ಯಾಪಿಸಬೇಕು. ಸರ್ವಜ್ಞರ ಹೆಸರಿನಲ್ಲಿ ರಾಜ್ಯ ಮಟ್ಟದ ಪ್ರಶಸ್ತಿ ನೀಡಬೇಕು. ವಿಧಾನ ಪರಿಷತ್, ರಾಜ್ಯಸಭೆ ಹಾಗೂ ವಿವಿಧ ನಿಗಮ ಮಂಡಳಿಗಳಿಗೆ ಕುಂಬಾರ ಸಮುದಾಯದ ಮುಖಂಡರನ್ನು ನಾಮ ನಿರ್ದೇಶನ ಮಾಡಬೇಕು ಹಾಗೂ ಮೈಸೂರಿನ ಕುಂಬಾರಕೊಪ್ಪಲು ಮುಖ್ಯ ದ್ವಾರಕ್ಕೆ ತ್ರಿಪದಿ ಬ್ರಹ್ಮ ಸರ್ವಜ್ಞರ ಹೆಸರನ್ನು ನಾಮಕರಣ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

ವಿದ್ಯೆ ಯಾರಪ್ಪನ ಮನೆ ಸ್ವತ್ತಲ್ಲ...

ವಿದ್ಯೆ ಯಾರಪ್ಪನ ಮನೆ ಸ್ವತ್ತಲ್ಲ. ಪಟ್ಟಭದ್ರ ಹಿತಾಸಕ್ತಿಗಳೇ ವಿದ್ಯೆ ಒಂದು ವರ್ಗಕ್ಕೆ ಸೀಮಿತ ಎಂಬ ಭಾವನೆಯನ್ನು ಜನರಲ್ಲಿ ತುಂಬಿದ್ದರು. ಜನರನ್ನು ದಾರಿ ತಪ್ಪಿಸಿದ್ದರು. ಹಾಗಾಗಿ ಬದಲಾವಣೆಯಾಗಬೇಕಾದರೆ ವಿದ್ಯಾವಂತರಾಗಲೇಬೇಕು. ಡಾಕ್ಟರ್, ಇಂಜಿನಿಯರ್, ವಿಜ್ಞಾನಿಗಳಾಗಬೇಕು. ನಮ್ಮಪ್ಪ ಓದಿಸಿದ್ದರಿಂದಲೇ ನಾನೂ ಲಾಯರ್ ಆಗಿದ್ದು. ಆದ್ದರಿಂದ ಸ್ವಾತಂತ್ರ್ಯ ಯಶಸ್ವಿಯಾಗಬೇಕಾದರೆ ಪ್ರತಿಯೊಬ್ಬರಿಗೂ ಶಿಕ್ಷಣ ಅವಶ್ಯ

– ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಿದ್ದರಾಮಯ್ಯ ಅವರು ರೆಕಾರ್ಡ್‌ಗಾಗಿ ಇರುವವರಲ್ಲ...!

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೆಕಾರ್ಡ್‌ಗಾಗಿ ಇರುವವರಲ್ಲ. ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವ ಕೆಲಸ ಮಾಡಲು ಇರುವವರು. ಇದಕ್ಕೆ ಉದಾಹರಣೆಯೇ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ. ಸಿದ್ದರಾಮಯ್ಯ ಅವರ ನಾಯಕತ್ವದಲ್ಲಿ ರಾಜ್ಯ ಸರ್ಕಾರ ಸಕಾರಾತ್ಮಕ ಯೋಜನೆಗಳನ್ನು ರೂಪಿಸುವ ಮತ್ತು ಜಾರಿಗೊಳಿಸುವ ಕೆಲಸ ಮಾಡುತ್ತಿದೆ.

– ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ

ತುಮಕೂರು: ದೇವರಾಯನದುರ್ಗ ಅರಣ್ಯ ಪ್ರದೇಶದಲ್ಲಿ 11 ಮಂಗಗಳು ಸಾವು; ವಿಷಾಹಾರ ಸೇವನೆ ಶಂಕೆ!

ತುಮಕೂರು, ಜ.5– ಕಳೆದ ಎರಡು ದಿನಗಳಲ್ಲಿ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಎರಡು ಲಂಗೂರ್‌ಗಳು ಸೇರಿದಂತೆ 11 ಮಂಗಗಳು ಸಾವಿಗೀಡಾಗಿವೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ತುಮಕೂರು ತಾಲೂಕಿನ ದೇವರಾಯನದುರ್ಗ–ದುರ್ಗದಹಳ್ಳಿ ಅರಣ್ಯ ಪ್ರದೇಶದಲ್ಲಿ 200 ರಿಂದ 500 ಮೀಟರ್ ವ್ಯಾಪ್ತಿಯಲ್ಲಿ ಒಂಬತ್ತು ಮಂಗಗಳು ಮತ್ತು ಎರಡು ಲಂಗೂರ್‌ಗಳ ಮೃತದೇಹಗಳು ಪತ್ತೆಯಾಗಿವೆ ಎಂದು ಅವರು ಹೇಳಿದರು. ಮರಣೋತ್ತರ ಪರೀಕ್ಷೆ ನಡೆಸಲಾಗಿದ್ದು, ಪ್ರಾಥಮಿಕವಾಗಿ ಪ್ರಾಣಿಗಳ ಅನ್ನನಾಳ ಮತ್ತು ಕರುಳಿನಲ್ಲಿ ಅಕ್ಕಿ ಕಂಡುಬಂದಿದ್ದು, ವಿಷಾಹಾರ ಸೇವನೆಯಿಂದ ಸಾವಿಗೀಡಾಗಿರಬಹುದು ಎಂದು ಶಂಕಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಕ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಅಖಂಡ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಧುರಂದರ್ (ಹಿ)	3 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	5 ಪ್ರದರ್ಶನಗಳು
ಲಿಡೋ	
ಅಖಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ಐದು ವರ್ಷಕ್ಕೆ ಸಿಎಂ ಆಯ್ಕೆಯಾಗಿದ್ದಾರೆ

ಸಚಿವ ಜಾರಕಿಹೊಳಿ ಸ್ಪಷ್ಟನೆ



ಮೈಸೂರು, ಜ.5(ಎಂಟಿವೈ)– ಐದು ವರ್ಷದ ಅವಧಿಗೆ ಮುಖ್ಯಮಂತ್ರಿ ಆಯ್ಕೆ ಆಗಿದ್ದಾರೆ. ಇದರಿಂದ ನಾಯಕತ್ವ ಬದಲಾವಣೆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಹಿಂದೆ ಹಲವು ಬಾರಿ ಮುಖ್ಯಮಂತ್ರಿ ಆಯ್ಕೆ 5 ವರ್ಷಕ್ಕೆ ಆಗಿದೆ ಎಂದು ಹೇಳಿದ್ದೇನೆ. ಅಲ್ಲದೆ, ಈ ವಿಚಾರವನ್ನು ಮುಖ್ಯಮಂತ್ರಿಗಳು ಹಲವು ಬಾರಿ ಹೇಳಿದ್ದಾರೆ. ಮತ್ತೆ ಮತ್ತೆ ನಾಯಕತ್ವ ಬದಲಾವಣೆ ಪ್ರಶ್ನೆ ಮತ್ತು ಚರ್ಚೆಗಳು ಅನಗತ್ಯ. ಇಂತಹ ಎಲ್ಲಾ ಚರ್ಚೆಗಳು ನಿಲ್ಲಬೇಕು ಎಂದರು.

ಬಜೆಟ್ ನಂತರ ಅಧಿಕಾರ ಹಂಚಿಕೆ ಚರ್ಚೆ ನಡೆಯುತ್ತದೆ ಎಂದು ನಾನು ಎಲ್ಲಿಯೂ ಹೇಳಿಲ್ಲ. ನಾನು ಆ ರೀತಿ ಮಾತನಾಡಿಲ್ಲ. ನಾನು ಅಧಿಕಾರ ಹಂಚಿಕೆಯ ನಿರ್ಧಾರ ಮಾಡುವ ಸ್ಥಾನದಲ್ಲೂ ಇಲ್ಲ ಎಂದರಲ್ಲದೆ, ನಾನು ಯಾವ ಸಿಎಂ ರೇಸ್‌ನಲ್ಲೂ ಇಲ್ಲ ಎಂದು ಸ್ಪಷ್ಟಪಡಿಸಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಚರ್ಚೆಯೂ ಇಲ್ಲ. ಬದಲಾವಣೆ ಚರ್ಚೆ ಬಂದಾಗ ನೋಡೋಣಾ ಎಂದರು. ಬಳ್ಳಾರಿಯಲ್ಲಿ ನಡೆದ ಗಲಭೆ ಕುರಿತಂತೆ ನಿಷ್ಪಕ್ಷಪಾತವಾಗಿ ತನಿಖೆ ನಡೆಯುತ್ತಿದೆ. ತನಿಖೆಯ ವರದಿ ಬಂದ ಬಳಿಕ ಸತ್ಯಾಸತ್ಯತೆ ತಿಳಿಯಲಿದೆ ಎಂದು ತಿಳಿಸಿದರು.

ಮಾಜಿ ಸೈನಿಕರಿಂದ ಬೈಕ್ ರ್‍ಯಾಲಿ



ಮೈಸೂರು,ಜ.5– Captain, Team leader, Bike Rally, office in- charge, Records the Madras Regiment ಭಾರತೀಯ ಸೇನೆಯ ಮಾಜಿ ಸೈನಿಕರು one to one interaction ಸಂಬಂಧ ಜನವರಿ 5 ರಿಂದ 9 ರವರೆಗೆ ಬೈಕ್ ರ್‍ಯಾಲಿ ನಡೆಸುತ್ತಿದ್ದು, ಜ.6 ರಂದು ಮೈಸೂರು, ಹುಣಸೂರು, ಪಿರಿಯಾಪಟ್ಟಣ, ಕುಶಾಲನಗರ, ಮೂಲಕ ಮಡಿಕೇರಿಗೆ ಬೈಕ್ ರ್‍ಯಾಲಿಯು ತಲುಪಲಿದೆ ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ್ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.






ಕರ್ನಾಟಕ ರಾಜ್ಯದ ಇತಿಹಾಸದಲ್ಲೆ
ಅತಿ ಹೆಚ್ಚು ಅವಧಿಗೆ ಮುಖ್ಯಮಂತ್ರಿಯಾಗಿ
ಸ್ವಚ್ಛ ಹಾಗೂ ದಕ್ಷ ಆಡಳಿತ ನಡೆಸಿದ
ನಮ್ಮ ಬಡವರ ಬಂಧು, ಸಮಾ ಸಮಾಜದ
ಚಿಂತಕರು ಹಾಗೂ ಅಹಿಂದ ಅಗ್ರಗಣ್ಯನಾಯಕರಾಗಿ
ದಾಖಲೆ ನಿರ್ಮಿಸಿದ ನಮ್ಮ ನೆಚ್ಚಿನ
ಸನ್ಮಾನ್ಯ
ಶ್ರೀ ಸಿದ್ದರಾಮಯ್ಯ
ರವರಿಗೆ
ನಾಡಿನ ಜನತೆಯ ಪರವಾಗಿ ತುಂಬು ಹೃದಯದ ಅಭಿನಂದನೆಗಳು
ಎಂ.ಮಹದೇವಣ್ಣ
ತಾ|| ಪಿ.ಎಲ್.ಡಿ ಬ್ಯಾಂಕ್ ಅಧ್ಯಕ್ಷರು,
ಟಿ.ನರಸೀಪುರ
ಟಿ.ಎಸ್.ಪ್ರಶಾಂತ್‌ಬಾಬು
ತಾ.ಕುರುಬರ ಸಂಘ, ಮಾ||ಅಧ್ಯಕ್ಷರು
ಟಿ.ನರಸೀಪುರ
ರವಿಕುಮಾರ್.ಆರ್.ಹೆಚ್
ವರುಣ ಬ್ಲಾಕ್ ಉಪಾಧ್ಯಕ್ಷರು
ಕೆ.ಮಹದೇವು
ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರು
ಮನ್ನೇಹುಂಡಿ ಮಹೇಶ್
ತಾ.ಕುರುಬರ ಸಂಘ, ಅಧ್ಯಕ್ಷರು
ಟಿ.ನರಸೀಪುರ
ಅನಿಲ್‌ಕುಮಾರ್
ತಾ. ಎ.ಪಿ.ಎಂ.ಸಿ ಮಾ||ಅಧ್ಯಕ್ಷರು
ಟಿ.ನರಸೀಪುರ
ಮಂಜುನಾಥ್.ಆರ್
ಗ್ರಾಮ ಪಂಚಾಯಿತಿ ಸದಸ್ಯರು
ರಂಗಸಮುದ್ರ
ಮಸ್ರೂರ್ ಅಹಮದ್
ಗ್ರಾಮ ಪಂ ಸದಸ್ಯರು ಹಾಗೂ ಮಾ ಉಪಾಧ್ಯಕ್ಷರು
ಗರ್ಗೇಶ್ವರಿ
ಪಟ್ಟೇಹುಂಡಿ ಗೋಪಾಲ್
ಗ್ರಾಮ ಪಂ, ಮಾ||ಅಧ್ಯಕ್ಷರು